and they were given food. By that time, the persons were served with food and these 25 people were offered with food which consisted of milk, bread, etc., according to the rules. This, they refused. They demanded that they should be treated as 'A' class prisoners. The Jail Officer who is in-charge of that sub-jail was not empowered to treat them as 'A' class prisoners. The only authority that could treat such prisoners as 'A' class was the trial magistrate. The jail officer therefore directed the application to the magistrate concerned. That day, they did not take any food. The next day morning, they were served with food which was cooked in the jail itself. As the jail was inadequate to accommodate the 25 persons, they were taken to the Central Jail at Bangalore. Thereafter they are being treated here and there is no complaint so far as hunger strike or whatever it is, is concerned. They are served with food cooked in the jail. The application so far about their being treated as 'A' class prisoners is pending with the Magistrate. So far as their hunger strike is concerned, there is no such strike. These are the facts that I wish to place before the House for the information of the Hon'ble Member.

PAPERS LAID ON THE TABLE.

Sri VEERENDRA PATIL (Minister for Public Works).—I beg to lay the Note on the Development of Irrigation under Major and Medium Irrigation Projects of Mysore State during I, II and III Five Year Plans, as promised in reply to starred Question No. 341 by Sri M. C. Basappa.

Member's representation.

ಶ್ರೀ ಬಿ. ಎಲ್. ಗೌಡ.—ಸ್ವಾಮಿ, ನಾನು ಮೊನ್ನೆ ದಿವಸ ಒಂದು ಕಾಲ್ ಅಟೆನ್‌ಷನ್ ನೋಟೀಸ್ ಕೊಟ್ಟಿದ್ದೆ. ಚಿತ್ರದುರ್ಗದಲ್ಲಿ ಈಗ 3 ದಿವಸಗಳಿಂದ ಕೆಲವರು ಅನ್ನ ಸತ್ಯಾಗ್ರಹ ಮಾಡುತ್ತಿದ್ದಾರೆ.

Mr. SPEAKER.—I will look into it. When did the Member send it ?

Sri B. L. GOWDA.—On Saturday, before 8-30 A.M.

Mr. SPEAKER.—I will have that paper brought.

BUDGET ESTIMATES FOR 1964-65.

Demands for Grants Nos 1, 5, 34, 35, 36, 40, 41, 52 and 54.

Sri VEERENDRA PATIL.—On the recommendtion of the Government of Mysore, I beg to move :

Demand No. 1.

"That a sum not exceeding Rs. 4,27,000 be granted to the Government to defray the charges which will come in course

(SRI VEERENDRA PATIL)

of payment during the financial year for the period ending 31st day of March, 1965, in respect of Demand No. 1."

†**Sri S. SIVAPPA** (Sravanabelgola).—On a point of order. It was agreed on the floor of the House and also by the Business Advisory Committee that the demands should be presented to the House ministry wise in accordance with the portfolios held by a Minister all of which should be discussed on a particular day. I do not know whether the Hon'ble Minister who is moving the demand is the Minister concerned with the portfolio. If so, let us know whether the portfolios have been changed. Otherwise, the Minister who is moving the demand today is not the Minister concerned with the portfolio. Are we not deviating from the procedure agreed to and followed by us so far and what are the special reasons for such departure ?

1-00 P.M.

ಶ್ರೀ ಎಸ್. ಗೋಪಾಲ ಗೌಡ.—ಈ ಸಮಯದಲ್ಲಿ ಇನ್ನೊಂದು ವಾಕ್ಯವನ್ನು ಸೇರಿಸಬೇಕು ಸ್ವಾಮಿ. ಮಾನ್ಯ ಲೋಕೋಪಯೋಗಿ ಶಾಖೆಯ ಸಚಿವರು ಮಾನ್ಯ ಮುಖ್ಯ ಮಂತ್ರಿಗಳ ಪಕ್ಕಕ್ಕೆ ದಯಮಾಡಿಸಿದ್ದಾರೆ. ಇದರ ಹಿಂದುಗಡೆ ಏನಾದರೂ ಪೋರ್ಟ್-ಫೋಲಿಯೋ ಬದಲಾವಣೆ ಮಾಡುವ ಸಂಭವವಿದೆಯೋ ಅಥವಾ ಅವರನ್ನು ಡೆಪ್ಯುಟಿ ಚೀಫ್ ಮಿನಿಸ್ಟರ್ ಮಾಡಿದ್ದಾರೆಯೋ ಏನು ಎನ್ನುವುದು ಗೊತ್ತಾಗಲಿಲ್ಲ ಸ್ವಾಮಿ.

Mr. SPEAKER.—I will deal with the Point of Order. I knew that the Leader of the Opposition had this in his mind by the way he got up and attempted to catch my eye and draw the attention of the House. I am sure, members are aware, as far as the Government is concerned there is joint responsibility. As such, I do not see anything wrong if another Minister moves demands pertaining to a particular Minister and replies to the Debates thereon. If there is any precedent contrary to this, that may be cited here, otherwise there is absolutely no doubt about it. The Hon'ble Leader of the Opposition also referred to what transpired at the Business Advisory Committee meeting. Demands have been classified Ministerywise just to fcilitate discussion.

Sri S. R. KANTHI.—Sir, I am only saying that under the rules, the Finance Minister has been defined as 'any Minister'.

Mr. SPEAKER.—I am much obliged to my esteemed friend, the Hon'ble Minister for Education, who is more acquainted with procedure than I am and who knows much better than I, I am grateful to him for drawing my attention to the particular provision in the rules. While defining the "Finance Minister", the definition means and includes any other Minister also. So, any Minister could do that. Apart from that, the Leader of the Opposition has no reason and, no basis, for contending that the Finance Minister will not come here ever for replying or participating in the Debate. The Minister for Public Works is therefore moving the Demands.

ಶ್ರೀ ಎಸ್. ಗೋಪಾಲ ಗೌಡ —ಈ ಮಾನ್ಯ ಸಭೆಯಲ್ಲಿ ಆಳುವ ಪಕ್ಷದ ಯಾರಾದರೂ ಸದಸ್ಯರು, ಸಭೆಯ ಯಾರಾದರೂ ಸದಸ್ಯರು ಬೇಡಿಕೆಗಳನ್ನು ಮಂಡಿಸಬಹುದೇ ಎನ್ನುವ ಒಂದು ಶಂಕೆ ಬಂದಿದೆ ಸ್ವಾಮಿ.

ಅಧ್ಯಕ್ಷರು.—ಅನಗತ್ಯ ಶಂಕೆಯನ್ನು ಮನಸ್ಸಿನೊಳಗೆ ಭಾವಿಸಿಕೊಳ್ಳುವವರೆಗೆ ನಾನು ಏನೂ ಮಾಡಲಿಕ್ಕೆ ಬರುವುದಿಲ್ಲ ಅವರು ತಮ್ಮ ಇಚ್ಛಾನುಸಾರ ಏನಾದರೂ ಭಾವಿಸಿಕೊಳ್ಳಬಹುದು. There is absolutely nothing wrong.

Sri S. SIVAPPA.—I am not questioning the rule. It was a condition imposed by the Members in this House itself.

Mr. SPEAKER.—If the Hon'ble Member does not understand the conditions what can I do? The division of the Demands was made ministrywise and nothing else. We are having the same. It is because the concerned Minister should be able to follow the Debate.

Sri S. NIJALINGAPPA.—The concerned Minister is answering in the other House.

DEMAND No 5.

Sri VEERENDRA PATIL.—Sir, on the recommendation of the Governor of Mysore, I beg to move:

"That a sum not exceeding Rs. 41,82,000 be granted to the Government to defray the charges which will come in course of payment during the financial year for the period ending 31st day of March 1965, in respect of 'Sales-Tax'."

DEMAND No. 34.

"That a further sum not exceeding Rs. 2,21,40,000 be granted to the Government to defray the charges which will come in course of payment during the financial year for the period ending 31st day of March 1965, in respect of 'Pensions and Other Retirement Benefits'."

DEMAND No. 35.

"That a sum not exceeding Rs. 1,73,000 be granted to the Government to defray the charges which will come in course of payment during the financial year for the period ending 1st day of March 1965, in respect of 'Territorial and Political Pensions'."

DEMAND No. 36.

"That a sum not exceeding Rs. 32,000 be granted to the Government to defray the charges which will come in course of payment during the financial year for the period ending 31st day of March 1965, in respect of 'Privy Purses and Allowances of Indian Rulers'."

(SRI VEERENDRA PATIL)

DEMAND No. 40.

" That a sum not exceeding Rs. 7,52,000 be granted to the Government to defray the charges which will come in course of payment during the financial year for the period ending 31st day of March 1965, in respect of ' Commutation of Pensions '."

DEMAND No. 41.

" That a sum not exceeding Rs. 89,16,000 be granted to the Government to defray the charges which will come in course of payment during the financial year for the period ending 31st day of March 1965, in respect of ' Other Miscellaneous Contributions and Assignments '."

DEMAND No. 52.

" That a sum not exceeding Rs. 7,52,000 be granted to the Government to defray the charges which will come in course of payment during the financial year for the period ending 31st day of March 1965, in respect of ' Payment of Commuted Value of Pensions '."

DEMAND No. 54.

" That a sum not exceeding Rs. 10,43,99,000 be granted to the Government to defray the charges which will come in course of payment during the financial year for the period ending 31st day of March 1965, in respect of ' Loans and Advances by State and Union Territory Governments '."

Mr. SPEAKER.—Motion moved :

" That a sum not exceeding Rs. 4,27,000 be granted to the Government to defray the charges which will come in course of payment during the financial year for the period ending 31st day of March 1965, in respect of ' Taxes on Income other than Corporation Tax '."

The other Demands ; namely Demands Nos. 5, 34, 35, 36, 40, 41, 52 and 54 which have been moved, are also before the House. The cut-motions are also before the House for discussion.

† ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಸಭಾಪತಿಯವರೇ, ತೆರಿಗೆಗಳಿಗೆ ಸಂಬಂಧಪಟ್ಟ ಐದಾರು ಬೇಡಿಕೆಗಳನ್ನು ಹಣಕಾಸಿನ ಸಚಿವರು ಸಭೆಯ ಮುಂದೆ ಇಟ್ಟಿದ್ದಾರೆ. ಮೊದಲನೆಯದಾಗಿ ನಾನು ಅಗ್ರಿಕಲ್ಚರಲ್ ಇನ್‌ಕಂ-ಟ್ಯಾಕ್ಸ್‌ಗೆ ಸಂಬಂಧಪಟ್ಟ ಬೇಡಿಕೆಯಮೇಲೆ ಒಂದು ವಿಷಯವನ್ನು ಮಾನ್ಯ ಸಚಿವರಲ್ಲಿ ತರಲಿಚ್ಛಿಸುತ್ತೇನೆ. ಈ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಭೂಮಿಯಿಂದ ಬಂದಂಥ ಆದಾಯದಮೇಲೆ ತೆರಿಗೆಯನ್ನು ವಸೂಲ್ಮಾಡುವುದಕ್ಕೆ ಸಂಬಂಧಪಟ್ಟದ್ದಾಗಿದೆ. ಇದು ಅಷ್ಟಾಗಿ ಶಾಸ್ತ್ರೀಯವಾಗಿಲ್ಲ. ನಾವು ಇವತ್ತಿನ ದಿವಸ ಭೂಮಿಯಮೇಲೆ ಎರಡು ತರಹ ಕಂದಾಯವನ್ನು ವಸೂಲ್ಮಾಡುತ್ತಿದ್ದೇವೆ. ಒಂದು ಭೂಕಂದಾಯ. ಸರ್ವೇ ಸಾಮಾನ್ಯವಾಗಿ ಭೂಮಿಯನ್ನು ತರಿ,

ಬಾಗಾಯಿತು, ಖುಷ್ಕಿ ಎಂದು ಆಯಾ ಭೂಮಿಯ ಭೂಗುಣ ಮತ್ತು ಫಲದ ಗುಣವನ್ನು ಅನುಸರಿಸಿ ಕಂದಾಯವನ್ನು ವಸೂಲ್ಮಾಡುತ್ತಿದ್ದೇವೆ. ಅದೇ ಭೂಮಿಯಿಂದ ಉತ್ಪತ್ತಿಯಾದ ವಸ್ತುಗಳ ಮೇಲೆ ಅಗ್ರಿಕಲ್ಚರಲ್ ಇನ್‌ಕಂ-ಟ್ಯಾಕ್ಸ್ ಕೂಡ ವಸೂಲ್ಮಾಡುತ್ತಿದ್ದೇವೆ. ಹೀಗೆ ಒಂದೇ ಮೂಲದಿಂದ, ಬೇಸಾಯದಿಂದ ಬಂದ ಉತ್ಪತ್ತಿಯ ಮೇಲೆ ಎರಡು ತೆರಿಗೆಗಳನ್ನು ವಸೂಲು ಮಾಡುವುದು ಶಾಸ್ತ್ರೀಯವಲ್ಲ. ಭೂಕಂದಾಯವನ್ನು ವಜಾಮಾಡಿ ಬೇಸಾಯದಿಂದ ಬಂದ ಉತ್ಪತ್ತಿಯಮೇಲೆ ಶಾಸ್ತ್ರೀಯವಾಗಿ ಸ್ಲ್ಯಾಬ್‌ಮೇಲೆ ತೆರಿಗೆ ವಸೂಲು ಮಾಡುವುದು ಒಳ್ಳೆಯದು. ಹಾಗಿಲ್ಲದೆ ಭೂಕಂದಾಯವನ್ನು ವಸೂಲು ಮಾಡಬೇಕೆಂದರೆ, ಹತ್ತು ಸಾವಿರ ರೂಪಾಯಿ ಉತ್ಪತ್ತಿ ಅಥವಾ ಯಾವುದಾದರೊಂದು ಮಿತಿಯನ್ನು ಗೊತ್ತುಮಾಡಿ ಅದಕ್ಕಿಂತ ಕಡಮೆ ಉತ್ಪನ್ನವಿರುವ ಭೂಮಿಗೆ ಕಡಮೆ ಕಂದಾಯ ಹೆಚ್ಚಾಗಿರುವುದಕ್ಕೆ ಹೆಚ್ಚು ಕಂದಾಯ, ಹೀಗೆ ಒಂದು ಮಿತಿಯನ್ನನುಸರಿಸಿ, ಸ್ಲ್ಯಾಬ್ ಪದ್ಧತಿಯ ಮೇಲೆ ಭೂಕಂದಾಯವನ್ನು ವಿಧಿಸುವುದಕ್ಕೆ ಏರ್ಪಾಡು ಮಾಡಬೇಕು. ಇದು ಬಿಟ್ಟು ಭೂಕಂದಾಯ ಮತ್ತು ವ್ಯವಸಾಯ ಉತ್ಪನ್ನ ತೆರಿಗೆ ಎಂದು ಒಂದೇ ಭೂಮಿಯಮೇಲೆ ಎರಡನ್ನು ವಿಧಿಸುವುದು ಶಾಸ್ತ್ರೀಯವಲ್ಲವೆಂದು ಆರ್ಥಿಕ ನಿಪುಣರು ಅಭಿಪ್ರಾಯ ಪಟ್ಟಿದ್ದಾರೆ. ಆದುದರಿಂದ ಸರಕಾರ ಈ ಸಲಹೆಯನ್ನು ಪರಿಶೀಲಿಸಿ ಎರಡು ತೆರಿಗೆಗಳ ಬದಲು ಒಂದನ್ನು ಮಾಡಬೇಕು. ಅನ್‌ಎಕನಾಮಿಕ್ ಹೋಲ್ಡಿಂಗ್ಸ್ ಹೆಚ್ಚಾಗಬಾರದು; ಆದರೂ ಭೂ ವಿಸ್ತೀರ್ಣದಮೇಲೆ ಕಂದಾಯ ವಿಧಿಸುವುದು ಒಳ್ಳೆಯದಲ್ಲವೆಂದು ನನ್ನ ಸಲಹೆ. ನಮ್ಮಲ್ಲಿ ವಿಧಿಸಿ ರುವ ವ್ಯವಸಾಯೋತ್ಪನ್ನ ತೆರಿಗೆ ಶಾಸ್ತ್ರೀಯವಲ್ಲ. ಮದರಾಸು ಮತ್ತು ಕೇರಳ ಪ್ರಾಂತಗಳಲ್ಲಿರು ವುದರ ಜೊತೆಗೆ ಹೋಲಿಸಿದರೆ ನಮ್ಮ ಕಾನೂನಿನಲ್ಲಿ ಶಾಸ್ತ್ರೀಯ ನಿಯಮವಿಲ್ಲವೆಂದು ಹೇಳುತ್ತೇನೆ. ದೊಡ್ಡ ದೊಡ್ಡ ಎಸ್ಟೇಟುಗಳಿರುವ ಕಡೆ ವಸೂಲು ಮಾಡುತ್ತಿದ್ದಾರೆ, ಅವುಗಳ ಮಾಲೀಕರಿಗೆ ತೆರಿಗೆ ಹಾಕುವುದಕ್ಕಾಗಿ ಇದನ್ನು ವಸೂಲು ಮಾಡುತ್ತಿದ್ದಾರೆ. ಇದರಿಂದ ಜಾಸ್ತಿ ವಸೂಲಾದರೆ ಸಂತೋಷ; ಆದರೆ ವ್ಯವಸಾಯೋತ್ಪನ್ನ ತೆರಿಗೆ ಹೆಚ್ಚು ವಸೂಲಾಗುವುದಿಲ್ಲ. ಅಲ್ಲದೆ ಕಾಫಿ, ಟೀ, ರಬ್ಬರ್ ಮುಂತಾದ ಡಾಲರ್‌ಗಳಿಸುವ ಬೆಳೆಗಳಿಗೆ ಧಕ್ಕೆ ಬರುತ್ತದೆ. ಈ ಬಗ್ಗೆ ಅನೇಕರು ಮನವಿ ಗಳನ್ನು ಕೊಟ್ಟಿದ್ದಾರೆ. ವ್ಯವಸಾಯ ಕೈಗಾರಿಕೆಗೆ ಧಕ್ಕೆ ಬರಬಾರದು. ಯಾವ ರೀತಿ ಮಾಡಿದರೆ ದೇಶಕ್ಕೆ ಉತ್ಪತ್ತಿ ಹೆಚ್ಚು ಬರುತ್ತದೆಂಬುದನ್ನು ನೋಡಬೇಕು. ಕಾಫೀ, ಟೀ, ರಬ್ಬರ್ ಇವುಗಳನ್ನು ಹೆಚ್ಚು ಬೆಳೆದರೆ ಇವು ಪರದೇಶಗಳಿಗೆ ಹೋಗಿ, ನಮಗೆ ಡಾಲರ್ ಹೆಚ್ಚು ಬರುತ್ತದೆಂದು ಹೇಳಿದ್ದಾರೆ. ಆದುದರಿಂದ ಇದನ್ನು ಏರ್ಪಾಡು ಮಾಡುವುದು ಸೂಕ್ತ.

ಮಾರಾಟ ತೆರಿಗೆಯ ವಿಚಾರದಲ್ಲಿ ಸರಕಾರದ ನೀತಿ ಏನಿದೆಯೆಂದರೆ, ನಮ್ಮ ದೇಶದಲ್ಲಿ ನಮ್ಮ ಜನರೇ ಅಧಿಕಾರಕ್ಕೆ ಬಂದಮೇಲೆ ತೆರಿಗೆಗಳನ್ನು ಹೆಚ್ಚಿಸುವ ಒಂದೇ ನೀತಿಯನ್ನನುಸರಿಸಿಕೊಂಡು ಬಂದಿದ್ದಾರೆ. ಶಾಸ್ತ್ರೀಯವಾಗಿ ತೆರಿಗೆ ಹಾಕುವುದಕ್ಕೆ ಪ್ರಯತ್ನ ಮಾಡಿಲ್ಲ. ದೇಶದ ತೆರಿಗೆಗಳನ್ನು ಹೊರುವ ಶಕ್ತಿ ಎಷ್ಟುಮಟ್ಟಿಗಿದೆ ಎನ್ನುವುದನ್ನು ಆಲೋಚನೆ ಮಾಡಿಲ್ಲ. ನಮ್ಮ ದಿನಚರಿ ಉಪ ಯೋಗದ ಆಹಾರ ಪದಾರ್ಥಗಳಮೇಲೆ ತೆರಿಗೆಯನ್ನು ಹೆಚ್ಚು ಮಾಡಿದ್ದಾರೆ. ಯಾವಾಗಲೂ ಇಲ್ಲ ದಿದ್ದುದನ್ನು ಅಕ್ಕಿ, ರಾಗಿ ಇತ್ಯಾದಿ ಆಹಾರ ಧಾನ್ಯಗಳಮೇಲೆ ತೆರಿಗೆ ಹಾಕಿದ್ದಾರೆ. ಇದರ ಪರಿ ಣಾಮವಾಗಿ ವಿಷವೇರಿದಂತೆ ಬೆಲೆಗಳೇರುತ್ತಿವೆ. ಆಹಾರ ಪದಾರ್ಥಗಳ ಬೆಲೆಗಳನ್ನು ಕಡಮೆ ಮಾಡಲು ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಜನತೆ ಏಕಾಭಿಪ್ರಾಯವನ್ನು ವ್ಯಕ್ತಪಡಿಸುತ್ತಿ ದ್ದರೂ ಅದಕ್ಕೆ ಗಮನ ಕೊಡದೆ ಆಹಾರ ಪದಾರ್ಥಗಳಮೇಲೆ ಮಲ್ಟಿಪಾಯಿಂಟ್ ತೆರಿಗೆಯನ್ನು ಏಪ್ರಿಲ್ ಒಂದರಿಂದ ಜಾರಿ ಮಾಡಿದ್ದಾರೆ. ಆಹಾರ ಪದಾರ್ಥಗಳ ಬೆಲೆ ಹೆಚ್ಚುತ್ತಿರುವುದರ ಮೇಲೆ ಸರಕಾರಕ್ಕೆ ಕಣ್ಣಿಲ್ಲವೆಂದು ಕಾಣುತ್ತದೆ, ಅಥವಾ ಕಂಡೂ ಕಾಣದಿರುವಂತಿದ್ದಾರೆ. ಕಾನೂನಿನ ಚೌಕಟ್ಟಿನಲ್ಲೇ ಬರಬೇಕಾದ ಕೋಟ್ಯಾಂತರ ರೂಪಾಯಿ ತೆರಿಗೆ ಬರುತ್ತಿಲ್ಲವೆಂದು ಹಣಕಾಸಿನ ಸಚಿ ವರು ಹೇಳಿದ್ದಾರೆ. ಎರಡು ಮೂರು ಕೋಟಿ ರೂಪಾಯಿ ಬಾಕಿ ಇರುವುದನ್ನು ವಸೂಲು ಮಾಡ ಬಹುದೆಂದು ಹೇಳಿದ್ದಾರೆ. ಸರಕಾರ ಕಟ್ಟುನಿಟ್ಟಾಗಿ ಈಗಿರುವ ತೆರಿಗೆ ಬಾಕಿ ನಿಂತಿರುವುದನ್ನು ವಸೂಲು ಮಾಡಿದರೆ ಒಂದೆರಡು ಕೋಟಿ ರೂಪಾಯಿಗಳನ್ನು ವಸೂಲು ಮಾಡಿದರೆ ಸಾಕು; ಇದಕ್ಕೆ ಅವಕಾಶವಿರುವಾಗ ಹೊಸದಾಗಿ ಆಹಾರ ಪದಾರ್ಥಗಳ ಮೇಲೆ ತೆರಿಗೆ ಹಾಕುವುದರಿಂದ ದುಷ್ಪರಿ ಣಾಮವಾಗುತ್ತದೆ. ಇದನ್ನು ಸರಕಾರ ತೀವ್ರವಾಗಿ ಆಲೋಚನೆ ಮಾಡಬೇಕು. ಆಹಾರ ಪದಾ ರ್ಥಗಳಮೇಲೆ ಹಾಕಿರುವ ತೆರಿಗೆಯನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಒತ್ತಾಯಪೂರ್ವಕ ವಾಗಿ ಹೇಳುತ್ತಿದ್ದೇನೆ.

ಇನ್ನು ನಮ್ಮ ದೇಶದಲ್ಲಿ ಸಣ್ಣಪುಟ್ಟ ವ್ಯಾಪಾರಸ್ಥರು ಅನೇಕರಿದ್ದಾರೆ. ತೆರಿಗೆ ವಸೂಲು ಮಾಡುವ ಅಧಿಕಾರಿಗಳಿಂದ ಅನೇಕ ರೀತಿಯಲ್ಲಿ ಅವರಿಗೆ ಹಿಂಸೆಯಾಗುತ್ತಿದೆ. ಈ ಕೂಗು ಎಲ್ಲ ಕಡೆಯೂ ಇದೆ. ತೆರಿಗೆ ಕೊಡುವ ವ್ಯಕ್ತಿ ಸಣ್ಣವನಾಗಲೀ ದೊಡ್ಡ ವ್ಯಾಪಾರಸ್ಥನಾಗಲೀ ಗೌರವಸ್ಥ ನಾಗಿರುತ್ತಾನೆ. ಅವರಿಂದ ವಸೂಲು ಮಾಡುವಾಗ ಗೌರವದಿಂದ ವಸೂಲು ಮಾಡುವ ಕ್ರಮವನ್ನು

(ಶ್ರೀ ಎಸ್. ಶಿವಪ್ಪ)

ಅಧಿಕಾರಿಗಳು ಅನುಸರಿಸಬೇಕಾಗಿದೆ. ಸಾಹೇಬರ ಅಧಿಕಾರವನ್ನು ಅವರು ಚಲಾಯಿಸಬಾರದು. ಹೆದರಿಸಿ, ಬೆದರಿಸಿ ವಸೂಲು ಮಾಡುವ ಹಣದಲ್ಲಿ ಸರಕಾರಿ ಖಜಾನೆಗೆ ಬರುವುದರಲ್ಲಿ ಕೆಲವು ಭಾಗ ಆ ಅಧಿಕಾರಿಗಳ ಜೇಬಿಗೆ ಹೋಗುವ ಸಂಭವವೂ ಇದೆ. ನಾನು ಅನೇಕ ವರ್ತಕರ ಗೋಳನ್ನು ಕೇಳಿದ್ದೇನೆ. ಅವರು ಹೇಳುವುದರಲ್ಲಿ ನೂರಕ್ಕೆ ನೂರು ನಿಜವಿದೆ. ಕೆಲವು ಸಂದರ್ಭಗಳಲ್ಲಿ ಸ್ವಲ್ಪ ಉತ್ಪ್ರೇಕ್ಷೆ ಇರಬಹುದು. ಒಳ್ಳೆಯ ಅಧಿಕಾರಿ ಕಟ್ಟುನಿಟ್ಟಾಗಿದ್ದರೆ ಅವನಮೇಲೆ ದೂರು ಬರಬಹುದು. ಆದರೆ ಮುಕ್ಕಾಲುಭಾಗ ಅಧಿಕಾರಿಗಳು ಜಬರದಸ್ತು ಮಾಡುವ ಸಂಭವವಿದೆ. ಅದರಲ್ಲಿಯೂ ವ್ಯವಸಾಯೋತ್ಪನ್ನ ತೆರಿಗೆಯನ್ನು ರೆವಿನ್ಯೂ ಅಧಿಕಾರಿಗಳು ವಸೂಲು ಮಾಡುತ್ತಾರೆ. ಇವರು ಹತ್ತು ಎಕರೆಗಿಂತ ಕಡಮೆ ಇರುವವರಿಗೂ ನೋಟೀಸ್ ಕೊಡುತ್ತಾರೆ. ಡಿಕ್ಲರೇಷನ್ ಕೊಡಬೇಕೆಂದು ಕೇಳುತ್ತಾರೆ. ಇದರಿಂದ ರೈತ ತನ್ನ ಕೆಲಸವನ್ನು ಬಿಟ್ಟು ತನಗೆ ಇಷ್ಟು ಉತ್ಪತ್ತಿ ಇದೆ ಎಂಬ ಬಗ್ಗೆ ಗುಮಾಸ್ತರನ್ನಿಟ್ಟು ಲೆಕ್ಕ ಬರೆಸಬೇಕಾಗಿದೆ. ಇದು ಅವನಿಗೆ ಹೇಗೆ ಸಾಧ್ಯ? ಈ ವಿಚಾರದಲ್ಲಿ ಸರಕಾರದವರು ತಮ್ಮ ಅಧಿಕಾರಿಗಳಿಗೆ ಸರಿಯಾದ ಆದೇಶ ಕೊಟ್ಟು ಸಣ್ಣಪುಟ್ಟ ವ್ಯವಸಾಯಗಾರರಿಗೆ ಕಿರುಕುಳ ಕೊಡುವುದನ್ನು ತಪ್ಪಿಸಬೇಕಾಗಿದೆ. ಸಣ್ಣ ಪುಟ್ಟ ರೈತರು ಲೆಕ್ಕ ಒಪ್ಪಿಸುವುದಕ್ಕೆ ಸಾಧ್ಯವಿಲ್ಲ. ಅವರಿಂದ ಹತ್ತು ಇಪ್ಪತ್ತು ರೂಪಾಯಿ ಲಂಚ ವಸೂಲು ಮಾಡಿಕೊಂಡು ಬಿಟ್ಟುಬಿಡುತ್ತಾನೆ. ಇದು ಎಲ್ಲ ಕಡೆಯೂ ಇದೆ. ಆದುದರಿಂದ ರೆವಿನ್ಯೂ ಅಧಿಕಾರಿಗಳು ಲೆಕ್ಕಪತ್ರ ಕೊಡಬೇಕೆಂದು ರೈತರಿಗೆ ನೋಟೀಸ್ ಕೊಡುವುದರಲ್ಲಿ ಎಚ್ಚರಿಕೆಯಿಂದ ವರ್ತಿಸಬೇಕೆಂದು ಹೇಳುತ್ತೇನೆ.

ಸೇಲ್ಸ್‌ಟ್ಯಾಕ್ಸ್ ವಿಷಯದಲ್ಲಿ, ಅಗತ್ಯ ವಸ್ತುಗಳಮೇಲೆ ತೆರಿಗೆ ವಿಧಿಸುವುದು ಶಾಸ್ತ್ರೀಯವಲ್ಲ. ಒಂದು ಶಾಸ್ತ್ರೀಯ ನಿಯಮವನ್ನನುಸರಿಸಲು ಆಮೂಲಾಗ್ರವಾಗಿ ಪರಿಶೀಲನೆಮಾಡುವುದು ಅತ್ಯಾವಶ್ಯಕವೆಂದು ಹೇಳುತ್ತಿದ್ದೇನೆ. ಅಗತ್ಯ ವಸ್ತುಗಳ ಬೆಲೆ ಏರುತ್ತಿರುವಾಗ ತೆರಿಗೆ ವಸೂಲು ಮಾಡುವುದರ ಮೇಲೆಮಾತ್ರ ಗಮನದಲ್ಲಿಟ್ಟುಕೊಂಡರೆ ಸಾಲದು. ತೆರಿಗೆಯಿಂದ ದೇಶದಲ್ಲಿರುವ ಕೈಗಾರಿಕೆ ಮತ್ತು ಆಹಾರೋತ್ಪನ್ನದ ಮೇಲೆಎಷ್ಟುಮಟ್ಟಿನ ಪರಿಣಾಮವಾಗುತ್ತದೆ ಎನ್ನುವುದನ್ನು ನೋಡಬೇಕು. ಯಾವ ತೆರಿಗೆಯಾಗಲಿ ಹೆಚ್ಚಿನ ರೂಪದಲ್ಲಿ ಸರಕಾರದ ಬೊಕ್ಕಸಕ್ಕೆ ಬರಬೇಕಾಗಿದ್ದರೆ ತೆರಿಗೆ ಕೊಡತಕ್ಕಂಥವರ ಶಕ್ತಿ ಕೂಡ ಬೆಳೆಯುತ್ತಲೇ ಇರಬೇಕು. ಅಂದರೆ ಅದು ಸಾಧ್ಯವಾಗುತ್ತದೆ. ಚಿನ್ನದ ಮೊಟ್ಟೆ ಕೊಡುವ ಹಕ್ಕಿಯನ್ನು ಚಿನ್ನದ ಮೊಟ್ಟೆ ದೊರೆಯುತ್ತದೆಂದು ಅದನ್ನು ಕೊಲ್ಲಬಾರದು. ಅದು ಚೆನ್ನಾಗಿ ಬೆಳೆಯಬೇಕು. ಅಂದರೆ ಹೆಚ್ಚು ಚಿನ್ನದ ಮೊಟ್ಟೆ ದೊರೆಯುತ್ತದೆ. ಅದರಂತೆ ತೆರಿಗೆ ಕೊಡತಕ್ಕವರು ಚೆನ್ನಾಗಿ ಬೆಳೆಯಬೇಕು. ತೆರಿಗೆ ಭಾರದಿಂದ ತೆರಿಗೆ ಕೊಡತಕ್ಕಂಥವನ್ನು ಕೊಲ್ಲಬಾರದು. ಆದುದರಿಂದ ತೆರಿಗೆ ನೀತಿ ವಿಮರ್ಶೆ ಮಾಡಿ ಅದು ಶಾಸ್ತ್ರೀಯವಾಗಿ ಇರುವ ಹಾಗೆ ಮಾಡಬೇಕು. ಈ ಡಿಮ್ಯಾಂಡ್ ಸಭೆಯ ಮುಂದೆ ಚರ್ಚೆಗೆ ಬಂದ ಕಾಲದಲ್ಲಿ ಸರಕಾರದ ಮುಂದೆ ಈ ಸಲಹೆ ಇಡುತ್ತೇನೆ.

ಇನ್ನು ಕಾಂಟ್ರಿಬ್ಯೂಷನ್ ವಿಚಾರ ಹೇಳುವುದಾದರೆ ವಿಲೇಜ್ ಪಂಚಾಯಿತಿ ಸಂಸ್ಥೆಗಳಿಗೆ ಕೊಡುವುದಕ್ಕಾಗಿ ಎರಡು ಕೋಟಿ ರೂಪಾಯಿ ಹಣ ಈ ಡಿಮ್ಯಾಂಡಿನಲ್ಲಿ ಇಟ್ಟಿದ್ದೀರಿ. ಕಾಂಟ್ರಿಬ್ಯೂಷನ್ ಕೊಡುವ ನೀತಿಯಲ್ಲಿ ಯಾವ ತರಹದ ತಾರತಮ್ಯ ಇರಬಾರದು. ಅನೇಕ ಮುನಿಸಿಪಾಲ್ಟಿಗಳ ಆರ್ಥಿಕ ಸ್ಥಿತಿ ಕೆಟ್ಟು ಹೋಗಿ ಹೀನ ಸ್ಥಿತಿಯಲ್ಲಿವೆ. ಅವುಗಳಿಗೆ ಕೊಡತಕ್ಕಂಥ ಸಹಾಯ ಸರಿಯಾಗಿ ಕೊಡುತ್ತಿಲ್ಲ. ರಾಜಕೀಯ ಪ್ರಭಾವಕ್ಕೆ ಒಳಗಾಗಿ ಹಣ ಹಂಚುತ್ತಿದ್ದೀರಿ. ಮುನಸಿಪಾಲ್ಟಿಗಳು ಅಭಿವೃದ್ಧಿ ಹೊಂದಬೇಕು ಅನುಕೂಲವಾಗಬೇಕು ಎಂಬ ಉದ್ದೇಶ ಇಟ್ಟುಕೊಂಡು ಅವುಗಳ ಶಕ್ತಿ ಹೆಚ್ಚಿಸುವುದಕ್ಕೆ ಹಣ ಕೊಡಬೇಕು. ಯಾವ ರೀತಿಯಿಂದಲೂ ರಾಜಕೀಯಕ್ಕೆ ಒಳಗಾಗಿ ಹಣ ಕೊಡಬಾರದು. ಏಕೆಂದರೆ ಮುನಿಸಿಪಾಲ್ಟಿಗಳು ನಾಗರೀಕರಿಗೆ ನೀರು ಒದಗಿಸುವ ವ್ಯವಸ್ಥೆ ಮಾಡಿ ಅನುಕೂಲಮಾಡಿ ಕೊಡಬೇಕಾಗುತ್ತದೆ. ನೀರು ಎಲ್ಲರಿಗೂ ಬೇಕು. ಕುಡಿಯುವ ನೀರು ಒದಗಿಸುವುದು ಒಂದು ಪವಿತ್ರವಾದ ಕರ್ತವ್ಯ. ಅದರಂತೆ ವಿದ್ಯುತ್‌ಚ್ಛಕ್ತಿ ಒದಗಿಸಲು ಸಹ ದುಡ್ಡು ಬೇಕಾಗುತ್ತದೆ. ಎಲ್ಲರಿಗೂ ಒಂದೇ ರೀತಿ ಹಣ ಕೊಡಬೇಕು. ಒಂದು ಕಣ್ಣಿಗೆ ಬೆಣ್ಣೆ ಇನ್ನೊಂದು ಕಣ್ಣಿಗೆ ಸುಣ್ಣ ಎಂದು ಹೇಳುವ ಹಾಗೆ ಅಂಥ ನೀತಿ ಅನುಸರಿಸುತ್ತಿದ್ದೀರಿ. ಹೀಗೆ ತಾರತಮ್ಯ ನೀತಿ ಅನುಸರಿಸಬಾರದು.

ಇನ್ನು ಪೆನ್‌ಷನ್ ನೀತಿ ಬಗ್ಗೆ ಹೇಳುವುದಾದರೆ ಸರಕಾರ ತನ್ನ ನೀತಿ ಬದಲಿಸಬೇಕು. 30 ವರ್ಷ ಕಾಲ ಸರಕಾರದ ಅಚಲ ಸೇವೆ ಮಾಡಿದನಂತರ ಅಂಥ ಮನುಷ್ಯನಿಗೆ ಸಕಾಲದಲ್ಲಿ ಪೆನ್‌ಷನ್ ಕೊಡುವ ವ್ಯವಸ್ಥೆ ಇಲ್ಲ. ಒಂದೆರಡು ವರ್ಷ ಕೆಲವು ಸಲ ನಾಲ್ಕು ವರ್ಷದವರೆಗೆ ಪೆನ್‌ಷನಿಗಾಗಿ ಕಾಯಬೇಕಾಗುತ್ತದೆ. ಅಂಥ ಅನೇಕ ಸಂದರ್ಭಗಳು ಇವೆ. ಒಂದು ತಿಂಗಳು ನಂತರ ಬರತಕ್ಕ ಸಂಬಳದ ಹಣ ಬಾರದೇ ಇದ್ದರೆ ಅದರಲ್ಲಿಯೂ ಪೆನ್‌ಷನ್ ಸಂಬಳ ಅರ್ಧದಷ್ಟು ಅದೂ

ಬಾರದಿದ್ದಾಗ ಸಂಸಾರ ಹೇಗೆ ನಡೆಸಬೇಕು ? ಸಕಾಲದಲ್ಲಿ ಕೊಡದೆ ಇರುವುದು ಸರಿಯಲ್ಲ. ರಿಟೈರ್ ಆಗುವುದಕ್ಕೆ ಮುಂಚೆಯೇ ಎಲ್ಲವನ್ನೂ ನಿಷ್ಕರ್ಷೆಮಾಡಿ ರಿಟೈರ್ ಆದ ಮಾರನೇ ದಿನ ಪೆನ್‌ಷನ್ ಕೊಡತಕ್ಕಂಥ ವ್ಯವಸ್ಥೆ ಮಾಡಬೇಕಾದುದು ಬಹಳ ಅಗತ್ಯ. ಏಕೆಂದರೆ ತಡವಾಗುವುದರಿಂದ ಅನೇಕರು ಬಹಳ ಕಷ್ಟಪಡುತ್ತಿದ್ದಾರೆ. ಆದುದರಿಂದ ಪೆನ್‌ಷನ್ ಇಲಾಖೆ ಚುರುಕಾಗಿ ಕೆಲಸ ಮಾಡಬೇಕು ಎಂದು ಈ ಸಂದರ್ಭದಲ್ಲಿ ನಾನು ಸೂಚನೆ ಮಾಡಲು ಬಯಸುತ್ತೇನೆ. ಅನೇಕ ಸಲ ಯಾರಾದರೂ ಅಧಿಕಾರಿಗಳು ಒಂದು ಕ್ವೆರಿ ಹಾಕಿಬಿಟ್ಟು ವರ್ಷಗಟ್ಟಲೆ ಪೇಪರ್ಸ್ ಒಂದುಕಡೆ ಬೀಳುತ್ತವೆ. ಕ್ವೆರಿ ಹಾಕುವುದರಲ್ಲಿ ಅವರು ಬಹಳ ನಿಪುಣರು. ಇದರಿಂದ ಬಹಳ ತೊಂದರೆಯಾಗುತ್ತದೆ. ಈ ಕಷ್ಟ ತಪ್ಪಿಸಬೇಕು ಎಂದು ಹೇಳುತ್ತೇನೆ. ಈ ತೊಂದರೆ ನಿವಾರಣೆ ಮಾಡಿ ಶೀಘ್ರವಾಗಿ ಪೆನ್‌ಷನ್ ದೊರೆಯುವ ಸೌಲಭ್ಯ ಮಾಡಲಿಕ್ಕೇಬೇಕು.

ಇನ್ನು ರಾಜ ಮನೆತನದವರಿಗೆ ದೊಡ್ಡ ದೊಡ್ಡ ವಂಶಸ್ಥರಿಗೆ, ಪಾಳೆಯಗಾರರಿಗೆ ವಂಶಪಾರಂಪರ್ಯವಾಗಿ ಪೆನ್‌ಷನ್ ಕೊಡುವ ಒಂದು ಪದ್ಧತಿ ಇದೆ. ಕಾಂಗ್ರೆಸ್ ಸರಕಾರ ಸಮಾಜವಾದದ ದೊಡ್ಡ ಘೋಷಣೆ ಮಾಡಿದ್ದಾರೆ. ಆದರೂ ಕೂಡ ವಂಶಪಾರಂಪರ್ಯವಾಗಿ ಇಂಥ ಆಶ್ರಯ ಧನ ಕೊಡುತ್ತಾ ಬರುತ್ತಿದ್ದೀರಿ. ಇದು ಎಂತಹ ಸಮಾಜವಾದ ಎಂದು ಕೇಳುತ್ತೇನೆ. ನಿಮ್ಮ ಸಮಾಜವಾದ ನೋಡಿದರೆ ನನಗೆ ನಗು ಬರುತ್ತದೆ. ಗತ ವೈಭವದ ಸಲುವಾಗಿ ತಲೆತಲಾಂತರ ಪೆನ್‌ಷನ್ ಕೊಡತಕ್ಕಂಥಾದ್ದು ಖಂಡಿತವಾಗಿ ಹೋಗಬೇಕು. ಜಮೀನುದಾರಿ ಸಿಸ್ಟಂ ಹೋಗಬೇಕು, ದೊಡ್ಡ ಕ್ರಾಂತಿ ಮಾಡುತ್ತೇವೆ ಎಂಬ ಮಾತನ್ನು ಆಡುತ್ತಿದ್ದೀರಿ. ಆದರೆ ವಂಶಪಾರಂಪರ್ಯವಾಗಿ ಕೊಡತಕ್ಕ ಪೆನ್‌ಷನ್ ಪದ್ಧತಿ ಇದು ನಿಮ್ಮ ಯಾವ ನೀತಿ ? ಇದು ಯಾವ ರಾಜಕೀಯ ವಾದ ? ನಿಮ್ಮ ನೀತಿಗೂ ಸಮಾಜವಾದಕ್ಕೂ ಅಜ ಗಜಾಂತರ ಅಂತರ ಇದೆ. ಆದುದರಿಂದ ನಿಜವಾದ ಸಮಾಜವಾದ ಕಾರ್ಯಗತ ಮಾಡಬೇಕು ಮತ್ತು ಅದಕ್ಕಾಗಿ ಕೂಡಲೆ ಇಂಥ ಪೆನ್‌ಷನ್ ಕೊಡತಕ್ಕದ್ದನ್ನು ನಿಲ್ಲಿಸಿ ಅವರಿಗೆ ಬೇರೆ ಜೀವನ ಸೌಕರ್ಯ ಕಲ್ಪಿಸಿಕೊಡುವುದಕ್ಕೆ ಭೂಮಿ ಕೊಟ್ಟು ವ್ಯವಸಾಯ ಮಾಡಲು ಅವಕಾಶ ಕಲ್ಪಿಸಿಕೊಡಬೇಕು. ವಿಶ್ರಾಂತಿ ವೇತನ ಕೊಡುವುದು ಸರಿಯಲ್ಲ. ಎಷ್ಟು ಹಣ ಕೊಡುತ್ತೀರಿ ಅದು ಮುಖ್ಯವಲ್ಲ. ಅದು ಒಂದು ರೂಪಾಯಿ ಇರಬಹುದು. ಹಣ ಮುಖ್ಯವಲ್ಲ. ಆದರೆ ಅದರ ಹಿಂದೆ ಇರತಕ್ಕಂಥ ನೀತಿ ಖಂಡಿತವಾಗಿ ಒಳ್ಳೆಯದಲ್ಲ ಎಂದು ಸರಕಾರಕ್ಕೆ ಈ ಸಂದರ್ಭದಲ್ಲ ಹೇಳುತ್ತೇನೆ.

ಸ್ವಾಮಿ, ತೆರಿಗೆಗಳಿಗೆ ಸಂಬಂಧಪಟ್ಟ ಈ ಡಿಮ್ಯಾಂಡುಗಳ ಮೇಲೆ ಮಾತನಾಡುತ್ತಾ ಒಂದು ಮಾತು ಹೇಳಲು ಬಯಸುತ್ತೇನೆ. ಸರಕಾರದ ತೆರಿಗೆ ನೀತಿ ಮಾರ್ಪಾಡಾಗಬೇಕು. ಏಕೆಂದರೆ ಎಷ್ಟು ತೆರಿಗೆ ಭಾರ ಹಾಕಬೇಕೋ ಅದನ್ನು ಮೀರಿ ಇಂದು ತೆರಿಗೆ ಭಾರ ಜನತೆಯ ಮೇಲೆ ಜಾಸ್ತಿಯಾಗಿ ಹಾಕುತ್ತಿದ್ದೀರಿ. ಜನತೆ ದೇಶದ ಬೆನ್ನುಮೂಳೆ ಇದ್ದ ಹಾಗೆ. ಬೆನ್ನುಮೂಳೆ ಗಟ್ಟಿಯಾಗಿರಬೇಕು. ಹೆಚ್ಚು ತೆರಿಗೆ ಭಾರ ಹಾಕಿ ಜನತೆಯ ಬೆನ್ನು ಮೂಳೆ ಮುರಿಯಬಾರದು. ತೆರಿಗೆ ಭಾರ ಹೊರುವುದಕ್ಕೆ ಶಕ್ತಿ ಇರಬೇಕು. ಅದನ್ನು ಕಾಪಾಡಿಕೊಂಡು ಬರಬೇಕು? ಸರಕಾರದ ಇಂದಿನ ತೆರಿಗೆ ನೀತಿಯಿಂದ ತೆರಿಗೆ ಭಾರ ಜಾಸ್ತಿಯಾಗಿ ಬೆನ್ನು ಮೂಳೆ ಬಾಗಿದೆ. ನೆಟ್ಟಗೆ ನಿಲ್ಲುವ ಶಕ್ತಿ ಇಲ್ಲಾ. ಬೆನ್ನುಮೂಳೆ ಮುರಿಯುವವರೆಗೆ ಬಂದಿದೆ. ಇದು ಸರಿಯಲ್ಲ. ತೆರಿಗೆ ಭಾರ ಹೊರುವ ಶಕ್ತಿ ಕಾಪಾಡಿಕೊಂಡು ಬರಬೇಕೆಂದು ಸರಕಾರಕ್ಕೆ ಸೂಚಿಸಬಯಸುತ್ತೇನೆ. ಈ ದೃಷ್ಟಿಯನು ಇಟ್ಟುಕೊಂಡು ತೆರಿಗೆ ನೀತಿ ಬದಲಿಸಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

1-30 P.M.

† ಶ್ರೀಮತಿ ರತ್ನಮ್ಮ ಮಾಧವರಾವ್ (ಶಿವಮೊಗ್ಗ).—ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಮುಂದಿರತಕ್ಕಂಥ ಎಲ್ಲ ಡಿಮ್ಯಾಂಡುಗಳನ್ನೂ ಅನುಮೋದಿಸುತ್ತಾ, ಕೆಲವು ಡಿಮ್ಯಾಂಡುಗಳಮೇಲೆ ಮಾತ್ರ ಮಾತನಾಡಿ ನನ್ನ ಕೆಲವು ಸಲಹೆಗಳನ್ನು ತಿಳಿಸಲು ಇಚ್ಛೆಪಡುತ್ತೇನೆ.

ಮೊದಲನೆಯದಾಗಿ, ಸೇಲ್ಸ್ ಟ್ಯಾಕ್ಸ್, ಅಂದರೆ, ಮಾರಾಟ ತೆರಿಗೆ ಇಲಾಖೆ ಬಗ್ಗೆ ಹೇಳುತ್ತೇನೆ. ಇದರಲ್ಲಿ ಇರುವಂಥ ಅಧಿಕಾರಿಗಳಲ್ಲಿ ದಕ್ಷರೂ, ಅನುಭವವುಳ್ಳವರೂ, ಪ್ರಾಮಾಣಿಕತೆಯಿಂದ ಕೂಡಿದವರೂ ಆಗಿರಬೇಕು. ತೆರಿಗೆ ವಸೂಲು ಮಾಡುವುದರಲ್ಲಿ ಸರಕಾರಕ್ಕೆ ಅನ್ಯಾಯ ಮಾಡದ ಅಧಿಕಾರಿಗಳಾಗಿರಬೇಕು. ಈ ಮಾರಾಟ ತೆರಿಗೆ ಬಂದು ಸುಮಾರು 15 ವರ್ಷವಾಯಿತು. 1945ನೆ ಇಸವಿಯಲ್ಲಿ ಈ ಇಲಾಖೆಗೆ ಪ್ರೊಬೇಷನರು ಅಂತ ತೆಗೆದುಕೊಂಡರು. ಅವರಿಗೆ ಈಗಾಗಲೆ 15 ವರ್ಷ ಸರ್ವೀಸಾಗಿ, ಅವರು ಸಾಕಾದಷ್ಟು ಅನುಭವ ಪಡೆದುಕೊಂಡಿದ್ದಾರೆ. ಆದರೆ ಈಗ ಏನಾಗಿದೆಯೆಂದರೆ ರೆವಿನ್ಯೂ ಡಿಪಾರ್ಟ್‌ಮೆಂಟಿನಲ್ಲಿರುವವರಿಗೆ ಮಾರಾಟ ತೆರಿಗೆ ಬಗ್ಗೆ ಏನೂ ಅನುಭವವಿರುವುದಿಲ್ಲ, ಅಂಥವರನ್ನು ಸೇಲ್ಸ್ ಟ್ಯಾಕ್ಸ್ ಡೆಪ್ಯುಟಿ ಕಮಿಷನರಾಗಿ ಹಾಕುವಂತೆ ಮಾಡಿದ್ದಾರೆ. ಮತ್ತು ಅದಕ್ಕೋಸ್ಕರ ಶೇಕಡ 50ರಷ್ಟು ಜಾಗವನ್ನು ಕೇಡರ್ ಮಾಡಿಕೊಂಡಿದ್ದಾರೆಂದು ನನಗೆ ತಿಳಿದು

(ಶ್ರೀಮತಿ ರತ್ನಮ್ಮ ಮಾಧವರಾವ್)

ಬಂತು. ಇದಕ್ಕೆ ಕೇಡರ್ ಮತ್ತು ರಿಕ್ರೂಟ್‌ಮೆಂಟ್ ರೂಲ್ಸನ್ನು ಬದಲಾವಣೆ ಮಾಡಿದ್ದಾರೆ ಅಂತ ಹೇಳಿ ನನಗೆ ತಿಳಿದುಬಂದಿತು. ಇದು ಸರಿಯಲ್ಲ. ಇದರಿಂದ 17 ವರ್ಷಗಳ ಕಾಲ ಸರ್ವೀಸು ಆಗಿರುವ ಅಧಿಕಾರಿಗಳಿಗೆ ಅನ್ಯಾಯ ಮಾಡಿದಹಾಗಾಗುತ್ತದೆ. ಈ ಆಫೀಸರುಗಳಿಗೆ ಕೆಲಸ ಮಾಡುವುದಕ್ಕೆ ಉತ್ಸಾಹವೂ ಇರುವುದಿಲ್ಲ, ಉತ್ತೇಜನವೂ ಇರುವುದಿಲ್ಲ. ರೆವಿನ್ಯೂ ಆಫೀಸರುಗಳನ್ನು ಈ ಡಿಪಾರ್ಟ್‌ಮೆಂಟಿಗೆ ಹಾಕುವುದನ್ನು ನಿಲ್ಲಿಸಿ ಸೇಲ್ಸ್ ಟ್ಯಾಕ್ಸ್ ಇಲಾಖೆಯವರಿಗೆ ಪ್ರಮೋಷನ್ ಕೊಡಿ.

ಸೋಷಿಯಲ್ ವೆಲ್‌ಫೇರ್ ಇಲಾಖೆ ಬಗ್ಗೆ ಕೆಲವು ಮಾತುಗಳನ್ನು ಆಡಬೇಕೆಂದು ಇದ್ದೇನೆ. ಈ ಇಲಾಖೆಯಲ್ಲಿ ಹಣ ಲ್ಯಾಪ್ಸು ಆಗುತ್ತಿದೆ ಅನ್ನುವುದು ಪದೇಪದೇ ಕೇಳಿಬರುತ್ತಿದೆ. ಇದರಿಂದ ಏಕೋ ಅನುಮಾನವಾಗುತ್ತಿದೆ. ಈ ಇಲಾಖೆ ಪ್ರಸಕ್ತ ಡಿಮ್ಯಾಂಡುಗಳ ಕೆಳಗೆ ಬರುವುದಿಲ್ಲವೆಂತ ಹೇಳುತ್ತಾರೆ. ಆದ್ದರಿಂದ ಆ ವಿಷಯ ಅಲ್ಲಿಗೇ ಬಿಡುತ್ತೇನೆ.

ಆಮೇಲೆ 70 ವರ್ಷ ವಯಸ್ಸಾದ ಡೆಸ್ಟಿಟ್ಯೂಟುಗಳಿಗೆ ತಿಂಗಳಿಗೆ 15 ರೂಪಾಯಿ ಪೆನ್‌ಷನ್ ಕೊಡಬೇಕೆಂದು ಮಾಡಿದ್ದೀರಿ. ಈಗ ಏನಾಗಿದೆಯೆಂದರೆ ಕೆಲವು ಮುದುಕಿಯರು ನನ್ನನ್ನು ಹುಡುಕಿಕೊಂಡು ಬರುತ್ತಿದ್ದಾರೆ. ಪಾಪ, ಅವರು ತಮ್ಮ ಹುಟ್ಟಿದ ತಾರೀಖನ್ನು ಒಂದು ಚೀಟಿಯಲ್ಲಿ ಗುರುತು ಹಾಕಿಕೊಂಡು ಬಂದು ತಮಗೆ 70 ವಯಸ್ಸಾಗಿದೆ, ಈ ಪೆನ್‌ಷನ್ ಕೊಡಿಸಿಕೊಡಬೇಕೆಂದು ಕೇಳುತ್ತಿದ್ದಾರೆ. ಈ ಸ್ಕೀಮನ್ನು ಯಾವಾಗ ಜಾರಿಗೆ ತರುತ್ತೀರ, ಇದಕ್ಕೆ ಎಲ್ಲಿ ಆಫೀಸು ಮಾಡಿದ್ದೀರ ಎನ್ನುವುದನ್ನು ತಿಳಿಸಿದರೆ ನಮಗೆ ಬಹಳ ಅನುಕೂಲವಾಗುತ್ತದೆ. ಇದಕ್ಕೆ ಏನಾದರೂ ರೂಲ್ಸ್ ಮಾಡಿದ್ದೀರ? ಈ ಫ್ಯಾಮಿಲಿ ಪೆನ್‌ಷನ್ನು ಯಾರ್ಯಾರಿಗೆ ಕೊಡಲಾಗುತ್ತದೆ ಅನ್ನುವುದನ್ನೂ ತಿಳಿಸಬೇಕು.

ತೆಂಗಿನಕಾಯಿ, ದೇವರು ದಿಂಡರು, ಬಡವರು ಬಲ್ಲಿದರು, ಎಲ್ಲರಿಗೂ ಉಪಯೋಗಕ್ಕೆ ಬೇಕು. ಇಂಥದರಮೇಲೆ ಟ್ಯಾಕ್ಸು ಹಾಕಿದ್ದೀರಿ. ಇದನ್ನು ತೆಗೆದುಹಾಕಬೇಕೆಂದು ಮನವಿಗಳನ್ನೂ ಕೊಟ್ಟಿದ್ದಾರೆ. ಸರಕಾರದವರು ಇದರಮೇಲೆ ಟ್ಯಾಕ್ಸನ್ನು ಕಡಮೆಯಾದರೂ ಮಾಡಬೇಕೆಂದು ಹೇಳಲು ಇಷ್ಟಪಡುತ್ತೇನೆ. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸಿದ್ದಯ್ಯ ಕಾಶಿಮಠ (ಶಿರಹಟ್ಟಿ).—ಮಾನ್ಯ ಅಧ್ಯಕ್ಷರೆ, ಇವತ್ತು ಈ ಸಭೆಯ ಮುಂದೆ ಇಟ್ಟಿರತಕ್ಕಂಥ 1, 5, 34, 35, 36, 40, 41, 52, 54, 27, 38, 51—ಒಟ್ಟು ಡಿಮ್ಯಾಂಡುಗಳಲ್ಲಿ, ನಾವು ಈ ಸಭೆಯಲ್ಲಿ 14,17,73,000 ರೂಪಾಯಿಗೆ ಒಪ್ಪಿಗೆ ಕೊಡಬೇಕಾಗಿದೆ.

ಮೊಟ್ಟಮೊದಲನೆಯದಾಗಿ Taxes on income other than Corporation Tax, ಅಂದರೆ Agricultural Income-tax ಇದೆ. ಅದರ ಬಗ್ಗೆ ಕೆಲವೊಂದು ಸಲಹೆಗಳನ್ನು ನೀಡಬಯಸುತ್ತೇನೆ. ಈ ಸರಕಾರ ಮೇಲಿಂದ ಮೇಲೆ ಈ ದೇಶ ರೈತರದು, ರೈತರ ಹಿತಕ್ಕಾಗಿ ಅದು ಎಲ್ಲತರಹದ ಸೌಕರ್ಯಗಳನ್ನು ಮಾಡಿಕೊಡುತ್ತದೆ ಎಂದು ಹೇಳುತ್ತದೆ. ಅಷ್ಟೇ ಅಲ್ಲದೇನೆ, ಜನ ಸಂಖ್ಯೆ ಹೆಚ್ಚಾಗಿ ಆಹಾರ ಅಭಾವವಿರುವುದರಿಂದ, ಹೆಚ್ಚಿಗೆ ಆಹಾರ ಬೆಳೆಯುವುದಕ್ಕೆ ಯೋಜನೆಯನ್ನು ಹಾಕಿದೆ ಎಂದು ಹೇಳಿ, ಅದಕ್ಕೆ ಸಂಬಂಧಪಟ್ಟಂತೆ ಕೆಲವು ಪ್ರಚಾರಗಳನ್ನೂ ಕೂಡ ಕೈಕೊಂಡದ್ದು ಉಂಟು. ಆದರೆ ನಿಜವಾಗಿ ನೋಡಿದರೆ ರೈತನಿಗೆ ಯಾವ ತರಹ ಸೌಕರ್ಯ ಸಿಗುತ್ತಾ ಇದೆ. ಸರಕಾರದವರು ರೈತನಿಗೆ ತಾವು ಸಹಾಯ ಮಾಡುತ್ತೇವೆ ಎಂದು ಹೇಳುತ್ತಾರೆ. ಆದರೆ ಅವನ ಪರಿಸ್ಥಿತಿ ಬಹಳ ಶೋಚನೀಯವಾಗಿದೆ. ಬೀಜ ಬಿತ್ತುವುದಕ್ಕೆ ಕಾಯಿದೆ ಅನ್ವಯಿಸುತ್ತಾರೆ. ಹತ್ತಿ ಕಾಳಿನ ಬೀಜ ಬಿತ್ತುವಾಗ ಮಿಶ್ರಣ ಬೀಜ ಬಿತ್ತಿದರೆ, 3 ತಿಂಗಳ ಶಿಕ್ಷೆ, ಹಾಗೂ 200 ರೂಪಾಯಿ ದಂಡ ವಿಧಿಸಲು ಅಧಿಕಾರವಿದೆ. ಅದೇ ರೀತಿಯಾದ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸಿನಲ್ಲಿಯೂ ಮಾಡುತ್ತಾ ಇದ್ದಾರೆ. ವ್ಯಾಪಾರಸ್ಥರಿಗೆ, ವ್ಯವಹಾರಸ್ಥರಿಗೆ ಬೇಕಾದಷ್ಟು ಅನುಕೂಲ ಒದಗಿಸಿದ್ದಾರೆ. 7,500 ರೂಪಾಯಿವರೆಗೆ ವ್ಯವಹಾರ ಮಾಡಿದರೆ ಸೇಲ್ಸ್ ಟ್ಯಾಕ್ಸ್ ತೆಗೆದುಕೊಳ್ಳಬೇಕಾಗಿಲ್ಲ ಎಂಬ ಕಾಯಿದೆ ಇದೆ. ಆದರೆ ರೈತಾಪಿ ಜನಗಳಿಗೆ 3,500 ರೂಪಾಯಿ ನಷ್ಟು ಉತ್ಪನ್ನ ಬಂದರೆ ಮಾತ್ರ ಅವನಿಗೆ ಟ್ಯಾಕ್ಸು ಹಾಕುವದಿಲ್ಲ, 3,500 ರೂಪಾಯಿಮೇಲೆ ಬಂದರೆ 1 ರೂಪಾಯಿಗೆ 3 ನಯೇ ಪೈಸೆ ಟ್ಯಾಕ್ಸ್ ಇಟ್ಟಿದ್ದಾರೆ. ಇವತ್ತಿನ ದಿವಸ ಕೂಲಂಕಷವಾಗಿ ವಿಚಾರ ಮಾಡಿದರೆ ರೈತನಿಗೆ ಸಾಕಷ್ಟು ಕಷ್ಟಗಳಿವೆ. ಗೊಬ್ಬರವಾಗಲಿ, ಬೀಜವಾಗಲಿ ಲೆಕ್ಕ ಕೊಡದೆ ಸಿಗುವುದಿಲ್ಲ. ಐದಾರು ವರ್ಷ ಮಳೆ ಬಿದ್ದು ಎಲ್ಲಾ ತರಹ ಕಷ್ಟಗಳೂ ಅವನಿಗೆ ಬಂದಿವೆ. ಇಂಥ ಒಂದು ದೊಡ್ಡ ಕಷ್ಟ ಬಂದಿದೆ, ಅಂಥದರಲ್ಲಿಯೂ 10 ಸಾವಿರ ರೂಪಾಯಿಯ ತೀರು ಬಂದಿಲ್ಲ ಎಂದು ಹೇಳುವ ಸಲುವಾಗಿ, ಲೆಕ್ಕ ತೋರಿಸುವ ಪರಿಸ್ಥಿತಿ ಬಂದಿದೆ. ಈಗಾಗಲೇ ಅಗ್ರಿಕಲ್ಚರ್ ಇನ್‌ಕಂ ಟ್ಯಾಕ್ಸ್ ಆಫೀಸರುಗಳು ರೈತರುಗಳಿಗೆ ಫಾರಮ್ಮುಗಳನ್ನು ಕಳುಹಿಸಿದ್ದಾರೆ ಆ ಫಾರಮ್ಮುಗಳು ಎಲ್ಲಾ ಇಂಗ್ಲೀಷಿನಲ್ಲಿವೆ. ಅವುಗಳಿಗೆ ಕನ್ನಡದಲ್ಲಿ ತರ್ಜುಮೆಯೂ ಇಲ್ಲ. ಆ ಫಾರಮ್

ಗಳನ್ನು ರೈತ ತುಂಬಿ ಕಳುಹಿಸಬೇಕು ಎಷ್ಟೋ ಕಾಲಮ್ಮುಗಳು ರೈತನಿಗೆ ಅರ್ಥವಾಗುವುದೇ ಇಲ್ಲ, ಅವುಗಳನ್ನು ತುಂಬದೇ ಕಳುಹಿಸುವ ಪರಿಸ್ಥಿತಿ ರೈತನಿಗೆ ಬಂದಿದೆ. ಡಿಸ್ಟ್ರಿಕ್ಟ್ ಅಗ್ರಿಕಲ್ಚರಲ್ ಆಫೀಸರುಗಳು ತಮಗೆ ಬಂದಂತೆ ಕಾಯಿದೆಯನ್ನು ಇಂಟರ್ ಪ್ರಿಟ್‌ಮಾಡಿ ಟ್ಯಾಕ್ಸ್ ಹಾಕುತ್ತಾರೆ. ಆ ಫಾರಮ್ಮುಗಳು ತಿಳಿಯಾದ ಕನ್ನಡದಲ್ಲಿರ ಬೇಕು ಎಂದು ಮೇಲಿಂದಮೇಲೆ ಹೇಳುತ್ತಾ ಇದ್ದೇವೆ. ಅವುಗಳನ್ನು ತುಂಬಬೇಕಾದರೆ ಕಷ್ಟ; ತುಂಬದೆ ಬಿಟ್ಟರೆ, ಟ್ಯಾಕ್ಸ್ ಕೊಡಬೇಕು. ಅವನ್ನು ನ್ಯಾಯ ಮಾಡಬೇಕಾದರೆ ಈ ಫಾರಮ್ಮುಗಳನ್ನು ಕನ್ನಡದಲ್ಲಿ ಕಳುಹಿಸಬೇಕಾಗಿತ್ತು. ಎರಡನೆಯದಾಗಿ, 3,500 ರೂಪಾಯಿ ಇರುವುದನ್ನು ಅದಷ್ಟು ಮಟ್ಟಿಗೆ 5 ಸಾವಿರ ವರೆಗಾದರೂ ಏರಿಸಬೇಕು ಎಂದು ನಾನು ಕೇಳುತ್ತೇನೆ. ಒಂದು ಮನೆಯಲ್ಲಿ ಎತ್ತು ಇದ್ದರೆ, ಅದರಿಂದ ಎಷ್ಟು ಸಲ ಉಳುತ್ತಾನೆ, ಎಷ್ಟು ಸಲ ಹೊಲದಲ್ಲಿ ಕೆಲಸ ಮಾಡುತ್ತಾನೆ ಎಂಬ ಲೆಕ್ಕ ಕೊಟ್ಟು, ಸಲಕರಣೆಗಳನ್ನೆಲ್ಲಾ ತೋರಿಸಬೇಕು ಎಂದು ಹೇಳುತ್ತಾರೆ. ಇದರ ಪ್ರಕಾರ ಲೆಕ್ಕ ಹಾಕಬಾರದು, ಕೂಲಿ ಪ್ರಕಾರ ಲೆಕ್ಕ ಹಾಕಬೇಕೆಂದರೆ, ಅದು ಪ್ರಾಕ್ಟಿಕಲ್ ಆಗದೆ ಇರುವ ವಿಷಯ. ಇವತ್ತಿನ ದಿವಸ 5 ಸಾವಿರ ರೂಪಾಯಿಯ ಉತ್ಪನ್ನವಾದರೂ ಇದ್ದರೆ, ಟ್ಯಾಕ್ಸ್ ಹಾಕಬಹುದು. ಯಾವ ತರಹ ನೀವು ಟ್ಯಾಕ್ಸ್ ತೆಗೆದುಕೊಳ್ಳುತ್ತಾ ಇದ್ದೀರೋ ಅದೇ ರೀತಿ ರೈತಾಪಿ ಜನಗಳಿಗೆ ಸಕಾಲದಲ್ಲಿ ಸೌಕರ್ಯಗಳನ್ನೂ ಒದಗಿಸಬೇಕು. ಸರಕಾರದವರು ಅದಕ್ಕಾಗಿ ಏನು ಪ್ರಚಾರ ಮಾಡುತ್ತಾ ಇದ್ದೀರಿ. ಪ್ರಚಾರ ಮಾಡಿದ ಹಾಗೆ ಅದನ್ನು ಇವತ್ತು ಕಾರ್ಯರೂಪಕ್ಕೆ ತರಬೇಕು. ಬೀಜದ ಬಗ್ಗೆ ಸಾಕಷ್ಟು ಪ್ರಚಾರ ಮಾಡುತ್ತಾ ಇದ್ದೀರಿ. ಆದರೆ ಎಷ್ಟು ಮಂದಿಗೆ ಬೀಜ ಒದಗಿಸಿ ಕೊಟ್ಟಿದ್ದೀರ ಪ್ರತಿವರ್ಷ ಅನ್ನುವುದರ ಲೆಕ್ಕ ತಿಳಿಸುತ್ತೀರ? ಸೀಡುಫಾರಮ್ಮುಗಳಿವೆ. ನಿಮ್ಮ ಸೀಡ್ ಫಾರಮ್ಮಿನಲ್ಲಿ ಬೆಳೆಯತಕ್ಕಂಥ ಬೀಜಗಳನ್ನು ಉಪಯೋಗಿಸಿದರೆ, ಅವು ಹಿಡಿಯದೆ ಇರತಕ್ಕಂಥ ಪರಿಸ್ಥಿತಿ ಇದೆ. ಆದರೆ ಟ್ಯಾಕ್ಸ್ ಮಾತ್ರ ತೆಗೆದುಕೊಳ್ಳುತ್ತೀರ. ಅದೇ ರೀತಿ ರೈತನಿಗೆ ಬೇಕಾದ ಒಳ್ಳೆಯ ಬೀಜ, ಸಲಕರಣೆಗಳನ್ನು ಸಕಾಲದಲ್ಲಿ ಒದಗಿಸಿಕೊಡಲಿಕ್ಕೆ ಪ್ರಯತ್ನ ಮಾಡಬೇಕು ಎಂದು ಈ ಸಮಯದಲ್ಲಿ ಹೇಳುತ್ತೇನೆ.

ಮಾರಾಟ ತೆರಿಗೆ ವಿಚಾರವಾಗಿ ಈಗಾಗಲೇ ನನ್ನ ಸ್ನೇಹಿತರು ಹೇಳಿದರು. ಮಾರಾಟ ತೆರಿಗೆ ಇನ್‌ಸ್ಪೆಕ್ಟರುಗಳ ಹಾವಳಿ ಬಹಳವಾಗಿ ರೈತಾಪಿ ಜನಗಳು ತೊಂದರೆಗೆ ಈಡಾದ ಪರಿಸ್ಥಿತಿ ಬಹಳವಿದೆ. ಸಣ್ಣ ಪುಟ್ಟ ವ್ಯಾಪಾರಸ್ಥರು, ಹಳ್ಳಿಗಳಲ್ಲಿ, ಪಟ್ಟಣಗಳಲ್ಲಿ ವ್ಯಾಪಾರ ಮಾಡದೆ ಇರತಕ್ಕಂಥ ಪರಿಸ್ಥಿತಿ ಬಂದಿದೆ. ಈ ಇನ್‌ಸ್ಪೆಕ್ಟರುಗಳು ಅವರ ಹತ್ತಿರ ಮೇಲಿಂದ ಮೇಲೆ ಬಂದು ಟ್ಯಾಕ್ಸ್ ಕೊಡಬೇಕಾಗುತ್ತದೆಂದು ಹಿಂಸೆ ಮಾಡುತ್ತಾರೆ, ಮತ್ತು ಒತ್ತಾಯಪೂರ್ವಕವಾಗಿ ಸಂಭಾವನೆ ರೀತಿಯಲ್ಲಿ ಲೆಕ್ಕ ತೆಗೆದುಕೊಂಡು ಹೋಗುತ್ತಾರೆ. ಈ ಕ್ಲಿಷ್ಟ ಪರಿಸ್ಥಿತಿ ಬಂದಿದೆ.

ಅವರಿಗೆ ಏನಾದರೂ ಕಟ್ಟಳೆಯನ್ನು ಮಾಡಿ ಯಾವ ಸಮಯದಲ್ಲಿ ಹೋಗಬೇಕು ಯಾವ ರೀತಿಯಲ್ಲಿ ಹೋಗಬೇಕೆಂಬ ವಿಚಾರದಲ್ಲೂ ಕೂಡ ಒಂದು ಆದೇಶವನ್ನು ಸರಿಯಾಗಿ ಕೊಡಬೇಕು.

ಇನ್ನು ಟ್ಯಾನಿಂಗ್ ಇಂಡಸ್ಟ್ರಿ ವಿಷಯದಲ್ಲಿ ಎರಡು ಮಾತುಗಳನ್ನು ಹೇಳಬೇಕೆಂದರೆ ಚರ್ಮ ಹದಗೊಳಿಸುವ ಉದ್ಯೋಗಸ್ತರಿಗೆ ಇವತ್ತಿನ ದಿವಸ ಒಂದು ಕುಂದು ಬಂದಿದೆ. ಮೊನ್ನೆ ದಿವಸ ಹಣಕಾಸಿನ ಮಂತ್ರಿಗಳು ತಮ್ಮ ಬಜೆಟ್ ಭಾಷಣದಲ್ಲಿ ಯಾರು ಚರ್ಮ ಹದಗೊಳಿಸುವ ಇಂಡಸ್ಟ್ರಿ ಮಾಡುತ್ತಾರೆ ಅವರಿಗೆ ಸಬ್ಸಿಡಿಕೊಟ್ಟು ಉತ್ತೇಜನ ಮಾಡುತ್ತೇವೆ ಎಂದು ಹೇಳಿದರು. ಅದೇ ರೀತಿಯಲ್ಲಿ ಫಸ್ಟ್ ಪರ್ಚೇಸ್‌ಗೆ 2 ಪರ್ಸೆಂಟ್ ಇದ್ದುದನ್ನು ಒಂದು ಪರ್ಸೆಂಟ್ ಮಾಡಿ, ಲಾಸ್ಟ್ ಪರ್ಚೇಸ್‌ರ್ ಆ ಕಡಿಮೆ ಬಿದ್ದ ಒಂದು ಪರ್ಸೆಂಟ್‌ನ್ನು ಕೊಡಬೇಕೆಂದು ಮಾಡಿರುವುದಾಗಿ ಹೇಳಿದರು. ಲಾಸ್ಟ್ ಪರ್ಚೇಸರ್ ಕೊಡಬೇಕಾದರೆ ಏನು ತೊಂದರೆ ಇದೆ ಎಂಬುದನ್ನು ವಿಚಾರ ಮಾಡಿ ನೋಡಬೇಕು. ನಮ್ಮ ದೇಶದಲ್ಲಿ ಚರ್ಮ ಹದಗೊಳಿಸುವ ಉದ್ಯೋಗಕ್ಕೆ ಇವತ್ತಿನ ದಿವಸ ಮಾರ್ಕೆಟ್ ಇಲ್ಲದ ಪರಿಸ್ಥಿತಿ ಇದೆ. ಹದಗೊಳಿಸಿದ ಚರ್ಮವನ್ನು ಇಲ್ಲಿ ತಯಾರು ಮಾಡಿ ಮದರಾಸಿನಲ್ಲಿ ಅದನ್ನು ಉಪಯೋಗ ಮಾಡತಕ್ಕ ಪರಿಸ್ಥಿತಿ ಇದೆ, ಹೀಗಿರುವಾಗ ಒಬ್ಬೊಬ್ಬರಿಗೆ ಉತ್ತೇಜನಕೊಟ್ಟರೂ ಕೂಡ, ಅಲ್ಲಿರತಕ್ಕ ಲೇಬರರ್ಸ್—ಚರ್ಮ ಹದಗೊಳಿಸತಕ್ಕ ಉದ್ಯೋಗಸ್ತರು ಅದನ್ನು ಬಿಟ್ಟುಬಿಡುವ ಪರಿಸ್ಥಿತಿ ಬಂದಿದೆ. ಆದ್ದರಿಂದ ತಾವು ಈಗಾಗಲೇ ತೋರಿಸಿರತಕ್ಕ ರಿಯಾಯಿತಿಯನ್ನು ಫಸ್ಟ್ ಪರ್ಚೇಸ್‌ಗೆ ಮಾತ್ರ ಅನ್ವಯಿಸಿ ಅದನ್ನು ಲಾಸ್ಟ್ ಪರ್ಚೇಸ್ ಮೇಲೆ ಹೊರಿಸುವುದನ್ನು ಬಿಟ್ಟು ಅವರಿಗೆ ಉತ್ತೇಜನ ಕೊಡಬೇಕೆಂದು ಹೇಳುತ್ತೇನೆ.

ಇನ್ನೊಂದು ಸ್ವಾಗತಾರ್ಹವಾದ ವಿಷಯ ಎಂದರೆ ಅರ್ಥಿಕ ಮಂತ್ರಿಗಳು ಫಸ್ಟ್ ಪರ್ಚೇಸ್‌ಗೆ 2 ಪರ್ಸೆಂಟ್ ಇದ್ದುದನ್ನು ಒಂದು ಪರ್ಸೆಂಟ್ ಮಾಡಿದ್ದೇವೆ ಎಂದು ಹೇಳಿದ್ದಾರೆ. ಅದು ನಿಜವಾಗಿಯೂ ಸ್ವಾಗತಾರ್ಹವಾದ ವಿಷಯ. ನಮ್ಮ ಭಾಗದಲ್ಲಿ ಈ ಚರ್ಮದ ಇಂಡಸ್ಟ್ರೀಗೆ ಉತ್ತೇಜನಕೊಡುವುದಕ್ಕಾದರೂ ಕೂಡ ಲಾಸ್ಟ್ ಪರ್ಚೇಸ್ ಮೇಲೆ ಹಾಕತಕ್ಕ ಟ್ಯಾಕ್ಸನ್ನು ಕಡಿಮೆ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

(ಶ್ರೀ ಸಿದ್ದಯ್ಯ ಕಾಶೀಮಠ)

ಇನ್ನು ಎರಡನೆಯದಾಗಿ ಪೆನ್‌ಷನ್ ಬಗ್ಗೆ ಮಾನ್ಯ ಸದಸ್ಯರು ಅನೇಕರು ಹೇಳಿದ್ದಾರೆ. ದೊಡ್ಡ ಆಫೀಸರಿಂದ ಹಿಡಿದು ಉಪಾಧ್ಯಾಯರವರೆಗೂ ಕಷ್ಟ ಪರಿಸ್ಥಿತಿ ಬಂದಿದೆ. ತಾವೂ ಕೂಡ ತಮ್ಮ ಬಡ್ಜೆಟ್ ಭಾಷಣದಲ್ಲಿ ಹೇಳಿದಿರಿ 70 ವರ್ಷ ವಯಸ್ಸಿಗೆ ಮೇಲ್ಪಟ್ಟಿರತಕ್ಕವರಿಗೆ 15 ರೂಪಾಯಿಗಳ ಪೆನ್‌ಷನ್ ಕೊಡುತ್ತೇವೆ ಎಂದು. ನಾನು ಹೇಳುವುದು ಇಷ್ಟೇ 70 ವರ್ಷ ಆದಮೇಲೆ ಪೆನ್‌ಷನ್ ಕೊಡುವುದಕ್ಕಿಂತ 30 ವರ್ಷದವರೆಗೂ ತಮ್ಮಲ್ಲಿ ಸೇವೆ ಮಾಡಿದವರಿಗೆ 5-5 ವರ್ಷಗಳಾದರೂ ಕೂಡ ಪೆನ್‌ಷನ್ ಕೊಡದೇ ಇರುವುದು ಶೋಚನೀಯವಾದ ವಿಚಾರ. ಉಪಾಧ್ಯಾಯರ ಗೋಳು ಕೇಳುವವರೇ ಇಲ್ಲ. ಅಂತಹ ಪರಿಸ್ಥಿತಿ ಬಂದಿದೆ. ದೇಶದಲ್ಲಿ ಅಜ್ಞಾನವನ್ನು ಹೊಡೆದೋಡಿಸತಕ್ಕ ಜನತೆಯಲ್ಲಿ ಜ್ಞಾನವನ್ನುಂಟು ಮಾಡತಕ್ಕ ಉಪಾಧ್ಯಾಯರ ಗೋಳು ಯಾರೂ ಕೇಳುವವರೆ ಇಲ್ಲವೇ ಎಂದು ಹೇಳತಕ್ಕ ಪರಿಸ್ಥಿತಿ ಈ ದಿನ ಇದೆ. ಅವರು ಪೆನ್‌ಷನ್ ಆಗಿ 4-5 ವರ್ಷ ಆಗಿ ಅವರು ಸತ್ತಂತಹ ಪರಿಸ್ಥಿತಿಯಲ್ಲೂ ಕೂಡ ಪೆನ್‌ಷನ್ ಮಂಜೂರಾಗಿಲ್ಲದೇ ಇರತಕ್ಕ ಪರಿಸ್ಥಿತಿ ಇದೆ. ಆದ್ದರಿಂದ ಒಂದು ಸಲಹೆಯನ್ನು ನಾನು ಹೇಳುವುದಾದರೆ ಉಪಾಧ್ಯಾಯರುಗಳಿಗೆ ಕೊಡತಕ್ಕ ಪೆನ್‌ಷನ್ ಬಹಳ ಕಡಿಮೆ ಇದ್ದರೂ ಕೂಡ ಅವರಿಗೆ ಬರತಕ್ಕ ಪ್ರಾವಿಡೆಂಟ್ ಫಂಡ್ ಮುಂತಾದುವನ್ನು ತಕ್ಷಣ ಕೊಡಬೇಕೆಂಬ ನಿಯಮವನ್ನು ಮಾಡಿ ಆ ಮೂಲಕ ಸಹಾಯವನ್ನಾದರೂ ಮಾಡಿದರೆ ಅವರು 4-6 ತಿಂಗಳುಗಳವರೆಗೆ ಗಂಜಿಯನ್ನಾದರೂ ಕುಡಿದು ಜೀವನ ಮಾಡಲು ಅನುಕೂಲವಾಗುತ್ತದೆ. ಪ್ರಾವಿಡೆಂಟ್ ಫಂಡ್ ಹಣಕೊಡುವುದಕ್ಕೂ ಅಡಚಣೆ ಇದ್ದರೆ ಅದನ್ನಾದರೂ ಎರಡು ಮೂರು ತಿಂಗಳಿನಲ್ಲಿ ಒದಗಿಸಿಕೊಟ್ಟು ಸಹಾಯ ಮಾಡಬೇಕು.

ಇನ್ನು ಪೆನ್‌ಷನ್ ತೆಗೆದುಕೊಳ್ಳುವಾಗ ನಾನು ತಾಲ್ಲೂಕು ಕಚೇರಿಯಲ್ಲಿ ಹೋಗಿದ್ದಾಗ ಒಂದು ನಿದರ್ಶನ ನನ್ನ ಗಮನಕ್ಕೆ ಬಂತು ಅದೇನೆಂದರೆ ಪೆನ್‌ಷನ್ ತೆಗೆದುಕೊಳ್ಳುವವರು ಜೀವಂತನಾಗಿದ್ದಾನೆಯೋ ಇಲ್ಲವೇ ಎಂದು ಹೇಳಿ ತಿಳಿಸತಕ್ಕ ಒಂದು ಸರ್ಟಿಫಿಕೇಟ್‌ನ್ನು ತರಬೇಕೆಂದು ನಿಯಮ ಮಾಡಿದ್ದೀರಿ. ಒಮ್ಮೆ ನಮ್ಮ ಸ್ನೇಹಿತರ ಕೂಡ ಮಾತನಾಡುವಾಗ ಅವರು ಹೇಳಿದರು ಅದೇನೆಂದರೆ ಡಿಸೆಂಬರ್ ತಿಂಗಳಿನಲ್ಲಿ ಪೆನ್‌ಷನ್ ತೆಗೆದುಕೊಳ್ಳುವುದಕ್ಕೆ ಹೋದಾಗ ನವೆಂಬರು ತಿಂಗಳಿನಲ್ಲಿ ಬದುಕಿದ್ದಾನೆಯೋ ಇಲ್ಲವೇ ಎಂಬ ಸರ್ಟಿಫಿಕೇಟ್ ತರಬೇಕೆಂದು ಹೇಳುತ್ತಾರೆ, ಡಿಸೆಂಬರ್ ತಿಂಗಳಿನಲ್ಲೇ ನಾನೇ ಸ್ವತಃ ಪೆನ್‌ಷನ್ ತೆಗೆದುಕೊಳ್ಳಲು ಬಂದಿರುವಾಗ ನವೆಂಬರ್‌ನಲ್ಲಿ ಸತ್ತಿದ್ದೇನೆಯೋ ಬದುಕಿದ್ದೇನೆಯೋ ಎಂಬ ಸರ್ಟಿಫಿಕೇಟ್ ಏಕೆ ಎಂದು ಕೇಳಿದರೆ ಅದನ್ನೆಲ್ಲಾ ಟ್ರೆಜರಿ ಆಫೀಸರು ಕೇಳುವುದಿಲ್ಲ ಎಂದು ಹೇಳುತ್ತಾರೆ. ಈ ತರಹ ಹೇಳುವ ವಾಡಿಕೆ ಇದೆ. ಜೀವಂತವಾಗಿರುವ ಸರ್ಟಿಫಿಕೇಟ್ ತರುವುದಕ್ಕೂ ಕೂಡ ತುಂಬ ಕಷ್ಟ ಇದೆ, ಏಕೆಂದರೆ ಉಪಾಧ್ಯಾಯರನ್ನು ಯಾರೂ ಕೇಳುವವರೇ ಇಲ್ಲ. ಹಳ್ಳಿಯಲ್ಲಿ ಹೋಗಿ ಕೇಳಿದರೆ ತಹಸೀಲ್ದಾರರು ಸರ್ಟಿಫಿಕೇಟ್‌ಕೊಡುವುದಕ್ಕೆ ಒಂದು ನಿಯಮವನ್ನೇ ಹಾಕಿಕೊಂಡಿರುತ್ತಾರೆ. ಒಂದೊಂದು ಸರ್ಟಿಫಿಕೇಟ್ ತೆಗೆದುಕೊಳ್ಳಬೇಕಾದರೆ ಆಯಾಯಾ ಸರ್ಟಿಫಿಕೇಟಿನ ಮೇಲೆ ಎರಡು ರೂಪಾಯಿನಿಂದ ಹಿಡಿದು ಐದು ರೂಪಾಯಿಗಳವರೆಗೂ ಕೊಡಬೇಕಾಗುತ್ತದೆ. ಖರೀದಿ ಪತ್ರ ಎಂಟ್ರಿ ಮಾಡಿರುವುದು ಸರ್ಟಿಫೈ ಆಗಬೇಕಾದರೆ ಸರ್ಕಲ್ ಇನ್‌ಸ್ಪೆಕ್ಟರು ಸರ್ಟಿಫೈ ಮಾಡಿದರೆ 25 ರೂಪಾಯಿ, ಶಿರಸ್ತೇದಾರರು ಮಾಡಿದರೆ 50 ರೂಪಾಯಿ, ತಹಸೀಲ್ದಾರರು ಮಾಡಿದರೆ 100 ರೂಪಾಯಿ. ಹೀಗೆ ಒಬ್ಬ ಜೀವಂತ ಇದ್ದೇನೆ ಎಂದು ಹೇಳಿ ಸರ್ಟಿಫೈ ಮಾಡಿಸಬೇಕಾದರೂ 5 ರೂಪಾಯಿನವರೆಗೂ ಕೊಡಬೇಕಾಗಿ ಬಂದಿರುವ ಪರಿಸ್ಥಿತಿ ನಮ್ಮ ಕಣ್ಣು ಮುಂದೆ ಇದೆ. ಅವನಿಗೆ ಬರತಕ್ಕ 10 ಅಥವಾ 15 ರೂಪಾಯಿ ಪೆನ್‌ಷನ್‌ನಲ್ಲಿ ಅವನು ಯಾವ ರೀತಿ ಇದನ್ನೆಲ್ಲಾ ಕೊಡಬೇಕು ಎಂಬುದನ್ನು ನಾವು ಸ್ವಲ್ಪ ಯೋಚನೆ ಮಾಡಬೇಕಾಗಿದೆ. ಬೊಂಬಾಯಿ ಕರ್ನಾಟಕ ಏರಿಯಾದಲ್ಲಿ 13 ರೂಪಾಯಿ ಪಗಾರದಲ್ಲಿ ಉಪಜೀವನ ಮಾಡತಕ್ಕ ಪರಿಸ್ಥಿತಿ ಇದೆ. ಅಂತಹವರು ಈ ಸರ್ಟಿಫಿಕೇಟ್ ತೆಗೆದುಕೊಳ್ಳಲು 8 ರೂಪಾಯಿ ಖರ್ಚು ಮಾಡಿಕೊಂಡು 22 ಮೈಲಿ ದೂರದಲ್ಲಿರುವ ತಾಲ್ಲೂಕು ಆಫೀಸಿಗೆ ಹೋಗಿ ಬರಬೇಕೆಂದರೆ ಎಷ್ಟು ಕಷ್ಟ ಇದೆ ಎಂಬುದನ್ನು ನೋಡಬೇಕು. ನಿಯಮ ಏನಿದೆಯೋ ಅದರ ಪ್ರಕಾರ ಮಾಡುವುದಾಗಿ ಟ್ರೆಜರಿ ಆಫೀಸರು ಹೇಳುತ್ತಾರೆಯೇ ಹೊರತು ಅವರ ಕಷ್ಟ ಏನಿದೆ ಎಂಬುದನ್ನು ಯಾರೂ ಕೇಳುವವರೇ ಇಲ್ಲ. ಎಲ್ಲರೂ ಕಣ್ಣು ಮುಚ್ಚಿಕೊಂಡು ಕುಳಿತಿರುತ್ತಾರೆ. ಉಪಾಧ್ಯಾಯರ ಗೋಳನ್ನು ಯಾರೂ ಕೇಳುವವರೇ ಇಲ್ಲದೇ ಇನ್ನೂ ಕೂಡ ನಮ್ಮ ಹುಡುಗರು ಅಜ್ಞಾನದ ಸ್ಥಿತಿಯಲ್ಲಿಯೇ ಇರಬೇಕಾದ ಪರಿಸ್ಥಿತಿ ಬಂದಿದೆ. ಆದ್ದರಿಂದ ನಿವೃತ್ತಿಹೊಂದಿರತಕ್ಕ ಪ್ರಾಥಮಿಕ ಉಪಾಧ್ಯಾಯರ ಪೆನ್‌ಷನ್ ಕೊಡುವಾಗ ಅವರು ನಿವೃತ್ತಿಹೊಂದಿದ ಒಂದೆರಡು ತಿಂಗಳಿನಲ್ಲೇ ಪೆನ್‌ಷನ್ ಕೊಡಬೇಕೆಂದು ಹೇಳುತ್ತೇನೆ ಮತ್ತು ಲೈಫ್ ಸರ್ಟಿಫಿಕೇಟ್ ಕೇಳುವುದರಲ್ಲಿ ಯಾವುದಾದರೂ ರೀತಿಯಲ್ಲಿ ಬದಲಾವಣೆ ಮಾಡಿ ಅವರಿಗೆ ತೊಂದರೆಯಾಗದಂತೆ ಅನುಕೂಲ ಮಾಡಿಕೊಡಬೇಕೆಂದು ಈ ಸಮಯದಲ್ಲಿ ಸರಕಾರದವರನ್ನು ಕೇಳಿಕೊಳ್ಳುತ್ತೇನೆ.

ಸರಕಾರದವರು ಮೇಲಿಂದ ಮೇಲೆ ವರ್ಷೇ ವರ್ಷೆ ಟ್ಯಾಕ್ಸ್‌ಗಳನ್ನು ತೆಗೆದುಕೊಳ್ಳುತ್ತಾ ಇರುವುದು ಹೆಚ್ಚುತ್ತಾ ಇರುವುದು ಬಹಳ ಶೋಚನೀಯವಾದ ವಿಚಾರ. 1956 ರಿಂದ 64 ರವರೆಗೂ ನೋಡಿದರೆ ಒಂದರಿಂದ ಹತ್ತರಷ್ಟು ಟ್ಯಾಕ್ಸ್ ಹೆಚ್ಚಾಗಿದೆ. ರೈತನ ಮೇಲೆ ತೆರಿಗೆಗಳನ್ನು ಹೆಚ್ಚಾಗಿ ಹಾಕುವುದರಿಂದ ಅವನು ಬೆಳೆ ಬೆಳೆಯುವುದನ್ನು ಬಿಡುವುದೂ ಅಲ್ಲದೆ ಅವನು ಸೋಮಾರಿಯಾಗಿ ಯಾವುದೇ ತರಹದ ಕೆಲಸ ಮಾಡದ ಹಾಗಾಗುತ್ತದೆ. ಈ ಒಂದು ನ್ಯೂನತೆಯನ್ನು ಸರಿಪಡಿಸ ಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ಬಿ. ಎಸ್. ಸುಬ್ಬಮ್ಮ (ಚಿಕ್ಕಮಗಳೂರು).—ಸ್ವಾಮಿ, ನಮ್ಮ ಮುಂದೆ ಇಟ್ಟಿರತಕ್ಕ ಡಿಮ್ಯಾಂಡುಗಳಿಗೆ ಪೂರ್ಣವಾಗಿ ಬೆಂಬಲವನ್ನ ಕೊಡುತ್ತಾ ಕೆಲವು ಮಾತುಗಳನ್ನು ಆಡಲು ಅಪೇಕ್ಷಿಸುತ್ತೇನೆ. ಮೊದಲನೆಯದಾಗಿ ಅಗ್ರಿಕಲ್ಚರಲ್ ಇನ್‌ಕಂ-ಟ್ಯಾಕ್ಸ್, ಸೇಲ್ಸ್-ಟ್ಯಾಕ್ಸ್ ಸಂಬಂಧದಲ್ಲಿ ಮಾತನಾಡುವುದಾದರೆ ಅಗ್ರಿಕಲ್ಚರಲ್ ಇನ್‌ಕಂ-ಟ್ಯಾಕ್ಸ್‌ಕೊಡತಕ್ಕ ಜನ ನಮ್ಮ ದೇಶದಲ್ಲಿ ಜಾಸ್ತಿ ಸಂಖ್ಯೆಯಲ್ಲಿ ಎಂದರೆ ನೂರಕ್ಕೆ ಎಂಭತ್ತು ಜನರು ಇದ್ದಾರೆ ಎಂಬುದನ್ನು ನಾವೆಲ್ಲರೂ ತಿಳಿದಿದ್ದೇವೆ. ಈ ದೇಶದಲ್ಲಿ ರೈತರು ಬೆಳೆವಂತಹ ಹೆಚ್ಚಿನ ಆಹಾರದ ಉತ್ಪಾದನೆಯನ್ನು ದೇಶ ಕಟ್ಟುವುದಕ್ಕೆ, ದೇಶದ ಅನುಕೂಲಕ್ಕೆ ತಮ್ಮ ಸರ್ವಸ್ವವನ್ನೂ ತ್ಯಾಗ ಮಾಡಲು ಸಿದ್ಧವಾಗಿರುತ್ತಾರೆ. ಆದರೆ ಇನ್‌ಕಂ-ಟ್ಯಾಕ್ಸ್‌ನ್ನು ಸರಕಾರದವರಿಗೆಕೊಡುವಂತಹ ಕಾಲದಲ್ಲಿ, ಲೆಕ್ಕಪತ್ರಗಳನ್ನು ಸರಕಾರದವರು ಪರಿಗಣನೆ ಮಾಡತಕ್ಕ ಕಾಲದಲ್ಲಿ ಅವರು ಎಷ್ಟು ಕಷ್ಟ ಪಡುತ್ತಾರೆ ಎಂಬುದನ್ನು ಈಗ ಮಾತನಾಡಿದಂತಹ ಮಾನ್ಯ ಸದಸ್ಯರು ಬಹಳ ಚೆನ್ನಾಗಿ ಸರಕಾರದವರಿಗೆ ತಿಳಿಸಿದ್ದಾರೆ. ರೈತನು ವಿದ್ಯಾವಂತನಲ್ಲ ? ಅಂತಹವನು ಇನ್‌ಕಂ ಟ್ಯಾಕ್ಸ್ ಇಲಾಖೆಯವರಿಗೆ ಸರಿಯಾದ ಸಮಜಾಯಿಷಿಯನ್ನು ಕೊಡಬೇಕೆಂದರೆ ಅವನು ಪುನರ್‌ಜನ್ಮವನ್ನೇ ಕಾಣತಕ್ಕ ಪರಿಸ್ಥಿತಿ ಇದೆ ಎಂಬುದನ್ನು ನಾವೆಲ್ಲರೂ ಕಂಡಿದ್ದೇವೆ. ಮೈಸೂರು ದೇಶದಲ್ಲಿ ಅಗ್ರಿಕಲ್ಚರಲ್ ಇನ್‌ಕಂ-ಟ್ಯಾಕ್ಸ್ ಕೊಡುವುದರಲ್ಲಿ ಬಹುಭಾಗ ಟ್ಯಾಕ್ಸ್‌ನ್ನು ವಿದೇಶೀ ವಿನಿಮಯ ಸಂಪಾದಿಸತಕ್ಕ ಕಾಫಿ ಬೆಳೆಗಾರರೇ ಕೊಡುತ್ತಾ ಇದ್ದಾರೆ ಎಂದರೆ ತಪ್ಪಾಗಲಾರದು. ನಮ್ಮ ಹಿಂದೂಸ್ಥಾನದಲ್ಲಿ ಬೆಳೆಯುವ 67 ಸಾವಿರ ಟನ್ ಕಾಫಿಯಲ್ಲಿ ಮೈಸೂರು ದೇಶದಲ್ಲೇ 47 ಸಾವಿರ ಟನ್ ಬೆಳೆಯುತ್ತದೆ. ಆದರೆ ಕಾಫಿ ಬೆಳೆಯುವವರಿಗೆ ಒಂದು ಕಡೆ ಅಗ್ರಿಕಲ್ಚರಲ್ ಇನ್‌ಕಂ-ಟ್ಯಾಕ್ಸ್ ಹಾಕುತ್ತಿದ್ದಾರೆ, ಇನ್ನೊಂದು ಕಡೆ ಇದೊಂದು ಇಂಡಸ್ಟ್ರಿ ಎಂದು ಪರಿಗಣಿಸಿ ಇಂಡಸ್ಟ್ರಿಯಲ್ ಇಲಾಖೆಗೆ ಸಂಬಂಧಪಡುವಂತಹ ಮಾಡಿ ಅಲ್ಲಿನ ರೂಲ್ಸ್‌ಗಳಿಗೆಲ್ಲಾ ಬದ್ಧರಾಗಿರುವಂತೆ ಮಾಡಿದ್ದಾರೆ. ಕಾಫಿ ಬೆಳೆಯುವವರು ದೇಶಕ್ಕೆ ಹೆಚ್ಚು ಸಂಪಾದನೆಯಾಗಲು ಕಾರಣರಾಗಿರುವಾಗ ಅವರ ಮೇಲೆ ಇಲ್ಲದ ಹೊರೆ ಹೇರಿ ತೊಂದರೆ ಮಾಡಿರುವುದರಿಂದ ಅವರಿಗೊಂದು ತಾತ್ಸಾರ ಮನೋಭಾವನೆ ಬರಲು ಅವಕಾಶವಾಗಿದೆ. ಹೆಚ್ಚು ಬೆಳೆಯುವುದಕ್ಕೆ ಬದಲಾಗಿ ಅವರ ಜೀವನಕ್ಕೆ ಎಷ್ಟು ಬೇಕೋ ಅಷ್ಟನ್ನು ಮಾತ್ರ ಬೆಳೆದರೆ ಸಾಕು, ಸರ್ಕಾರದ ತೆರಿಗೆ ಹೊರೆಯಿಂದ ತಪ್ಪಿಸಿಕೊಳ್ಳಬೇಕು ಎಂಬ ಭಾವನೆ ಅವರಲ್ಲಿ ಮೂಡುತ್ತಿದೆ. ಆದುದರಿಂದ ಸರ್ಕಾರದವರು ಹೆಚ್ಚು ದೇಶಕ್ಕೆ ಸಂಪಾದನೆ ಬರಲು ಕಾರಣರಾಗಿರುವ ಕಾಫಿಬೆಳೆಗಾರರ ಮೇಲೆ ಹೆಚ್ಚು ಕನಿಕರ ತೋರಿಸುವುದು ಒಳ್ಳೆಯದು. ಈಗ ಕೈಗಾರಿಕೆಯನ್ನು ಪ್ರಾರಂಭಿಸುವವರಿಗೆ ಅವರು ತೆಗೆದುಕೊಳ್ಳುವ ಮೆಷಿನರಿ ಮತ್ತು ಸಾಮಗ್ರಿಗಳ ಬಗ್ಗೆ ಡಿಪ್ರೀಸಿಯೇಷನ್ ಸರ್ಕಾರಕೊಡುತ್ತಿದೆ. ಮತ್ತು ಅವರ ವಿಚಾರದಲ್ಲಿ ಸರ್ಕಾರಕ್ಕೆ ಹೆಚ್ಚು ಕನಿಕರವಿದೆ. ಕಾಫಿಬೆಳೆಯುವವರು ಶೇಕಡ 54ರಷ್ಟು ಅಗ್ರಿಕಲ್ಚರಲ್ ಇನ್‌ಕಂ-ಟ್ಯಾಕ್ಸ್‌ಕೊಡುವಾಗ ಕೈಗಾರಿಕೆಗಳವರು ಶೇಕಡ 34 ರಷ್ಟು ಮಾತ್ರಕೊಡುತ್ತಿದ್ದಾರೆ. ಆದುದರಿಂದ ಸರ್ಕಾರ ಇದನ್ನು ಗಮನಿಸಿ ಯಾರಿಂದ ಹೆಚ್ಚು ತಮಗೆ ಉತ್ಪತ್ತಿ ಇದೆಯೋ ಅವರಿಗೆ ತಕ್ಕ ಸೌಲಭ್ಯ ಕಲ್ಪಿಸಿಕೊಡಬೇಕು. ಕಂಪನಿ ತೋಟಗಳಲ್ಲಿ ಒಂದು ಎಕರೆಗೆ ಸುಮಾರು 400 ರೂಪಾಯಿಗಳ ತೆರಿಗೆ ಬೀಳುವುದು ? ಖರ್ಚು ಕಳೆದು 92 ರೂಪಾಯಿ ಉಳಿಯುತ್ತದೆ. ಹಾಗಿರುವಾಗ ರೈತ ಯಾವರೀತಿ ದೇಶಕ್ಕಾಗಿ ಸಂಪಾದನೆ ಮಾಡಬೇಕು ಎಂಬುದನ್ನು ಗಮನಿಸಿ ರೈತರ ಹಿತದೃಷ್ಟಿಯಿಂದ ಅವನು ಹೆಚ್ಚಾಗಿ ತೆರಿಗೆಗೆ ಸಿಕ್ಕಿ ಬೀಳದ ಹಾಗೆ ನೋಡಿಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ಸೇಲ್ಸ್-ಟ್ಯಾಕ್ಸ್ ವಿಚಾರ ನೋಡಿದರೆ ಯಾವ ತೆರಿಗೆ ಹಾಕಿದರೂ ಕೂಡ ಅದು ರೈತರ ಮೇಲೆ ಬೀಳುವುದು. ಒಬ್ಬ ಒಂದು ಲಕ್ಷ ರೂಪಾಯಿಗಳ ಮಾರಾಟತೆರಿಗೆ ಕೊಡಬೇಕಾಗಿತ್ತು, ಆತ ಲಾಯರನ್ನಿಟ್ಟು ಅಪೀಲು ಮಾಡಿದಮೇಲೆ 7 ಸಾವಿರ ಮಾತ್ರ ಕೊಡಬೇಕಾಯಿತು. ತಿಳಿವಳಿಕೆ ಇಲ್ಲದವರು ಸರ್ಕಾರದಲ್ಲಿ ಅಪೀಲು ಹಾಕದಿದ್ದರೆ ಒಂದು ಲಕ್ಷವನ್ನೇ ಕೊಡಬೇಕಾಗುತ್ತದೆ. ಅನೇಕರು ಅವಿದ್ಯಾವಂತರೇನಿದ್ದಾರೆ ಅವರಿಗೆ ತೊಂದರೆಯಾಗುತ್ತಿದೆ. ಆದುದರಿಂದ ಇದನ್ನು ಯಾರಿಗೂ ನೋವಾಗದ ರೀತಿಯಲ್ಲಿ ಹಾಕಿ ವ್ಯವಸಾಯ ಮುಂತಾದ ಉದ್ಯಮಗಳು ಚೆನ್ನಾಗಿ ನಡೆದು ದೇಶಕ್ಕೆ ಅನುಕೂಲವಾಗುವಂತೆ ಮಾಡಬೇಕೆಂದು ಅರಿಕೆ ಮಾಡುತ್ತೇನೆ. ರೈತ ವಿದ್ಯಾವಂತನಾಗಿ ಸರಿಯಾಗಿ ತಿಳಿವಳಿಕೆ ಪಡೆದಾಗ ಸರ್ಕಾರ ಹಾಕುವ ತೆರಿಗೆಯಿಂದ ಹೇಗೆ ತಪ್ಪಿಸಿಕೊಳ್ಳಬಹುದು ಅಥವ ಅದಕ್ಕೆ ಹೇಗೆ ಹೊಂದಿಕೊಳ್ಳಬಹುದು ಎಂಬುದು ಅವನಿಗೆ ಗೊತ್ತಾಗುತ್ತದೆ.

(ಶ್ರೀಮತಿ ಬಿ. ಎಲ್. ಸುಬ್ಬಮ್ಮ)

ಪೆನ್‌ಷನ್ ವಿಷಯ ಹೇಳುವುದಾದರೆ ಸರ್ವಿಸಿನಲ್ಲಿ ಹೆಚ್ಚು ಕಾಲ ದುಡಿದು ಒಬ್ಬ ನೌಕರ ಪೆನ್‌ಷನ್ ಪಡೆಯಬೇಕಾದರೆ ಎಷ್ಟೋ ಸಲ ಬಹಳ ನಿಧಾನವಾಗುತ್ತದೆ, ಕೆಲವುವೇಳೆ ಸಾಯುವಾಗ ಕೂಡ ಸಿಕ್ಕಿರುವುದಿಲ್ಲ. ಆದುದರಿಂದ ಹಾಗಾಗದಂತೆ ನೋಡಿಕೊಂಡು ಜಾಗ್ರತೆ ರಿಟೈರ್ ಆದಕೂಡಲೆ ದೊರೆಯುವಂತೆ ಮಾಡಬೇಕು. ಅದಕ್ಕೆ ಇನ್ನೂ 2 ವರ್ಷ ಸರ್ವಿಸ್ಸಿರುವಾಗಲೆ ರಿಕಾರ್ಡನ್ನು ತರಿಸಿ ನೋಡಿ ಬೇಗ ಇತ್ಯರ್ಥಮಾಡಿ ರಿಟೈರ್ ಆದಕೂಡಲೆ ದೊರೆಯುವಂತೆ ಏರ್ಪಾಡು ಮಾಡಬೇಕು.

ಸಾಲಗಳು ಮತ್ತು ಮುಂಗಡಗಳ ವಿಚಾರದಲ್ಲಿ ಒಂದೆರಡು ಮಾತು. ನಮ್ಮ ಸರ್ಕಾರ ಸಾಲವನ್ನು ಕೊಟ್ಟು ಬಹಳವಾಗಿ ಸಹಾಯ ಮಾಡುತ್ತಿದೆ. ಆದರೆ ಸಾಲ ತೆಗೆದುಕೊಂಡವರು ಸಕಾಲದಲ್ಲಿ ವಾಪಸುಕೊಡುತ್ತಿಲ್ಲ, ಇದರಿಂದ ತೊಂದರೆಯಾಗುತ್ತಿದೆ. ಈ ವಿಷಯದಲ್ಲಿ ವ್ಯೆಯಕ್ತಿಕವಾಗಿ ನಾನು ಕೆಲವು ಮಾತನ್ನು ಹೇಳಬೇಕಾಗಿದೆ. ನಮ್ಮ ಚಿಕ್ಕಮಗಳೂರು ಪುರ ಸಭೆ ಸರ್ಕಾರದಿಂದ ತೆಗೆದುಕೊಂಡ ಯಾವ ಸಾಲವನ್ನೂ ಬಾಕಿ ನಿಲ್ಲಿಸಿಲ್ಲ. ಆದರೂ ಅಲ್ಲಿ ಇರುವ 50 ಸಾವಿರ ಜನರಿಗೆ ಕುಡಿಯುವ ನೀರಿನ ಸೌಕರ್ಯ ಕಲ್ಪಿಸಿಲ್ಲ. ಇದರಿಂದ ಬಹಳ ಕಷ್ಟವಾಗಿದೆ ಎಂದು ಪತ್ರಿಕೆಗಳಲ್ಲೂ ಪ್ರಕಟಿಸಿದ್ದಾರೆ, ಪ್ರತಿಭಟನೆ ಕೂಡ ಮಾಡಿರುವುದಿಲ್ಲ. ಆದರೂ ಕೂಡ ಅಲ್ಲಿಗೆ ಗಮನಕೊಟ್ಟಿಲ್ಲ. ಸಾಲ ವಾಪಸುಕೊಡಲು ಶಕ್ತಿ ಇಲ್ಲದಿರುವ ಸಂದರ್ಭಗಳೂ ಇವೆ. ವಾಪಸು ಕೊಡದಿರುವವರಿಗೆ ಸೌಲಭ್ಯ ಕೊಡುವುದು, ಕೊಡುವವರಿಗೆ ಸೌಕರ್ಯ ಮಾಡದಿರುವುದು ಸರಿಯಲ್ಲ. ಇದರಿಂದ ಪರಿಣಾಮ ವೇನಾಗುವುದೆಂದು ಯೋಚನೆ ಮಾಡಬೇಕು. 50 ಸಾವಿರ ಜನರಿಗೆ ಕುಡಿಯಲು ನೀರಿಲ್ಲದಿರುವಾಗ, ಸಿಕ್ಕಿದ ನೀರನ್ನು ಕುಡಿದು ರೋಗರುಜಿನಗಳಿಗೆ ಗುರಿಯಾಗುತ್ತಿರುವಾಗ, ಇಂಥ ವಿಷಯದಲ್ಲಿ ಗಮನ ಕೊಡದಿರುವುದು ಸರಿಯಲ್ಲ.

ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯಮಂತ್ರಿಗಳು).—ಕೊಡಬೇಕೆಂದು ಆರ್ಡರಾಗಿದೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಜಾಗ್ರತೆಯಾಗಿ ಈ ಕೆಲಸ ಮಾಡಿ ಸರ್ಕಾರಕ್ಕೆ ಬರಬೇಕಾದ ಬಾಕಿಯನ್ನು ವಾಪಸು ಪಡೆಯಲು ಹೆಚ್ಚಿನ ನಿಗಾಕೊಡಬೇಕೆಂದು ಪ್ರಾರ್ಥಿಸುತ್ತೇನೆ. ಇಷ್ಟು ಹೇಳಿ ಈಗ ನಮ್ಮ ಮುಂದಿರುವ ಎಲ್ಲ ಬೇಡಿಕೆಗಳಿಗೂ ಪೂರ್ಣ ಬೆಂಬಲಕೊಡುತ್ತೇನೆ.

† ಶ್ರೀ ಗಂಗಾಧರ ನಾಮೋಷಿ (ಗುಲ್ಬರ್ಗ).—ಅಧ್ಯಕ್ಷರೇ, ಭುವನೇಶ್ವರದ ಕಾಂಗ್ರೆಸ್ ಅಧಿವೇಶನದಲ್ಲಿ ಸಮಾಜವಾದವನ್ನು ಜಾರಿಗೆ ತರಲು ನಿರ್ಣಯ ಮಾಡಿರುವಾಗ ಈ ದಿನ ನಮ್ಮ ಮುಂದಿರುವ ಬೇಡಿಕೆಗಳಲ್ಲಿ ಭಾರತದ ರಾಜರುಗಳಿಗೆ ಕೊಡುವ ಪ್ರಿವಿ ಪರ್ಸ್ ಸಂಭಾವನೆ ಮತ್ತು ಭತ್ತೆಗಳು ಎಂಬ ಬಾಬುಗಳಿಗೆ ಹಣ ಕೇಳಿದ್ದಾರೆ. ಈ ಹಣ ಯಾರಿಗೆ ಕೊಡುವುದು ? ಕಾಂಗ್ರೆಸ್ಸಿನವರಿಗೇ ? ಜನರ ಪ್ರತಿನಿಧಿಗಳಿಗೆ ? ಅಥವ ಹಿಂದೆ ನಮ್ಮನ್ನಾಳುತ್ತಿದ್ದ ರಾಜರುಗಳಿಗೆ ? ಇದನ್ನು ಯಾರಿಗೆ ಏಕೆ ಕೊಡಬೇಕೆಂಬುದೇ ನಮಗೆ ತಿಳಿಯುವುದಿಲ್ಲ. ರಾಜರಿಗೆ ಇದನ್ನು ಕೊಡುವುದು ನ್ಯಾಯವಲ್ಲವಾದುದರಿಂದ ಇದಕ್ಕೆ ಮಂಜೂರಾತಿಯನ್ನು ಕೊಡುವುದಕ್ಕಾಗುವುದಿಲ್ಲ. ದಯಮಾಡಿ ವಾಪಸು ತೆಗೆದುಕೊಳ್ಳಿ ಎಂದು ಕೇಳಿಕೊಳ್ಳುತ್ತೇನೆ.

ಇನ್ನು ಮಾರಾಟತೆರಿಗೆ ವಿಷಯದಲ್ಲಿ ಒಂದೆರಡು ಪ್ರಶ್ನೆಗಳನ್ನು ಸರ್ಕಾರಕ್ಕೆ ಹಾಕಬೇಕಾಗಿದೆ. ಬೆಲೆಗಳು ಬಹಳವಾಗಿ ಏರಿವೆ ಎಂದು ಕಣ್ಣೊರೆಸುವ ಸಲುವಾಗಿ ಸರ್ಕಾರಿ ನೌಕರರಿಗೆ 5 ರೂಪಾಯಿಗಳ ಭತ್ಯವನ್ನು ಕೊಟ್ಟಿದ್ದೀರಿ. ಆದರೆ ಇವರ ಹಾಗೆ ಬೇರೆಬೇರೆ ಕಡೆಗಳಲ್ಲೆಲ್ಲಾ ಕೆಲಸ ಮಾಡುವ, ಅಂಗಡಿ ಮುಂತಾದ ಕಡೆಗಳಲ್ಲಿ ದುಡಿಯುವ ನೌಕರರ ಗತಿಯೇನು ಎಂದು ವಿಚಾರ ಮಾಡಿದ್ದೀರಾ ? ಹಿಂದೆ ಸೇಲ್ಸ್-ಟ್ಯಾಕ್ಸ್ ಮಸೂದೆ ಬಂದಾಗ ರಿಲೀಫ್ ಕೊಡಬೇಕಾದ ವಿಚಾರ ಒತ್ತಾಯಮಾಡಿದೆವು, ಅತ್ಯಾವಶ್ಯಕವಾಗಿ ಜನರಿಗೆ ಬೇಕಾಗಿರುವ ಸಾಮಾನುಗಳಮೇಲೆ ಕಾಳು ಕಡಿಮೇಲೆ ಈ ತೆರಿಗೆ ಇರಬಾರದು ಎಂದು ಹೇಳಿದರೂ ತೆಗೆದುಹಾಕಲಿಲ್ಲ. ಇದಕ್ಕಾಗಿ ನಾವು ವಾಕ್‌ಔಟ್ ಸಹಮಾಡಿ ಪ್ರತಿಭಟನೆಯನ್ನು ತೋರಿಸಿದೆವು. ಸರ್ಕಾರ ಸರ್ಕಾರಿ ನೌಕರರು ಮತ್ತು ಇತರ ನೌಕರರ ವಿಚಾರದಲ್ಲಿ ಡಿಸ್‌ಕ್ರಿಮಿನೇಟ್ ಮಾಡಿ ಅವರು ಪರಸ್ಪರ ಕಲೆಯದಂತೆ ಮಾಡಿ ಕ್ಯಾಪಿಟಲಿಸ್ಟ್ ಮೆಂಟ್ಯಾಲಿಟಿಯನ್ನು ಪ್ರದರ್ಶಿಸಿದ್ದಾರೆಂಬುದು ಸ್ಪಷ್ಟವಾಗುತ್ತದೆ.

ಪ್ರಾದೇಶಿಕ ಹಾಗೂ ರಾಜಕೀಯ ನಿವೃತ್ತಿ ವೇತನಗಳು ಎಂಬ ಬಾಬಿನ ಬೇಡಿಕೆ ಕೂಡ ಹಾಗೆಯೇ ಇದೆ. ಯಾವತ್ತೂ ಜೈಲಿಗೆ ಹೋಗಿಲ್ಲದೆ ಮತ್ತು ಏನೂ ಮಾಡಿಲ್ಲದೆ ಇರುವವರಿಗೆ ಮಂತ್ರಿಗಳಿಗೆ ಚುನಾವಣೆಯಲ್ಲಿ ಸಹಾಯ ಮಾಡಿದರು ಎಂದೋ ಏನೋ ಪೊಲಿಟಿಕಲ್ ಸಫರರ್ ಎಂದು ಭಾವಿಸಿ ಕಾಂಗ್ರೆಸ್ ಸೆಕ್ರೆಟರಿ ಒಂದು ಸರ್ಟಿಫಿಕೇಟ್ ಕೊಡುತ್ತಾರೆ. ಹೀಗೆ ಕೆಲವರು ಖಾದಿ ಹಾಕಿಕೊಂಡು ಸಾವಿರಾರು ರೂಪಾಯಿ ಪಡೆದಿದ್ದಾರೆ. ಹಾಗೆ ಅವಕಾಶವಿರಬಾರದು.

2·00 P.M.

ಇನ್ನು ಮುನಿಸಿಪ್ಯಾಲಿಟಿಗಳಿಗೆ ಕೊಡತಕ್ಕ ಸಾಲದ ವಿಚಾರಕ್ಕೆ ಬಂದರೆ: ಶ್ರೀ ಪುಟ್ಟಸ್ವಾಮಿಗಳು ಇಲ್ಲಿಯೇ ಇದ್ದಾರೆ-ಇದರಲ್ಲೂ ಪಕ್ಷಪಾತ, ಮತ್ತು ರಾಜಕೀಯ. ರೀಪೇಮೆಂಟ್ ಮಾಡದಿರತಕ್ಕ ಮುನಿಸಿಪಾಲಿಟಿಗಳಿಗೆ ಸಾಲ ದೊರೆಯುತ್ತಿರುವಂತೆ ಸಾಲವನ್ನು ಪೂರ್ತಿಯಾಗಿ ಕೊಟ್ಟಿರತಕ್ಕ ಮತ್ತು ಕಂತನ್ನು ಸಲೀಸಾಗಿ ಕೊಡುತ್ತಿರುವ ಮುನಿಸಿಪಾಲಿಟಿಗಳಿಗೆ ಸಾಲ ದೊರೆಯುತ್ತಿಲ್ಲ. ಹಾಗೆ ಒಂದು ಸಾರ್ತಿ ಪಡೆದ ಸಾಲವನ್ನು ಪೂರ್ತಿಯಾಗಿ ಕೊಡದಿದ್ದರೂ ಆ ಮುನಿಸಿಪಾಲಿಟಿಗಳಿಗೆ ಏನಾದರೊಂದು ಕಾರಣ ಹೇಳಿ ಸಾಲವನ್ನು ಮಂಜೂರು ಮಾಡುತ್ತಿದ್ದಾರೆ. ಸಾಲವನ್ನು ತೀರಿಸಿರತಕ್ಕ ಮುನಿಸಿ ಪಾಲಿಟಿಗಳಿಗೆ ಸಾಲ ಸರಾಗವಾಗಿ ದೊರೆಯುತ್ತಿಲ್ಲ.

Sri K. PUTTASWAMY.—The wrong impression that is now sought to be created would be prevented if I interrupt just now. During the beginning of the Third Plan, there were 145 schemes which were being implemented at a cost of Rs. 19 and odd crores. The allotment for the Third plan is Rs. 5·3 crores and we have not sanctioned any new schemes. The old schemes that had been sanctioned with the amount available, we have been distributing those amounts and trying to complete the works. Therefore, the allegation that there is some impartiality in the matter of giving loans would not arise.

ಶ್ರೀ ಗಂಗಾಧರ ನಾಮೋಷಿ.—ಮಂತ್ರಿಗಳೇನೋ ಮೂರನೇ ಪಂಚವಾರ್ಷಿಕ ಯೋಜನೆಯ ವಿಚಾರ ಹೇಳಿದರು. ಆದರೆ ಇರತಕ್ಕ ಸರ್ಕಾರ ಒಂದೇನೆ. ಮಂತ್ರಿಗಳು ಬದಲಾಗಬಹುದು. ಇಲ್ಲಿಗೆ 10 ವರ್ಷಗಳಿಂದ ಸಾಲ ಹಿಂದಕ್ಕೆ ಕೊಡದಿರತಕ್ಕ ಮುನಿಸಿಪಾಲಿಟಿಗಳಿಗೆ ಸಾಲ ಕೊಟ್ಟಿದ್ದಾರೆ. ಹೀಗೆ ರೀಪೇಮೆಂಟ್ ಮಾಡದ ಅನೇಕ ಮುನಿಸಿಪಾಲಿಟಿಗಳಿಗೆ ಸಾಲ ಕೊಡಲಾಗಿದೆ. ಬಾಕಿ ಇಲ್ಲದ ಮುನಿಸಿಪಾಲಿಟಿಗಳಿಗೆ ಸಾಲ ದೊರೆಯುವುದು ದುರ್ಲಭವಾಗಿದೆ. ಇನ್ನು ಕೆಲವು ಕಾಲ ಇದೇ ಮಂತ್ರಿಮಂಡಲ ಉಳಿದರೆ ಇವರೇ ನಾಲ್ಕನೇ ಪಂಚವಾರ್ಷಿಕ ಯೋಜನೆಯನ್ನೂ ಪ್ರಾರಂಭಿಸ ಬೇಕಾಗುತ್ತದೆ. ಏಕೆಂದರೆ ಈ ಮಂತ್ರಿಮಂಡಲ ಉಳಿಯುವುದಿಲ್ಲ ಎಂದು ಕೆಲವರು ಹೇಳುತ್ತಿದ್ದಾರೆ. ಆದರೆ ಆ ವಿಚಾರವನ್ನು ನಾನು ಚರ್ಚೆಮಾಡುವುದಕ್ಕೆ ಬರುವುದಿಲ್ಲ. ಆದರೆ ಈ ವಿಚಾರಕ್ಕೆ ಮಾನ್ಯ ಮಂತ್ರಿಗಳು ಸ್ವಲ್ಪ ಲಕ್ಷ್ಯ ಕೊಡಬೇಕೆಂದು ಹೇಳಿ ನನಗೆ ಈ ಎರಡು ಮಾತುಗಳನ್ನಾಡಲು ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†Sri A. P. APPANNA (Virajpet).—While lending my support to all the Demands that are before us, I would like to offer some remarks on some of the Demands. Regarding agriculture income-tax, the leader of the Opposition and also Smt. Subbamma have pointed certain dis-incentives in the agricultural sector. In the agriculture income-tax under which the assessments are made, I find that the concessions that are shown towards the assessees under the agriculture income-tax are less than the concessions that are provided in the General Income-tax Act. It is an admitted fact that the agricultural sector is not on the same footing with the industrial sector. A man who has taken an industrial undertaking has got quick returns and his footing on the development side is better than in the agricultural sector. If it is so, the incentives or the concessions must be more in the agricultural sector than in the business sector. Taking that fact into consideration, we find that certain allowances and certain concessions that are shown so far as the industrial sector is concerned are not shown in the agricultural sector. To point out regarding the depreciation allowance, if a man owns a car for business purpose on the industrial side, he is allowed 25 per cent depreciation allowance, whereas in the agricultural sector, only

(SRI A. P. APPANNA)

10 per cent is allowed. It is well known that in the case of a car owned and used by an agriculturalist on the countryside, the life of that car is longer than the life of the car owned by an industrialist in the city side. If that is so, then the depreciation allowance that is provided for the car in the agriculture income-tax must be higher than what is provided in the General Income-tax. In spite of the fact that it is brought to the notice of Government that the depreciation allowance for the machines, the vehicles and other materials that are used for the agricultural sector must be more than what is provided in the General Income-tax Act. That has not been done so far. There is a ray of hope in the speech of the Minister for Finance that an amending Bill will be brought before the House. I would like to submit that this fact must be taken into account. The depreciation allowance that is provided for the vehicles and other machinery in the agricultural sector must be at least equal to the allowance that is provided in the General Income-tax Act.

Regarding the developmental rebate that is provided in the agricultural sector, it is a fact that scientific cultivation of certain commercial crops has come into being. Formerly, the tea estate or the coffee estate was being cultivated in a very unscientific manner, but by the researches conducted recently, they have evolved certain methods and the agriculturists would do well in adopting those methods by renovating those estates and completely removing old trees and bringing up new cultivation. If this is encouraged I am quite sure that the tax that will come under this head will be more than what it is to-day. If we take into account the return from 1956 up to this year, the return from the agriculture income-tax is day by day coming down. In the Budget speech of the Finance Minister, the statistics furnished therein show that the return from the agriculture income-tax is coming down from 1956 up to this date. One factor which I would like to the notice of Government is that we must stop the decreasing trend and we must see that more agriculture income-tax comes under this head. If we encourage the planters to take up scientific cultivation in the agricultural sector, it is possible to get more income-tax under this head. If we are to allow scientific cultivation, then there must be developmental rebate provided in this Act. In the industrial sector whatever assets that are owned by an industrialist have got the depreciation and the entire scope of those assets is covered within 10 years or so and he recovers that amount but so far as the agricultural sector is concerned, that scope is not provided at all. If a man coverts his old which was developed on an unscientific basis, into scientific basis and whatever expenditure that he incurs finally, if it is not allowed–I do not say that the expenditure must be allowed in that year itself but some sort of percentage must be fixed—if that expenditure is not allowed to be deducted from the income, then no planter will be induced to take up scientific cultivation. If we are interested in bringing more revenue under this head, we must encourage scientific cultivation, which would result in greater production and

larger income to the State. If this is to be achieved, there must be a developmental rebate and that should be atleast as provided in the general income tax. If it is not provided for, I am quite sure that the decreasing trend which started from 1956 will persist and in 4 or 5 years time, it is possible we might not collect agricultural income tax at all.

Regarding the collection of this tax, it is only in some areas that the tax is being collected by the Agricultural Income-Tax Department. In other areas, the collections are made by the Revenue Department. In places where the Tax Department collects, the income from this source is more but where the Revenue Department collects, it is less because they do not know the method of assessment and are not competent. Coorg is the only place where the assessment is properly done and collection is also proper because it is collected by the agricultural income-tax department. This system should be provided in all the other areas. Otherwise there is no hope of improving this department.

I shall come to the question of promotions. There is a proposal that for filling up the higher posts in the department, Government wants to bring in certain people from other departments. There are senior officers who have put in many years of service in the agricultural income tax department and they should have sufficient scope for promotions. I am given to understand that though the Commissioner for Agricultural Income Tax has recommended that promotions and selections should be made within the Department, the General Administration Department is trying to bring in other people from other departments. If that happens, I feel that the people working in the department itself will have no incentive and we will not be doing justice to them.

Regarding disposal of pension papers, though the Hon. Minister for Finance gave an assurance last year that they would be disposed of within 6 months, there are instances where they are deliberately delayed. Honest and sincere officers who have retired are being penalised. Needless hurdles are being put in the way of their getting pensions, and this is the way that some officers who were not allowed to be corrupt, take revenge on the honest officer. A time limit should be imposed for disposing of pension papers and an officer should be able to get his pension soon after retirement. Otherwise, things would reach a stage where the retired officers would have to go from office to office to work up their papers and even offer tips. There are people who have not got their pensions even after 2 or 3 years after retirement.

Regarding loans and advances to local bodies, loans are being given to local bodies for providing water facilities. The tests to be applied in sanctioning such loans are : 1. whether there is dire necessity for providing water facilities, and 2. the capacity of the local body concerned to return the loan. Local bodies which satisfy these two conditions must be encouraged because the amount will come back to Government and the need for water would be satisfied.

†ಶ್ರೀ ಎಸ್. ಗೋಪಾಲ ಗೌಡ (ತೀರ್ಥಹಳ್ಳಿ).—ಸ್ವಾಮಿ, ಸರ್ಕಾರದವರು ಇವತ್ತು ಈ ಸಭೆಯಲ್ಲಿ ಮಂಡಿಸಿರುವ 1, 5, 34, 35, 36, 40, 41, 52, 54, ನಂಬರಿನ ಬೇಡಿಕೆಗಳ ಬಗ್ಗೆ ನಾನು ವಿರೋಧಿಸುತ್ತಾ ಕೆಲವು ಮಾತುಗಳನ್ನು ಹೇಳಬೇಕೆಂದಿದ್ದೇನೆ. ಕೃಷಿ ಆದಾಯದ ತೆರಿಗೆಯ ಅಕರಣೆ

(ಶ್ರೀ ಎಸ್. ಗೋಪಾಲ ಗೌಡ)

ಗಾಗಿ ನಾವು 4 ಲಕ್ಷ 29 ಸಾವಿರ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದೇವೆ. ಆದಾಯ 75 ಲಕ್ಷ ರೂಪಾಯಿಗಳಷ್ಟು ಇದೆಯೆಂದು ಕಂಡುಬರುತ್ತಾ ಇದೆ. ಭೂಕಂದಾಯ ರದ್ದುಪಡಿಸಿ ಕೃಷಿ ಆದಾಯದ ಮೇಲೆ ತೆರಿಗೆ ವಿಧಿಸಬೇಕು, ಅದು ನೇರವಾದ ತೆರಿಗೆಯಾಗುತ್ತದೆ ಮತ್ತು ಪ್ರಗತಿದಾಯಕವಾದ ತೆರಿಗೆ ಯಾಗುತ್ತದೆಂದು ಹೇಳಿ ನಾವು ಅನೇಕಸಾರಿ ಸರ್ಕಾರವನ್ನು ಒತ್ತಾಯಪಡಿಸುತ್ತಾ ಬಂದಿದ್ದೇವೆ. ಆದರೆ ಕೃಷಿ ಮೇಲೆ ಆದಾಯದ ತೆರಿಗೆಯನ್ನು ತಾತ್ವಿಕವಾಗಿ ಸರ್ಕಾರದವರು ಜಾರಿಗೆ ತಂದಿದ್ದರೂ ಕೂಡ ಈ ಒಂದು ತೆರಿಗೆಯ ಆಕರಣೆ ವಿಷಯದಲ್ಲಿ ಕ್ರಮವಾದ, ಗೊತ್ತಾದ, ಮತ್ತು ಕಡ್ಡಾಯ ಪೂರ್ವಕವಾದ ಆಕರಣೆಯ ಪದ್ಧತಿಯನ್ನು ಈ ಸರ್ಕಾರದವರು ಜಾರಿಗೆ ತರುವುದರಲ್ಲಿ ಏಕೋ ಬಹಳ ಹಿಂದುಮುಂದು ನೋಡುತ್ತಿದ್ದಾರೆ.

ಜೊತೆಗೆ ಭೂಸುಧಾರಣೆಯನ್ನು ಕೈಗೊಳ್ಳುವ ವಿಷಯದಲ್ಲಿ ಸರ್ಕಾರಕ್ಕೆ ಹೇಗೆ ಮನಸ್ಸಿಲ್ಲವೋ ಹಾಗೆಯೇ ಕೃಷಿ ಆದಾಯ ತೆರಿಗೆಯನ್ನು ಕೂಡ ಪೂರ್ತಿಯಾಗಿ ಜಾರಿಗೆ ತರುವುದಕ್ಕೆ ಕೂಡ ಮನಸ್ಸಿಲ್ಲ ಎನ್ನುವುದು ಇದರಿಂದ ಕಂಡು ಬರುತ್ತದೆ.

ಇನ್ನು ಮಾರಾಟ ತೆರಿಗೆಯ ವಿಷಯದಲ್ಲಿ ಈಗಾಗಲೇ ನಾವು ಅನೇಕ ಬಾರಿ ಹೇಳಿದ್ದೇವೆ ಇದರಿಂದ ಕೊಂಡುಕೊಳ್ಳುವವರಿಗೂ ಮತ್ತು ಮಾರಾಟ ಮಾಡತಕ್ಕ ಅಂಗಡಿಯವರಿಗೂ ಕಿರುಕುಳ ಉಂಟಾಗುತ್ತಿದೆ ಎನ್ನುವುದನ್ನು ಹಾಗೂ ಈ ತೆರಿಗೆಯನ್ನು ಆಕರಣೆ ಮಾಡುವ ವಿಷಯದಲ್ಲಿ ಬಹಳ ಲೋಪದೋಷಗಳು ಇದ್ದು ಬಹಳ ಮಟ್ಟಿಗೆ ತೆರಿಗೆ ಆಕರಣೆಯಾಗುತ್ತಾ ಇಲ್ಲ ಎನ್ನುವ ವಿಷಯವನ್ನು ನಾವು ಹೇಳುತ್ತಾ ಬಂದಿದ್ದೇವೆ. ಈ ಮಾರಾಟ ತೆರಿಗೆಯ ವಿಷಯದಲ್ಲಿ ಒಂದು ವಿಷಯವನ್ನು ನಾನು ಸರ್ಕಾರದ ಗಮನಕ್ಕೆ ತರಬೇಕೆಂದಿದ್ದೇನೆ. ಅದೇನೆಂದರೆ ಈ ದಿನ ಈ ಸಭೆಯ ಮುಂದೆ ಈ ಬೇಡಿಕೆಗಳನ್ನು ಮಂಡಿಸಿದ ಮಂತ್ರಿಗಳು ಗೈರುಹಾಜರಾಗಿದ್ದಾರೆ. ಮಾನ್ಯ ಅಧ್ಯಕ್ಷರು ಈ ವಿಷಯ ವನ್ನು ಸಂಬಂಧಪಟ್ಟವರಿಗೆ ತಿಳಿಸಿದರೆ ಒಳ್ಳೆಯದು.

ಶ್ರೀ ಕೆ. ಪುಟ್ಟಸ್ವಾಮಿ.—ಈಗ ಮಾನ್ಯ ಸದಸ್ಯರು ಹೇಳುವ ವಿಷಯದಿಂದ ಒಂದು ತಪ್ಪು ಅಭಿಪ್ರಾಯ ಬರುತ್ತದೆ. ಈ ಸಭೆಯಲ್ಲಿ ಇರತಕ್ಕವರಿಗೆ ಇಲ್ಲಿನ ಪರಿಸ್ಥಿತಿ ಏನಿದೆ ಎಂಬುದು ಗೊತ್ತಾಗುತ್ತದೆ, ಆದರೆ ಹೊರಗಡೆ ಇರುವವರಿಗೆ ಸರ್ಕಾರದ ಪರವಾಗಿ ಸಭೆಯಲ್ಲಿ ಯಾರೂ ಇರಲಿಲ್ಲವೋ ಏನೋ ಎನ್ನುವ ಅಭಿಪ್ರಾಯ ಬರುತ್ತದೆ. ಆದ್ದರಿಂದ ಮಾನ್ಯ ಸದಸ್ಯರು ಹೇಳುವುದು ಸರಿಯಲ್ಲ.

ಶ್ರೀ ಎಸ್. ಗೋಪಾಲ ಗೌಡ.—ಮಾನ್ಯ ಮುನಿಸಿಪಲ್ ಶಾಖೆಯ ಸಚಿವರು ಈಗ ಈ ಸಭೆಯಲ್ಲಿ ಇದ್ದಾರೆ. ಅವರು ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಪಟ್ಟ ವಿಷಯಗಳಿಗೆ ಉತ್ತರವನ್ನು ಕೊಡ ಬಹುದು ಆದರೆ ಮಾರಾಟತೆರಿಗೆ ಪೆನ್‌ಷನ್ ಮುಂತಾದ ವಿಷಯಗಳ ಬಗ್ಗೆ ಅವರು ಏನು ಉತ್ತರ ವನ್ನು ಹೇಳುವುದಕ್ಕೆ ಸಾಧ್ಯ? ಮಾರಾಟತೆರಿಗೆಯ ವಿಷಯದಲ್ಲಿ ಒಂದು ಉದಾಹರಣೆಯನ್ನು ನಾನು ಹೇಳುತ್ತೇನೆ. ರೇಡಿಯೋ ಮಾರಾಟ ಮಾಡತಕ್ಕ ಒಬ್ಬ ವ್ಯಾಪಾರಿ ಇದ್ದಾನೆ ಎಂದು ಇಟ್ಟು ಕೊಳ್ಳೋಣ. ಅವನು 1961-62ನೇ ಇಸವಿಯಲ್ಲಿ ಎಷ್ಟು ರೇಡಿಯೋಗಳನ್ನು ತರಿಸಿದ್ದ; ಎಷ್ಟು ರೇಡಿಯೋಗಳನ್ನು ಮಾರಾಟ ಮಾಡಿದ ಎಂಬ ಲೆಕ್ಕ ಇರುತ್ತದೆ. ಅದು ಕದ್ದು ಮಾರಾಟ ಮಾಡುವ ವಸ್ತುವಲ್ಲ. ಅವನು ಯಾರಿಗಾದರೂ ರೇಡಿಯೋಗಳನ್ನ ಮಾರಾಟ ಮಾಡಿರಲೇಬೇಕು. ಅವನ ಹತ್ತಿರ ಲೈಸೆನ್ಸ್ ಇದ್ದೇ ಇರುತ್ತದೆ. ಅವನು ಒಂದು ವರ್ಷಕ್ಕೆ 500 ರೂಪಾಯಿ ಟ್ಯಾಕ್ಸ್ ಕೊಡ ಬೇಕೆಂದು ಲೆಕ್ಕ ಇದ್ದರೆ ಅದರ ಮೇಲೆ ಮತ್ತೆ 500 ರೂಪಾಯಿ ಅಸೆಸ್ ಮಾಡಿದ್ದೇವೆ ಎಂದು ಅಧಿಕಾರಿಗಳು ಹೇಳುತ್ತಾರೆ. ಒಂದುವೇಳೆ ಹಾಗೆ ಆದರೆ ಆ ವ್ಯಾಪಾರಸ್ಥ 500 ರೂಪಾಯಿಗಳನ್ನು ಹೆಚ್ಚಿಗೆ ಕೊಡುವುದಕ್ಕೆ ಹೇಗೆ ಸಾಧ್ಯ? ನಾನು ಮತ್ತೆ ಕೋರ್ಟಿಗೆ ಅಪೀಲು ಹೋಗುತ್ತೇನೆ ಎಂದರೆ ಮೊದಲು ಸರ್ಕಾರಕ್ಕೆ ಕೊಡಬೇಕಾದ ಹಣವನ್ನು ಕೊಟ್ಟು ಆಮೇಲೆ ಕೋರ್ಟಿಗೆ ಹೋಗು ಎಂದು ಅಧಿಕಾರಿಗಳು ಹೇಳುತ್ತಾರೆ. ಇಂಥಾ ಕೆಲವು ಲೋಪದೋಷಗಳು ಇದರಲ್ಲಿ ಇವೆ. ಇವುಗಳ ಬಗ್ಗೆ ಸರ್ಕಾರದವರು ಲಕ್ಷ್ಯ ಕೊಟ್ಟಿಲ್ಲ. ಮತ್ತು ಲಕ್ಷಗಟ್ಟಲೇ ವ್ಯಾಪಾರಮಾಡಿ ಅಧಿಕಾರಿಗಳನ್ನು ಸರಿ ಪಡಿಸಿಕೊಂಡು 200-300 ರೂಪಾಯಿಗಳ ಲೆಕ್ಕವನ್ನು ತೋರಿಸುವವರೂ ಎಷ್ಟೋ ಜನ ಇದ್ದಾರೆ. ಈ ಬಾಬಿನಲ್ಲಿ ಸರ್ಕಾರಕ್ಕೆ ಸುಮಾರು 14 ಕೋಟಿ 71 ಲಕ್ಷ ರೂಪಾಯಿಗಳ ಆದಾಯ ಬಂದರೆ ಇದರಲ್ಲಿ ಇನ್ನು 5 ಕೋಟಿ ರೂಪಾಯಿಗಳು ಸೇರಿ ಹೋಗುತ್ತದೆ. ಈ ರೀತಿ ಆಗತಕ್ಕಂಥ ಕೆಲವು ಬಾಗಿಲು ಕಿಟಕಿಗಳು ಇವೆ. ಬಾಗಿಲು ಮುಚ್ಚಿದರೆ ಕಿಟಕಿಯಲ್ಲಿ ಬರುತ್ತಾರೆ. ಕಿಟಕಿಯನ್ನು ಮುಚ್ಚಿದರೆ ಬಾಗಿಲಲ್ಲಿ ಬರುತ್ತಾರೆ ಇದು ಸಾರ್ರೋದ್ಧರವಾಗಿ ನಡೆಯುತ್ತಿದೆ. ಈ ಬಾಗಿಲು ಮತ್ತು ಕಿಟಕಿಯ ಕಂಬಿಗಳನ್ನು ಮುಚ್ಚುವುದಕ್ಕೆ ಸರ್ಕಾರದವರಿಗೆ ಆಗಿಲ್ಲ ಎಂದು ನಾನು ವಿಷಾದದಿಂದ

ಹೇಳ ಬೇಕಾಗಿದೆ. ಇಂಥಾ ಕಿರುಕುಳಗಳನ್ನೂ ಮತ್ತು ತೆರಿಗೆ ಆಕರಣೆಯಾಗತಕ್ಕಂಥ ವಿಧಾನಗಳನ್ನು ಸರ್ಕಾರದವರು, ಹಣಕಾಸಿನ ಮಂತ್ರಿಗಳು ಸ್ವಲ್ಪ ಕಣ್ಣು ಬಿಟ್ಟು ಪರಿಶೀಲನೆ ಮಾಡಿ ಅವುಗಳನ್ನು ಸರಿಪಡಿಸಬೇಕೆಂದು ನಾನು ಈ ಸಂದರ್ಭದಲ್ಲಿ ಸಲಹೆ ಕೊಡಬಯಸುತ್ತೇನೆ.

ಇನ್ನು ನಿವೃತ್ತಿ ವೇತನಗಳ ಬಗ್ಗೆ ಮಾನ್ಯ ಸದಸ್ಯರನೇಕರು ಪ್ರಸ್ತಾಪ ಮಾಡಿದ್ದಾರೆ. ಸುಮಾರು ಎರಡು ಕೋಟಿ 21 ಲಕ್ಷ ರೂಪಾಯಿಗಳ ನಿವೃತ್ತಿ ವೇತನವನ್ನ ಪ್ರತಿವರ್ಷ ನಮ್ಮ ಸರ್ಕಾರದವರು ಪಾವತಿ ಮಾಡುತ್ತಾರೆ. ಈ ಸರ್ಕಾರದಲ್ಲಿ ಸೇವೆ ಮಾಡಿ ನಿವೃತ್ತರಾದವರಿಗೆ ಸರ್ಕಾರದವರು ಕೊಡತಕ್ಕಂಥ ವೇತನಗಳು ಏನು ಎಂದು ನಾವು ಪರಿಶೀಲನೆ ಮಾಡುವುದಾದರೆ ಈಗಿನ ಬೆಲೆಗೂ ಜೀವನದ ವೆಚ್ಚಕ್ಕೂ ಮತ್ತು ಅವರು ಪಡೆಯತಕ್ಕಂಥ ವೇತನಗಳಿಗೂ ಏನೇನೂ ಸಂಬಂಧವಿಲ್ಲ ಎನ್ನುವುದನ್ನು ನಾವು ಚೆನ್ನಾಗಿ ಕಂಡು ಕೊಳ್ಳಬಹುದು. ನಿವೃತ್ತರಾದವರಿಗೆ ವಯಸ್ಸಾಗಿದ್ದರೂ ಸಹ ಅವರು ಊಟಮಾಡಲೇ ಬೇಕು, ವಿಶ್ರಾಂತಿಯನ್ನು ಪಡೆಯಬೇಕು. ಸಾವು ಬಂದಾಗ ಮರಣವನ್ನು ಹೊಂದ ಬೇಕು. ಅವರಿಗೆ ಮಕ್ಕಳು ಇರಬಹುದು, ಅಳಿಯಂದಿರು ಇರಬಹುದು, ಸೊಸೆಯರು ಇರಬಹುದು ಅವರಿಗೆ ಅಲ್ಪ ಸ್ವಲ್ಪ ಆಸ್ತಿ ಪಾಸ್ತಿಗಳೂ ಇರಬಹುದು. ಆದರೆ ಸಾಮಾನ್ಯವಾಗಿ 100-200 ರೂಪಾಯಿಗಳ ಸಂಬಳವನ್ನು ಪಡೆದು ನಿವೃತ್ತರಾಗಿರತಕ್ಕವರ ಒಂದು ಸರ್ವೆಯನ್ನು ನಾವು ನಡೆಸಿದರೆ ಅವರು ಇವೊತ್ತು ಅನಾಥರಾಗಿದ್ದಾರೆ. ಅವರಿಗೆ ಇವೊತ್ತು ಬರತಕ್ಕಂಥ ನಿವೃತ್ತಿ ವೇತನ ಎಷ್ಟು ಎಂದು ನೋಡುವುದಾದರೆ ಕೇವಲ 30,35,50,60,70 100 ರೂಪಾಯಿಗಳ ಒಳಗೇ ಬರುತ್ತದೆ. ಅವರು ಕೇವಲ ಇಷ್ಟು ನಿವೃತ್ತಿವೇತನಗಳನ್ನು ಸರ್ಕಾರದಿಂದ ಪಡೆದು ಕೊಂಡು ಇವೊತ್ತಿನ ಸ್ಥಿತಿಯಲ್ಲಿ ಯಾವ ರೀತಿ ಅವರು ಜೀವನ ನಡೆಸುವುದಕ್ಕೆ ಸಾಧ್ಯ ಎನ್ನುವುದನ್ನು ಸರ್ಕಾರದವರು ವಿಚಾರಮಾಡಿದರೆ ಅವರ ಸ್ಥಿತಿಗತಿಗಳು ಭಯಾನಕವಾಗಿವೆ. ದಾರುಣವಾಗಿದೆ. ನಿಜವಾಗಿಯೂ ಮನುಷ್ಯಮಾತ್ರದವನು ಅದನ್ನು ನೋಡಿ ಸಹಿಸುವುದಕ್ಕಾಗುವುದಿಲ್ಲ. ಅಷ್ಟು ಹೀನಸ್ಥಿತಿಯಲ್ಲಿದ್ದಾರೆ. ಈ ಸಂಬಂಧದಲ್ಲಿ ಕಳೆದ ವರ್ಷ ನಾನು ಒಂದು ಪ್ರಶ್ನೆಯನ್ನು ಕಳುಹಿಸಿ ಕೊಟ್ಟಿದ್ದೆ. ಅದಕ್ಕೆ ನಮ್ಮ ಮಾನ್ಯ ಹಣಕಾಸಿನ ಮಂತ್ರಿಗಳಾದ ಶ್ರೀಮಾನ್ ಜತ್ತಿಯವರು ಉತ್ತರವನ್ನು ಕೊಡುತ್ತಾ ಈಗ ನಮ್ಮಲ್ಲಿ ಹಣವಿಲ್ಲ. ಈ ವಿಷಯವನ್ನು ಪರಿಶೀಲನೆ ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿದ್ದರು. ಏನೋ ಅವರಿಗೆ ಕರುಣೆ ಬಂದು ಈಗ ಒಟ್ಟಾರೆ 5 ರೂಪಾಯಿಗಳ ತುಟ್ಟಿ ಭತ್ಯವನ್ನು ಕೊಡುತ್ತೇವೆಂದು ಹೇಳಿದ್ದಾರೆ. ಅದಕ್ಕೋಸ್ಕರ ನಾನು ಅವರಿಗೆ ಕೃತಜ್ಞತೆಯನ್ನು ಅರ್ಪಿಸುತ್ತೇನೆ. 70 ವರ್ಷ ಮತ್ತು ಅದಕ್ಕಿಂತ ಹೆಚ್ಚು ವಯಸ್ಸಿನವರಾದ ಅನಾಥರಿಗೆ ತಿಂಗಳು ಒಂದಕ್ಕೆ 15 ರೂಪಾಯಿಗಳ ವಿಶ್ರಾಂತಿ ವೇತನವನ್ನು ಕೊಡುತ್ತೇವೆಂದು ಸರ್ಕಾರದವರು ಹೇಳಿದ್ದಾರೆ. ಇದು ತಾತ್ವಿಕವಾದ, ಭದ್ರವಾದ ಸಮಾಜದ ಒಂದು ಹೆಜ್ಜೆಯನ್ನು ರಾಜ್ಯ ಸರ್ಕಾರ ಇಡುತ್ತಿದೆ ಎಂದು ನಾವು ಸಮಾಧಾನ ಪಟ್ಟುಕೊಳ್ಳಬೇಕಾಗಿದೆ.

ಇನ್ನು ಶ್ರೀಮಾನ್ ಅಪ್ಪಣ್ಣನವರು ಹೇಳಿದ ಮಾತನ್ನು ನಾನು ಪ್ರಸ್ತಾಪ ಮಾಡುತ್ತೇನೆ. ಈಗ ಯಾರಾದರೂ ಒಬ್ಬ ಸರ್ಕಾರಿ ನೌಕರರು 1964ನೇ ಇಸವಿ ಏಪ್ರಿಲ್ ತಿಂಗಳಿನಲ್ಲಿ ನಿವೃತ್ತನಾಗುತ್ತಾರೆ ಎನ್ನುವ ಸಂದರ್ಭ ಇದ್ದರೆ ಅವರಿಗೆ ಸಂಬಂಧಪಟ್ಟ ಪೆನ್‌ಷನ್ ಕಾಗದ ಪತ್ರಗಳನ್ನೆಲ್ಲಾ ಮಾರ್ಚಿ ತಿಂಗಳನಲ್ಲಿಯೇ ಪರಿಶೀಲನೆ ಮಾಡಿ ಅವರಿಗೆ ಎಷ್ಟು ಹಣವನ್ನು ವಿಶ್ರಾಂತಿ ವೇತನವಾಗಿ ಪಾವತಿ ಮಾಡಬೇಕು ಎನ್ನುವುದನ್ನು ರೆಡಿಯಾಗಿ ಮಾಡಿ ಇಟ್ಟಿರಬೇಕು. ಏಪ್ರಿಲ್ ತಿಂಗಳಿನಲ್ಲಿ ಆ ನೌಕರನು ಟ್ರೆಜರಿಗೆ ಬಂದರೆ ಪೆನ್‌ಷೆನ್ ಹಣ ಇಷ್ಟು ಎಂದು ಅವನ ಕೈಗೆ ಬರುವಂತೆ ಇರಬೇಕು. ಆ ರೀತಿ ಮಾಡದೆ ಹೋದರೆ ಇದು ಸರ್ಕಾರ ಎಂದು ಹೆಸರು ಹೇಳಿಸಿಕೊಳ್ಳುವುದಕ್ಕೆ ಲಾಯಕ್ಕಾಗುವುದಿಲ್ಲ. ಹಳೆಯ ಕಾಲದ ಓಬೀರಾಯನ ಕಾಲದ ಸಂಸ್ಕಾರ ಬಂದು ಪಾಪಗ್ರಸ್ಥವಾದ ಸರ್ಕಾರವಾಗಿದೆ, ಈ ವಿಷಯದಲ್ಲಿ.

2-30 P. M.

ವಯಸ್ಸಾದವರು ಕೋಲುಗಳನ್ನು ಹಿಡಿದುಕೊಂಡು ಟ್ರೆಜರಿಗೆ ಬಂದು ಕ್ಯೂನಲ್ಲಿ ನಿಂತಿರುವುದನ್ನು ನೋಡಿದ್ದೇವೆ. ನೂರಾರು ಸಲ ಪತ್ರಗಳನ್ನು ಬರೆದೂ ಬರೆದೂ ಬೇಸತ್ತು ಎಷ್ಟೋ ಜನ ಸತ್ತು ಹೋಗಿರುವುದನ್ನೂ ನೋಡಿದ್ದೇವೆ, ಪೆನಷೆನ್ ತೆಗದುಕೂಳ್ಳಲಾರದೆ. ಇಂಥ ಕನಿಕರ ಸ್ಥಿತಿಯಲ್ಲಿ ಸಹಸ್ರಾರು ಜನ ಇದೇ ಸರ್ಕಾರದ ಒಳ್ಳೆಯ ಸೇವಕರು ತಮ್ಮ ಪೂರ್ತಿ ಜೀವನವನ್ನು ಸರ್ಕಾರದ ಸೇವೆಗೆ ಮುಡುಪಾಗಿಟ್ಟು ಸೇವೆ ಸಲ್ಲಿಸಿದವರ ಬಗ್ಗೆ ಇವತ್ತು ಅಧಿಕಾರದಲ್ಲಿ ಕುರ್ಚಿ ಹಿಡಿದುಕೊಂಡು ಕುಳಿತಿರತಕ್ಕ ಜನಗಳಿಗೆ ಕರುಣೆ ಇಲ್ಲ. ಅವರು ನಿಜವಾಗಿಯೂ ಸತ್ತು ಬದುಕಿದ್ದಾರೆ ಎಂದು ಕಟುವಾಗಿ ಹೇಳಬೇಕಾಗುತ್ತದೆ. ಇಂಥ ವಿಷಯದಲ್ಲಿ ಯಾವ ವಿಳಂಬಕ್ಕೂ ಅವಕಾಶವಿರಬಾರದು. ಸರ್ಕಾರದಲ್ಲಿ ಆಗಬೇಕಾದ ತೀರ್ಮಾನಗಳಿರಲಿ, ಸೆಕ್ರೆಟೇರಿಯಟ್ ಮಟ್ಟದಲ್ಲಿ ಆಗಬೇಕಾದ ತೀರ್ಮಾನಗಳಿರಲಿ, ಜಿಲ್ಲಾ ಅಥವಾ ಸ್ಥಳೀಯ ಮಟ್ಟದಲ್ಲಿ ಆಗಬೇಕಾದ ತೀರ್ಮಾನಗಳಿರಲಿ ಇಂಥ ತಾರೀಖು

(ಶ್ರೀ ಎಸ್. ಗೋಪಾಲ ಗೌಡ)

ನಿವೃತ್ತರಾಗುತ್ತಾನೆಂದು ಗೊತ್ತಾದ ಮೇಲೆ—ಎಕ್ಸ್‌ಟೆನ್ಷನ್ ಕೊಡುವ ವಿಷಯ ಸರ್ಕಾರದ ಮುಂದೆ ಇಲ್ಲದ ಪಕ್ಷದಲ್ಲಿ—ನಿವೃತ್ತನಾಗುವ ತಾರೀಖಿಗೆ ಮುಂದಿನ ತಿಂಗಳು ಅವನ ವಿಶ್ರಾಂತಿ ವೇತನ ದೊರಕಬೇಕು. ಇದನ್ನು ರಾಜ್ಯ ಸರ್ಕಾರ, ಸಂಬಂದಪಟ್ಟ ಇಲಾಖೆಯವರು, ಸಂಬಂಧಪಟ್ಟ ಮಂತ್ರಿಗಳು ತೀವ್ರವಾಗಿ ಗಮನಿಸಬೇಕು ಎಂದು ಈ ಬಗ್ಗೆ ಬಹಳ ಒತ್ತಾಯಪೂರ್ವಕವಾಗಿ ಎಲ್ಲ ನಿವೃತ್ತಿ ವೇತನವನ್ನು ಪಡೆಯುತ್ತಿರುವ ಇನ್ನು ಮುಂದೆ ಪಡೆಯುವುದಕ್ಕೆ ಅರ್ಹತೆಯನ್ನು ಹೊಂದತಕ್ಕ ನೌಕರರ ಬಗ್ಗೆ ಈ ಸಂದರ್ಭದಲ್ಲಿ ಬಹಳ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ.

ನಿವೃತ್ತಿ ವೇತನಗಳನ್ನು ಪುನರ್‌ಪರಿಶೀಲನೆ ಮಾಡಬೇಕೆಂದು ಹಿಂದೆಯೇ ಹೇಳಿದೆವು. ಇಂಗ್ಲೆಂಡ್ ದೇಶದಲ್ಲಿ ಎರಡನೆ ಯುದ್ಧವಾದ ಮೇಲೆ ಎರಡು ಬಾರಿ ನಿವೃತ್ತಿ ವೇತನಗಳನ್ನು ಪರಿಶೀಲನೆ ಮಾಡಿದ್ದಾರೆ ಎಂದು ಕೇಳುತ್ತೇನೆ. ಇಲ್ಲಿ ಹಣವಿಲ್ಲ ಎನ್ನುವ ಒಂದೇ ಕಾರಣಕ್ಕಾಗಿ ಅದನ್ನು ಪರಿಶೀಲನೆ ಮಾಡದೆ ಅವರನ್ನು ಏನೋ ಭಿಕ್ಷೆ ಬೇಡುವುದಕ್ಕೆ ಬಂದವರಿಗೆ ಕೊಡುವ ಹಾಗೆ, ನಿನ್ನ ಹಣೇಬರಹ ಎಂದು ಒಂದು ನಯಾಪೈಸ ಕೊಟ್ಟು ನೀನು ಯಾರು ಇಲ್ಲಿ ಕೇಳುವುದಕ್ಕೆ, ತೆಗೆದುಕೊಂಡು ಹೋಗು, ನಾವು ಪರಿಶೀಲನೆ ಏಕೆ ಮಾಡಬೇಕು, ನೀನು ನಿವೃತ್ತನಾಗಿದ್ದೀಯೆ, ನಿನಗೂ ನಮಗೂ ಏನೂ ಸಂಬಂಧವಿಲ್ಲ, ಎನ್ನುವ ಧಾಟಿಯಲ್ಲಿ ಸರ್ಕಾರ ಮಾತನಾಡಬಾರದು. ಹೀಗೆ ಮಾತನಾಡುವುದಾದರೆ ಈ ಸರ್ಕಾರಕ್ಕೆ ಸಮಾಜವಾದದ ಉಚ್ಚಾರಣೆಯನ್ನು ಮಾಡುವುದಕ್ಕೂ ನೈತಿಕವಾಗಿ ಯಾವ ಅರ್ಹತೆಯೂ ಇರುವುದಿಲ್ಲ. ಸಮಾಜವಾದವೆಂದರೆ ಏನು ? ಸಾಮಾಜಿಕ ಭದ್ರತೆ, ಸಮಾಜದಲ್ಲಿ ಎಲ್ಲ ವ್ಯಕ್ತಿಗಳಿಗೂ ಇದೆ ಎನ್ನುವುದು ಗೋಚರವಾದಾಗ, ಮನದಟ್ಟಾದಾಗ, ಎಂದರೆ ಸ್ವಾರ್ಥವನ್ನು ಮನುಷ್ಯ ಕೈ ಬಿಡುತ್ತಾನೆ, ಕಡಮೆ ಮಾಡುತ್ತಾನೆ, ಅವನು ಮನಸ್ಸು ಕೊಟ್ಟು ತನ್ನ ಕೆಲಸವನ್ನು ಮಾಡುತ್ತಾನೆ, ತನ್ನ ಕಾರ್ಯದ ಕಡೆಗೆ ಗಮನ ಕೊಡುತ್ತಾನೆ. ಆದರೆ ಮುಂದೆ ವಯಸ್ಸಾದಾಗ ಪೆನ್ಷನ್ ನನ್ನ ಕೈ ಸೇರುವುದಿಲ್ಲ ; ಆದರಿಂದ ನನ್ನ ಜೀವನವನ್ನು ಮಾಡ ವುದಕ್ಕಾಗುವುದಿಲ್ಲ ; ನನ್ನ ಹೆಂಡತಿ ಮಕ್ಕಳು ಕಾಡು ಪಾಲಾಗುತ್ತಾರೆ, ಅನಾಥರಾಗುತ್ತಾರೆ ಎಂದು ಅವನಿಗೆ ಗೊತ್ತಿರುವಾಗ ತನ್ನ ಸೇವಾವಧಿಯಲ್ಲಿ ಎಲ್ಲ ರೀತಿಯ ಮಾರ್ಗಗಳನ್ನೂ ಹಿಡಿದು ಎಷ್ಟು ದುಡಿಮೆ ಮಾಡಬಹುದೋ ಅಷ್ಟನ್ನೂ ಮಾಡೋಣ, ನನ್ನ ಹೆಂಡತಿ ಮಕ್ಕಳ ಭವಿಷ್ಯಕ್ಕಾಗಿ ದುಡಿಯೋಣ, ಬೆಂಗಳೂರಿನಲ್ಲಿ ಸೈಟು ಮಾಡಬೇಕು, ಇನ್ನೊಂದು ಕಡೆ ಆಸ್ತಿ ಮಾಡಬೇಕು, ಹೆಂಡತಿಯ ಹೆಸರಿಗೆ ಮತ್ತೊಂದನ್ನು ಮಾಡಿಕೊಡಬೇಕು, ನನ್ನ ಮಕ್ಕಳಿಗೆ ಏನಾದರೂ ವ್ಯವಸ್ಥೆ ಮಾಡಬೇಕು ಎಂದು ಎಲ್ಲ ವಾಮ ಮಾರ್ಗಗಳನ್ನೂ ಕಳ್ಳ ಹಾದಿಗಳನ್ನೂ ತುಳಿಯುವುದಕ್ಕೆ ಕೆಲಸಕ್ಕೆ ತಾನು ಸೇರಿದ ವರ್ಷದಿಂದಲೂ ಆರಂಭ ಮಾಡುತ್ತಾನೆ. ಭ್ರಷ್ಟಾಚಾರವನ್ನು ಎರಡು ವರ್ಷದಲ್ಲಿ ನಿಲ್ಲಿಸುತ್ತೇವೆ ಎಂದು ಹೇಳತಕ್ಕ ಮಹಾನ್ ಮಹಾನ್ ಮಂತ್ರಿಗಳು ಆ ಮಾತಿನಲ್ಲಿ ಅವರು ಸಂತೋಷ ಪಡಬೇಕೇ ಹೊರತು ಸಾಮಾಜಿಕ ಭದ್ರತೆ ಇದೆ, ನನ್ನ ಭವಿಷ್ಯ ಸರ್ಕಾರದ ಕೈಯಲ್ಲಿ ಸುರಕ್ಷಿತವಾಗಿದೆ ಎನ್ನುವುದು ಯಾವ ವ್ಯಕ್ತಿಗೂ ಗೋಚರವಾಗುವುದಿಲ್ಲ. ಅಲ್ಲಿಯ ತನಕ ತನ್ನ ಭವಿಷ್ಯ ವಿವಂಚಿತವಾಗಿರುತ್ತದೆ ಎಂದು ಸಾಧ್ಯವಾದಷ್ಟೂ ದುಡ್ಡು ಮಾಡುವುದಕ್ಕೆ ಹೊರಡುತ್ತಾನೆ.

ಇವತ್ತು ಕೆಲಸ ಮಾಡುತ್ತಿರುವ ನೌಕರರಿಗೆ ಐದು ರೂಪಾಯಿ ತುಟ್ಟಿಭತ್ಯವನ್ನು ಏನು ಕೊಡುವುದಕ್ಕೆ ಹೊರಟಿದ್ದೀರಿ, ಈ ಹಣವನ್ನು ಬಡ್ಜೆಟ್ಟಿನಲ್ಲಿ ತೋರಿಸಿಲ್ಲ. ಅದನ್ನು ಏನೋ ಒಂದು ರೀತಿಯಲ್ಲಿ ಕೊಡುತ್ತಾರೆ. ಹಿಂದೆ ಶ್ರೀಮಾನ್ ಕಂಠಿ ಅವರು ಮುಖ್ಯಮಂತ್ರಿಗಳಾಗಿದ್ದಾಗಲೂ ಈ ವಿಷಯ ಬಂದಿತ್ತು. ಅವರ ಭಾಷಣದಲ್ಲಿಯೂ ಹೀಗೆಯೇ ಹೇಳಿದ್ದರು. ಸಮಾಜವಾದವನ್ನು ತರಬೇಕೆಂದು ಪ್ರಧಾನ ಮಂತ್ರಿಗಳಾದ ನೆಹರೂ ಅವರಿಂದ ಹಿಡಿದು ಕೆಳಗಿನ ಗ್ರಾಮ ಪಂಚಾಯಿತ ಅಧ್ಯಕ್ಷರ ವರೆಗೆ ಎಲ್ಲರೂ ಅವರ ಭಾಷಣದಲ್ಲಿ ಇದನ್ನು ಹೇಳುತ್ತ ಬಂದಿದ್ದಾರೆ. ಈ ಮಾತನ್ನು ಕೃತಿಗೆ ಇಳಿಸುವಾಗ ಒಂದು ಕಾರ್ಪಣ್ಯ, ಕನಿಷ್ಠ. ಕೊಡುಗೆಯಾಗಿ ಐದು ರೂಪಾಯಿಗಳನ್ನು ಕೊಟ್ಟಿದ್ದಾರೆ? ಈ ಐದು ರೂಪಾಯಿಗೆ ಈ ಕಾಲದಲ್ಲಿ ಎಷ್ಟು ಸಾಮಾನು ಬಂದೀತು, ಎಷ್ಟು ತೆಂಗಿನಕಾಯಿ ಬರುತ್ತದೆ? ಒಂದು ಕಿಲೋಗ್ರಾಂ ಅಕ್ಕಿಗೆ ಒಂದು ರೂಪಾಯಿ ಆಗಿದೆ. ಈಗ ಕೊಟ್ಟಿರುವ ಐದು ರೂಪಾಯಿನಲ್ಲಿ ಅವಲಕ್ಕಿ ಮೊಸರು ತಿಂದು ಜೀವನ ಮಾಡಬಹುದು ಎಂಬುದನ್ನು ಯೋಚನೆ ಮಾಡಿ. ಇವತ್ತು ಎರಡು ಕೋಟಿ ರೂಪಾಯಿ ತುಟ್ಟಿ ಭತ್ಯದ ಹೆಚ್ಚಳಕ್ಕಾಗಿ ಆಗುತ್ತಿರುವುದು ಅದನ್ನು ಪುನರ್ವಿಮರ್ಶೆ ಮಾಡಿದರೆ ನಾಲ್ಕು ಕೋಟಿ ರೂಪಾಯಿಗೆ ಹೋಗಬಹುದು ಎಲ್ಲ ಮುಪ್ಪಿನವರಿಗೂ 30 ರೂಪಾಯಿ ಕೊಡುತ್ತೇವೆಂದರೆ ಅದು ಮೂರು ಕೋಟಿ ರೂಪಾಯಿ ಆಗುತ್ತದೆ ? ಈ ಒಂದು ಸೇವೆಗಾಗಿ ಮೈಸೂರು ಸರ್ಕಾರ 10 ಕೋಟಿ ರೂಪಾಯಿಗಳನ್ನು ಪ್ರತಿವರ್ಷ ಖರ್ಚು ಮಾಡತಕ್ಕ ಪರಿಸ್ಥಿತಿ, ಹಣಕಾಸಿನ ಪರಿಸ್ಥಿತಿ ಬಂದು ಒದಗಬಹುದು. ಆದರೆ ಇದು ಬಹಳ ಮುಖ್ಯವಾದ, ಮೊದಲನೆಯ, ಪ್ರಥಮವಾದ ಆದ್ಯ ಕರ್ತವ್ಯವಾಗುತ್ತದೆ ಸಮಾಜವಾದದ ಘೋಷಣೆಯನ್ನು ಮಾಡತಕ್ಕ ಯಾವುದೇ ಸರ್ಕಾರಕ್ಕೆ.

ಈ ಸರ್ಕಾರದ ವಿಳಂಬ ನೀತಿಯ ಬಗ್ಗೆ ಒಂದು ಮಾತನ್ನು ಹೇಳಬೇಕು. 46 ಜನಗಳಿಗೆ ಹೋದ ಏಪ್ರಿಲ್ ತಿಂಗಳಿನಲ್ಲಿ ಅವರ ಸೇವೆಯನ್ನು ಮೆಚ್ಚಿ ಸ್ವಲ್ಪ ವಿಶ್ರಾಂತಿ ವೇತನವನ್ನು ಕೊಡಬೇಕೆಂದು ನಮ್ಮ ಸರ್ಕಾರದವರು ತೀರ್ಮಾನ ಮಾಡಿದರು. ಅದು ಕೇಂದ್ರ ಸರ್ಕಾರಕ್ಕೆ ಹೋಯಿತು. ಈ ವರ್ಷದ ಏಪ್ರಿಲ್ ಬರುತ್ತಿದೆ. ಇನ್ನೂ ಆ ನತದೃಷ್ಟರಿಗೆ ಆ ಹಣ ಕೈಗೆ ಮುಟ್ಟಲ್ಲ. 150 ರೂಪಾಯಿ ಕೊಡಬೇಕೆಂದು ಸಿಫಾರಸು ಮಾಡಿದ್ದುದನ್ನು ತುರ್ತು ಪರಿಸ್ಥಿತಿಯ ನೆಪದಲ್ಲಿ ಅರ್ಧ ಮಾಡಿದ್ದಾರೆ. ಅದರ ಬಗ್ಗೆ ಪತ್ರ ಇನ್ನೂ ಬರುತ್ತಲೇ ಇದೆ. ತಮಗೆ ಒಂದು ದುಃಖದ ವಿಷಯ ಹೇಳಬೇಕು ಎಂದರೆ ಒಬ್ಬರು ಈ ವೇತನ ಕೊಡುತ್ತಾರೆ ಎಂದು ತಿಳಿದ್ದಿದವರು ಸಾಯುವ ಸ್ಥಿತಿಯಲ್ಲಿದ್ದಾರೆ. ಅವರಿಗೆ ಇವತ್ತು ಕೈಗೆ ಹಣ ಸಿಕ್ಕುತ್ತ ಇಲ್ಲ, ಅವರು ಪ್ರಾಣ ಬಿಡುತ್ತ ಇಲ್ಲ. ಇಂಥವರು ಎಷ್ಟು ಜನರಿದ್ದಾರೋ ಈ 46 ಜನರ ಪಟ್ಟಿಯಲ್ಲಿ? ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಸರ್ಕಾರದವರು ಇಂಥ ತೀರ್ಮಾನಗಳನ್ನು ಮಾಡುವಾಗ ಅದು ಬೇಗ ಸಂಬಂಧಪಟ್ಟವರಿಗೆ ಸಿಕ್ಕಬೇಕು. ಮುಕ್ಕಳಿಗೆ, ವಯಸ್ಸಾದವರಿಗೆ, ಬಡವರಿಗೆ ಯಾವುದೇ ಆಶ್ವಾಸನೆಯನ್ನು ಕೊಡಬಾರದು. ಒಂದು ವೇಳೆ ಕೊಟ್ಟರೆ ಅದನ್ನು ಮುರಿಯಬಾರದು. ಅದಕ್ಕಿಂತ ಪಾಪಕೃತ್ಯ ಇನ್ನೊಂದಿಲ್ಲ ಎಂದು ನಾನು ಭಾವಿಸುತ್ತೇನೆ. ಆದುದರಿಂದ ಯಾವುದೇ ವಿಶ್ರಾಂತಿ ವೇತನವಾಗಲಿ ಸರ್ಕಾರದವರು ಕೊಡತಕ್ಕ ಯಾವುದೇ ಒಂದು ಸೌಲಭ್ಯವಾಗಲಿ ಯಾರಿಗಾಗಿ, ಯಾವ ಉದ್ದೇಶಕ್ಕಾಗಿ ಕೊಡುತ್ತೀರೋ ಆ ಉದ್ದೇಶ ಸಾರ್ಥಕವಾಗುವಹಾಗೆ, ಅವರು ಬದುಕಿದ್ದಾಗಲೇ ಅವರ ಕೈಗೆ ಮುಟ್ಟುವಂತೆ, ಆ ಉದ್ದೇಶ ಈಡೇರುವಂತೆ ಕಾರ್ಯಕ್ರಮ ತೆಗೆದುಕೊಳ್ಳಬೇಕು, ಇದರಲ್ಲಿ ಖಂಡಿತ ವಿಳಂಬವಾಗಬಾರದು ಎಂದು ಸರ್ಕಾರಕ್ಕೆ ತಮ್ಮ ಮೂಲಕ ಒತ್ತಾಯಪಡಿಸುವುದಕ್ಕೆ ಇಷ್ಟಪಡುತ್ತೇನೆ ಸ್ವಾಮಿ.

ಇನ್ನು ರಾಜಕೀಯ ನಿವೃತ್ತಿ ವೇತನಗಳ ಪ್ರಿವಿ ಪರ್ಸ್ ಬಗ್ಗೆ ಶ್ರೀಮಾನ ಗಂಗಾಧರ ನಮೋಷಿಯವರು ಮಾತನಾಡಿದರು. ಪ್ರಿವಿ ಪರ್ಸ್ ನಮ್ಮ ವಿಧಾನಸಭೆಯಿಂದ ಮತ ಪಡೆದು ಕೊಡುವಂಥಾದ್ದಲ್ಲ. ಅದು ಮೊದಲೇ ಚಾರ್ಜ್ಡ ಐಟಂ ಆಗಿದೆ. ಅದು ಕೊಡಲೇಬೇಕಾದ ಹಣಕಾಸಿನಲ್ಲಿ ಒಂದು. ಹಾಗೆಯೇ ಕೆಲವು ಹಿಂದಿನ ಪಾಳೆಯಗಾರರಿಗೆ, ನವಾಬರುಗಳಿಗೆ ಮತ್ತು ರಾಜಮನೆತನದವರಿಗೆ ಇವರಿಗೆಲ್ಲ ಕೆಲವು ಹಣವನ್ನು ಕೊಡುವುದಕ್ಕೆ ನಾವು ಒಪ್ಪಿಕೊಂಡಿದ್ದೇವೆ. ಅದನ್ನು ನಾವು ಕೊಡುತ್ತಿದ್ದೇವೆ. ಅಲ್ಲಿಯೂ ಅನೇಕ ಲೋಪದೋಷಗಳಿವೆ. ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳುತ್ತೇನೆ. ಪ್ರಿವಿ ಪರ್ಸ ವಿಚಾರದಲ್ಲಿ ಪಾರ್ಲಿಮೆಂಟಿನಲ್ಲಿ ಅನೇಕ ವೇಳೆ ಚರ್ಚೆಯಾಗಿದೆ. ಈ ಸಭೆಯ ಮೂಲಕ ನಾನು ಒಂದು ವಿನಂತಿ ಮಾಡಿಕೊಳ್ಳುವುದೇನೆಂದರೆ ನಮ್ಮ ರಾಜ್ಯದಲ್ಲಿ ಪ್ರಿವಿ ಪರ್ಸ ಪಡೆಯತಕ್ಕವರು ಮತ್ತು ಈ ದೇಶದಲ್ಲಿ ಪಡೆಯತಕ್ಕವರು ಯಾರೇ ಆಗಿರಲಿ ಅವರು ದೇಶದ ಹಣಕಾಸಿನ ಪರಿಸ್ಥಿತಿ ಮತ್ತು ಗಂಡಾಂತರ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಅವರು ತಾವು ತಮ್ಮ ಒಂದುಹಿಂದಿನ ರಾಜಮನೆತನದಲ್ಲಿ ಇದ್ದುಕೊಂಡು ಕೆಲಸ ನಡೆಸಿದ್ದಕ್ಕಾಗಿ ಏನು ಪಡೆಯುತ್ತಿದ್ದಾರೆ ಅದನ್ನು ಬಿಟ್ಟುಕೊಟ್ಟು ತಮ್ಮ ದೇಶಾಭಿಮಾನವನ್ನು ಮತ್ತು ತಮ್ಮ ಸಹಾನುಭೂತಿಯನ್ನು ವ್ಯಕ್ತ ಪಡಿಸಬೇಕು ಎಂದು ಮಾತ್ರ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ ಸ್ವಾಮಿ.

ಇನ್ನು ಕಮ್ಯುಟೇಷನ್ ವಿಷಯದಲ್ಲಿ ಹೆಚ್ಚು ವಿಳಂಬವಾಗುತ್ತಿದೆ. ಅಲ್ಲದೆ ಕಮ್ಯುಟೇಷನ್ ಮಾಡಿದರೆ ಈಗ ಎಷ್ಟು ಹಣ ಬರುತ್ತದೆಯೋ ಅದಕ್ಕಿಂತ ಹೆಚ್ಚು ತಮಗೆ ಬರುತ್ತದೆ ಅದನ್ನಾದರೂ ಕೊಡಿ ಎಂದು ಪೆನ್‌ಷನ್‌ದಾರರು ಕೇಳಿಕೊಂಡಿದ್ದಾರೆ. ಹೊಸದಾಗಿ ಕಮ್ಯುಟೇಷನ್ ಮಾಡಿಕೊಳ್ಳುವವರ ಬಗ್ಗೆ ವಿಳಂಬ ವಾಗುತ್ತಿರುವುದನ್ನು ತಪ್ಪಿಸುವುದಲ್ಲದೆ ಹಿಂದೆ ಕಮ್ಯೂಟ್ ಮಾಡಿ ತೆಗೆದುಕೊಂಡಿರುವವರ ವಿಷಯದಲ್ಲಿ ಪುನರ್ವಿಮರ್ಶೆ ಮಾಡುವುದು ಯೋಗ್ಯ.

ಸಾಲ ಮುಂಗಡದ ಬಗ್ಗೆ ಹೇಳುವುದಾದರೆ, ಸರಕಾರ ದಾನಶೂರರಂತೆ ಕೇಂದ್ರದ ಹಣವನ್ನೂ ಮತ್ತು ಇತರ ಹಣವನ್ನೂ ಅನೇಕ ಬಾಬುಗಳಿಗೆ ಕೊಡುತ್ತಿದ್ದಾರೆ. ಇದು ಸ್ಥಳೀಯ ಸಂಸ್ಥೆಗಳಿಗಾಗ ಬಹುದು, ಕೈಗಾರಿಕೆಗಳಗಾಗಬಹುದು, ರೈತರಿಗೆ ತಕಾವಿ ಸಾಲಕ್ಕಾಗಬಹುದು, ಅಥವಾ ಅಧಿಕಾರಿಗಳಿಗೆ ಮನೆಗಳನ್ನು ಕಟ್ಟುವುದಕ್ಕೆ ಮುಂಗಡವಾಗಬಹುದು. ಈ ಸಂಬಂಧವಾಗಿ ವಿವರಗಳನ್ನು ಹೇಳಿ ಸಭೆಯ ಕಾಲವನ್ನು ತೆಗೆದುಕೊಳ್ಳುವುದಿಲ್ಲ. ಈ ಬಾಬಿಗೆ 1961-62 ರಿಂದ ಕೋಟ್ಯಾಂತರ ರೂಪಾಯಿಗಳನ್ನು ಒದಗಿಸಿದ್ದಾರೆ. ನಾನು ಮೊದಲೇ ಹೇಳಿದ ಹಾಗೆ ಇದನ್ನು ಹಂಚುವ ವಿಷಯದಲ್ಲಿ ಇಲಾ ಖೆಯಲ್ಲಿರುವವರು ದಾನಶೂರರು. ಅವರಿಗೆ ಅನೇಕ ಏಜೆನ್ಸಿಗಳಿವೆ. ಇವರು ಪ್ರತಿ ಬಾಬಿನಲ್ಲಿಯೂ ಸಾಲ ಕೊಡುವುದರಲ್ಲಿ ಉತ್ಸಾಹಿಗಳು. ಅವರಲ್ಲಿ ಸ್ಪರ್ಧೆ ಇದೆ. ಹೆಮ್ಮೆಯಿಂದ ನಾನು ಮೂರು ಕೋಟಿ ಹಂಚಿದೆ, ನಾಲ್ಕು ಕೋಟಿ ಹಂಚಿದೆ, ಐದು ಕೋಟಿ ಹಂಚಿದೆ ಎಂದು ಹೇಳಿಕೊಳ್ಳುತ್ತಾರೆ. ಇದುವರೆಗೆ 10 ಕೋಟಿ 43 ಲಕ್ಷವನ್ನು ವಿವಿಧ ಬಾಬುಗಳಿಗೆ ಹಂಚಲಾಗಿದೆ. ಈ ಸಂಬಂಧವಾಗಿ ವಿವರಗಳು ಮೂರನೆಯ ಯೋಜನೆಯ ಪುಸ್ತಕದಲ್ಲಿವೆ. ತಕಾವಿ ಲೋನ್‌ಗೆ ಅರ್ಜಿ ಹಾಕಿದರೆ, ಅದು ತೀರ್ಮಾನವಾಗಬೇಕಾದರೆ ಎಷ್ಟೋ ಕಷ್ಟ. ಶ್ರೀಮಾನ್ ಚನ್ನಬೈರೇಗೌಡರು ಹೊಸಕೋಟೆ ತಾಲ್ಲೂಕಿನಲ್ಲಿ ಹಾಕಿದ ಅರ್ಜಿಗಳೆಷ್ಟು, ಮೂರು ವರ್ಷಗಳಿಂದ, ಅವು

(ಶ್ರೀ ಎಸ್. ಗೋಪಾಲ ಗೌಡ)

ಗಳಲ್ಲಿ ತೀರ್ಮಾನವಾದವೆಷ್ಟು ಎಂದು ಕೇಳಿರುವ ಪ್ರಶ್ನೆಗೆ ಸರಕಾರದವರು ಉತ್ತರ ಕೊಟ್ಟಿದ್ದಾರೆ, ಅದು ನನಗಂತೂ ಅರ್ಥವಾಗಿಲ್ಲ. ಈ ಹಣವನ್ನು ಸರಿಯಾಗಿ ಹಂಚಿದ್ದಾರೆಯೆ, ಉದ್ದೇಶ ಸಾರ್ಥಕವಾಗಿದೆಯೆ ಎಂದು ನೋಡಿದರೆ, ಗ್ರಾಮ ಮಟ್ಟದಲ್ಲಿ, ತಾಲ್ಲೂಕುಮಟ್ಟದಲ್ಲಿ, ಕೋಳಿ ಸಾಕಾಣಿಕೆ, ಮೀನು ಸಾಕಾಣಿಕೆ, ಎಲ್ಲವನ್ನೂ ನೋಡಿದ್ದೇನೆ ಬರಿಯ ಗಾಳಿ ಮೋಡದ ಹಾಗೆ, ಇಲ್ಲಿ ಕಪ್ಪು ಕಂಡರೆ, ಮುನ್ನೂರು ಮೈಲಿಗಳ ಆಚೆ ಮಳೆ ಬಿದ್ದರೂ ಬೀಳಬಹುದು ಅಥವಾ ಹಿಮಾಲಯಕ್ಕೆ ಹೋಗಬಹುದು. ಇಲ್ಲಿ ಮಾತ್ರ ಬರಿಯ ಮೋಡ, ಮಿಂಚು ಕಾಣುತ್ತಿದೆಯೇ ಹೊರತು ಒಂದು ಹನಿಯೂ ಬೀಳುವುದಿಲ್ಲ ರೈತರು ಚಾತಕ ಪಕ್ಷಿಗಳ ಹಾಗೆ ಮಳೆ ಬರುತ್ತದೆಯೇ ಎಂದು ಕಾಯುತ್ತಿದ್ದಾರೆ ಕೊನೆಗೆ ಆಗುವುದು ಹೀಗೆ. ಸರಕಾರದವರು ಘಟೋದ್ಗಜನ ವಿದ್ಯೆ ಏನು ಕಲಿತಿದ್ದಾರೋ ಗೊತ್ತಿಲ್ಲ. ರಾಕ್ಷಸರು ಯುದ್ಧ ಮಾಡುವಾಗ ಧೂಳೆಬ್ಬಿಸುವುದು, ಕತ್ತಲೆ ಮಾಡುವುದು, ಹೀಗೆಲ್ಲ ಮಾಡುತ್ತಾರಂತೆ. ಇವರೂ ರಾಕ್ಷಸರೆಂದು ನಾನು ಹೇಳುವುದಿಲ್ಲ. ಆದರೆ ಇವರು ಹಂಚುವ ವಿಧಾನವನ್ನು ನೋಡಿದರೆ, ನನಗೆ ತುಂಬ ಭಯವಾಗುತ್ತದೆ. ಯಾರಿಗೆ ಯಾವಾಗ ಮುಟ್ಟುತದೆಯೋ ಗೊತ್ತಿಲ್ಲ. ಇದರಿಂದ ಏನು ಸಾಧಿಸಿದ್ದಾರೆಂದು ಯೋಚನೆ ಮಾಡಬೇಕು. ಒಂದೊಂದು ಮುನಿಸಿಪಾಲಿಟಿ ಹತ್ತು ಇಪ್ಪತ್ತು ವರ್ಷಗಳಿಂದ ಅರ್ಜಿ ಹಾಕುತ್ತಿದೆ; ಆದರೂ ಸಿಕ್ಕುವುದಿಲ್ಲ. ಶಿವಮೊಗ್ಗದಲ್ಲಿ ಸ್ಯುಯೇಜ್ ಯೋಜನೆ ಏನಾಗಿದೆ? ಯಾವುದಾದರೂ ಒಂದನ್ನು ಪೂರ್ತಿ ಮಾಡಿ ಮುಗಿಸಬೇಕು. ಇನ್ನೂರು ಮುನಿಸಿಪಾಲಿಟಿಗಳಲ್ಲಿ ಹತ್ತನ್ನಾದರೂ ಚೆನ್ನಾಗಿ ಮಾಡಿ. ಸಾಲ ವಸೂಲಿಗೆ ಸರಿಯಾದ ಕ್ರಮ ತೆಗೆದುಕೊಳ್ಳಲಿ. ಹೊಸ ಮುನಿಸಿಪಲ್ ಅಧ್ಯಕ್ಷರು ಕಾಂಗ್ರೆಸನವರಾಗಿದ್ದರೆ, ಅವರಿಗೆ ಪ್ರೋತ್ಸಾಹ ಕೊಡುವುದಕ್ಕೆ, ಅವರು ಆ ನಗರದಲ್ಲಿ ಆ ಸ್ಥಾನದಲ್ಲಿ ಶಾಶ್ವತವಾಗಿ ಉಳಿಯಬಹುದೋ ಏನೋ ಎಂದು, ಮಂತ್ರಿಗಳು ಹೋದಾಗ ಸಮಾರಂಭಗಳನ್ನು ಏರ್ಪಾಡು ಮಾಡಿ, ಅದನ್ನು ಪತ್ರಿಕೆಗಳಲ್ಲಿ ಪ್ರಚಾರ ಮಾಡಲಿ ಎಂದು, ನಮ್ಮ ನೀರು ಸರಬರಾಯಿ ಯೋಜನೆಗೆ ಸರಕಾ ಇಪ್ಪತ್ತು ಲಕ್ಷ ರೂಪಾಯಿ ಕೊಟ್ಟಿದ್ದಾರೆಂದು ಭಾಷಣದಲ್ಲಿ ಹೇಳುತ್ತಾರೆ. ಸಾಗರ ಟೌನಿಗೆ ಇದುವರೆಗೂ ನೀರು ಕೊಟ್ಟಿಲ್ಲ. ಮಿರ್ಜಾ ಸಾಹೇಬರ ಕಾಲದಲ್ಲಿ ಅಲ್ಲಿಗೆ ನೀರು ಕೊಡುತ್ತೇವೆಂದು ಹೇಳಿದರು. ಆಗ ಅಲ್ಲಿನವರು ಕೆಲವರು ನೀರು ಚರ್ಮದ ಮೂಲಕ ಬಂದರೆ ಅಪವಿತ್ರವಾಗುತ್ತದೆ, ನಮಗೆ ಬೇಡ ಎಂದು ಹೇಳಿದರಂತೆ. ಅದು ಅಲ್ಲಿಗೇ ನಿಂತಿತು. ಮಿರ್ಜಾ ಸಾಹೇಬರ ಸರಕಾರ ಹೋಯಿತು, ಜವಾಬ್ದಾರಿ ಸರಕಾರ ಬಂತು. ಅಲ್ಲಿನ ಜನಸಖ್ಯೆ 25 ಸಾವಿರ ಮುಟ್ಟಿತು. ಅಲ್ಲಿನ ಗಣಪತಿ ಕೆರೆಯ ನೀರು ಚೆನ್ನಾಗಿಲ್ಲ, ಅದನ್ನು ಮೂಗು ಹಿಡಿದುಕೊಂಡು ಕುಡಿಯಬೇಕು. ಇದನ್ನೆಲ್ಲ ಏಕೆ ಹೇಳುತ್ತಿದ್ದೇನೆಂದರೆ ಹಣ ಕೊಡುವುದರಲ್ಲಿ ಯಾವುದಾದರೂ ಒಂದು ನೀತಿಯನ್ನನು ಸರಿಸಬೇಕು. ಹಣ ಸದ್ವಿನಿಯೋಗವಾಗಬೇಕು. ಸರಕಾರ ಯಾರಿಗೆ ಹಣವನ್ನು ಕೊಡುತ್ತಾರೋ ಅವರು ವಾಪಸು ಕೊಡುತ್ತಾರೆಯೇ ಎನ್ನುವುದನ್ನು ನೋಡಬೇಕು. ಹಾಗಿಲ್ಲದೆ ಜನರನ್ನು ಮಂಕುಗೊಳಿಸಿ, ಯಾವಾಗಲೂ ಅವರನ್ನು ತಮ್ಮ ಬೆಂಬಲಿಗರನ್ನಾಗಿ ಇಟ್ಟುಕೊಳ್ಳಬೇಕೆಂಬ ವ್ಯಾಮೋಹವನ್ನಿಟ್ಟುಕೊಂಡಿದ್ದರೆ, ಆಸ್ಫೋಟನೆಯಾಗುತ್ತದೆ. ಕೋಟ್ಯಾಂತರ ರೂಪಾಯಿಗಳನ್ನು ಬಡ್ಡಿಕೊಟ್ಟು ಸಾಲ ತಂದು ಆ ಹಣವನ್ನು ನೂರಾರು ಏಜೆನ್ಸಿಗಳ ಮೂಲಕ ಹಂಚಿ ಅದು ಹರಿದು ಹೋಗುವುದಕ್ಕೆ ಬಿಡುವುದು, ಯೋಗ್ಯರೀತಿ ಹಣ ಖರ್ಚು ಮಾಡುವ ಮಾರ್ಗವಲ್ಲವೆಂದು ಹೇಳಬಯಸುತ್ತೇನೆ.

ಮುಂಗಡ ಸಾಲ ಕೊಡುವ ವಿಷಯದಲ್ಲಿ ಇನ್ನೂ ಬಹಳ ಹೇಳುವುದು ಇದೆ. ವಾಸ್ತವವಾಗಿ ಎಷ್ಟೋ ವಿಷಯಗಳನ್ನು ಹೇಳಿದ್ದಾರೆ. ಇಷ್ಟು ಮನೆ ಕಟ್ಟಿಸಿಕೊಡುತ್ತೇವೆಂದು ಏನು ಹೇಳುತ್ತಾರೋ ಅದರ ಬಗ್ಗೆ ಸರಕಾರದವರು ವಿಚಾರ ಮಾಡುವುದು ಒಳ್ಳೆಯದು. ಮಾನ್ಯ ಮಂತ್ರಿಗಳಾದ ಶ್ರೀ ದೇವರಾಜ ಅರಸು ಅವರು ಮನೆ ಕಟ್ಟುವ ವಿಷಯ ಹೇಳಿದರು. ಎಷ್ಟೋ ಕೋಟಿ ರೂಪಾಯಿ ಬೇಕಾಗುತ್ತದೆಂದು ಹೇಳಿದರು. ನಿಜವಾಗಿಯೂ ಇದು ಒಂದು ದೊಡ್ಡ ಸಮಸ್ಯೆ, ಇದೊಂದು ದೊಡ್ಡ ಯೋಜನೆ. ಇದನ್ನು ಅಷ್ಟು ಸುಲಭವಾಗಿ ಪರಿಹರಿಸಲು ಆಗುವುದಿಲ್ಲ ಮನೆ ಕಟ್ಟುವ ಕೆಲಸ ತೆಗೆದುಕೊಂಡು ಅನೇಕ ಏಜೆನ್ಸಿಗಳಿಗೆ ಸಾಲ ಕೊಡುತ್ತೀರಿ. ಇದನ್ನು ಗಮನಿಸಬೇಕು ಉದಾಹರಣೆಗೆ ಹುಬ್ಬಳ್ಳಿ ಅಥವಾ ಇನ್ನೊಂದು ಊರು ಹೇಳಬಹುದು. ಇದನ್ನು ಪರಿಶೀಲನೆ ಮಾಡುವುದು ಒಳ್ಳೆಯದು. ಇಂಥ ಪ್ಯಾಟರ್ನ್ ಮನೆಗೆ ಇಷ್ಟು ಹಣ ಖರ್ಚುಮಾಡಬೇಕು ಎಂದು ಒಂದು ಕಾರ್ಯಕ್ರಮ ಹಾಕಿಕೊಂಡಿದ್ದೀರಿ. ಅಂಥ ಮನೆ ಒಂದು ಪಿಜನ್ ಹೋಲ್ ತರಹ ಆಗುತ್ತದೆ. ಅಂಥ ಮನೆಗಳು ಕೆಲವು ಕಡೆ ಇವೆ. ಆದುದರಿಂದ ಲೇಬರ್ ಹೌಸಿಂಗ್ ಸ್ಕೀಂ ಮನೆಗಳನ್ನು ಪರಿಶೀಲನೆ ಮಾಡುವುದು ಒಳೆಯದು ಎಂದು ನನಗೆ ಅನಿಸುತ್ತದೆ. ಯಾಕಂದರೆ ಇದಕ್ಕೆ ಏನಾದರೂ ಒಂದು ಯೋಜನೆ ಕಂಡು ಹಿಡಿದು ಕೇಂದ್ರದಿಂದ ಪಡೆಯತಕ್ಕ ಹಣ, ನೀವು ಕೊಡತಕ್ಕ ಹಣ, ಮನೆ ಕಟ್ಟಿಸಿ ಕೊಡಲು ಹಾಕುವ ಹಣ, ಸರಿಯಾದ ರೀತಿಯಲ್ಲಿ ಖರ್ಚಾಗುವಂತೆ ಕೆಲವು ಕಾಲ ಪರಿಶೀಲಿಸಿ ಒಂದು ಸರಿಯಾದ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಸಾಲ ಕೊಡುವುದರಲ್ಲಿ ಮೂರು ನಾಲ್ಕು ಸ್ಕೀಂ ಇವೆ. ವೈಯಕ್ತಿಕವಾಗಿ ಮನೆ ಕಟ್ಟಬೇಕೆಂದು ಸಾಲ ಪಡೆದವರು ತಮಗೆ ಇಷ್ಟ ಬಂದ ಪ್ರಕಾರ ಚಿಕ್ಕದು ಅಥವಾ ದೊಡ್ಡದು ಮನೆ ಕಟ್ಟುವುದಕ್ಕೆ ಯಾವ ಅಡ್ಡಿ ಇರುವುದಿಲ್ಲ. ನಾವು ಕಟ್ಟಿಸತಕ್ಕಂಥ ಸಬ್‌ಸಿಡೈಜ್ಡ್ ಸ್ಕೀಂನಲ್ಲಿ ಕೂಲಿಗಾರರಿಗೋಸ್ಕರ ಮನೆಗಳು ಮತ್ತು ಲೋಇನ್‌ಕಂ ಗ್ರೂಪ್ ಹೌಸಿಂಗ್ ಸ್ಕೀಂನಲ್ಲಿ ಏನು ಮನೆ ಕಟ್ಟುತ್ತೇವೆಯೋ ಅದನ್ನು ದೊಡ್ಡದಾಗಿ ಮಾಡಿ ಕಟ್ಟಿಸಬೇಕೆಂದು ಹೇಳುತ್ತಿರಾ ? ಸಾಲ ಕೊಡುವ ಹಣದ ಜೊತೆಗೆ ತಮ್ಮ ಸ್ವಂತದ ಹಣ ಹಾಕಿ ದೊಡ್ಡ ಮನೆ ಕಟ್ಟಿಸಿ ಕೊಳ್ಳುವುದಕ್ಕೆ ನಮ್ಮದು ಏನೂ ಅಭ್ಯಂತರವಿಲ್ಲ. ಈ ಎರಡೂ ಸ್ಕೀಂ ಬದಲಾವಣೆ ಮಾಡಬೇಕು ಎಂಬುದನ್ನು ಯೋಚನೆ ಮಾಡಬೇಕಾಗುತ್ತದೆ.

ಶ್ರೀ ಎಸ್. ಗೋಪಾಲ ಗೌಡ.—ವೈಯುಕ್ತಿಕವಾಗಿ ಕಟ್ಟತಕ್ಕಂಥ ಮನೆಗಳನ್ನು ಹೀಗೇ ಕಟ್ಟು ಎಂದು ಇನ್‌ಸಿಸ್ಟ್ ಮಾಡದೆ, ಕೊಟ್ಟಂಥ ಹಣ ಸರಿಯಾಗಿ ಉಪಯೋಗಿಸಿದ್ದಾನೆಯೇ ಎಂಬುದನ್ನು ಅಷ್ಟು ತಿಳಿದುಕೊಂಡರೆ ಸಾಕು. ತಾವು ನೇರವಾಗಿ ಏಜೆನ್ಸಿ ಮೂಲಕವಾಗಿ ಕಟ್ಟಿಸತಕ್ಕಂಥ ಮನೆಗಳಲ್ಲಿ ಮಳೆಗಾಲದಲ್ಲಿ ವಾಸ ಮಾಡತಕ್ಕಂಥವರಿಗೆ ಬಹಳ ತೊಂದರೆಯಾಗುತ್ತದೆ. ಒಳಗೆ ನೀರು ಬರುತ್ತದೆ. ಇದಲ್ಲವೆ ಬಚ್ಚಲ ಮನೆ ನೀರು ಹೊರಗೆ ಹೋಗುವುದಿಲ್ಲ. ಇಂಥ ಮನೆಗಳನ್ನು ನಿಮ್ಮ ಶಿಲ್ಪಿಗಳಾದ ಎಂಜಿನಿಯರುಗಳು ಕಟ್ಟಿಸಿದ್ದಾರೆ. ನಮ್ಮಂಥವರು ತಿಳಿಯದೇ ಇದ್ದವರು ಕಟ್ಟಿಸಿದ್ದಲ್ಲ. ಸಾವಿರಾರು ರೂಪಾಯಿ ಇಂಥ ಮನೆಗಳಿಗೆ ಖರ್ಚುಮಾಡಲಾಗಿದೆ. ವೆಚ್ಚದ ಕಡೆ ನಿಮ್ಮ ಗಮನ ಇಲ್ಲದೆ ಹಣದ ಅಂಕಗೆ ಸೊನ್ನೆ ಸೇರಿಸುತ್ತಾ ಹೋಗುತ್ತೀರಿ. ಇದು ಸರಿಯಲ್ಲ. ಸಂಬಂಧಪಟ್ಟ ಮಂತ್ರಿಗಳು ಇದನ್ನು ಪರಿಶೀಲನೆ ಮಾಡಬೇಕಾದುದು ಅಗತ್ಯ. ಇದರ ಮೇಲೆ ಒಂದು ರೀತಿ ನಿಯಂತ್ರಣ ಇರಲಿ. ನೀವು ಕಟ್ಟಿಸಿದ ಮನೆಗಳು ವಾಸಕ್ಕೆ ಯೋಗ್ಯವಾಗಿಲ್ಲ. ಹಣ ಮಾತ್ರ ಹೋಯಿತು. ಕೊಟ್ಟ ಸಾಲ ಉಳಿಯಿತು. ಇಂಥ ಕೆಲಸ ಮಾಡಬಾರದು. ಬರಿ ಸಾಲ ಕೊಡುವ ಯೋಜನೆಯಲ್ಲಿ ಆಗರ್ಭ ಶ್ರೀಮಂತರ ಮಕ್ಕಳಿಗೆ ಬೆಂಗಳೂರು ನಗರದಲ್ಲಿ ಹತ್ತಿಪ್ಪತ್ತು ಮನೆಗಳು ಇರುವವರಿಗೆ ಮಾತ್ರ ಸಾಲ ಕೊಡಲಾಗುತ್ತಿದೆ. ಅವರಿಗೆ ಸಾಲ ಏಕೆ ಕೊಡಬೇಕು ? ಏತಕ್ಕೆ ಅವರಿಗೆ ಈ ಸೌಲಭ್ಯ ? ಇಂಥ ಕುರುಡು ನೀತಿ ಇಟ್ಟುಕೊಳ್ಳುವುದು ಸರಿಯಲ್ಲ. ಸಾವಿರಾರು ರೂಪಾಯಿ ಸಂಬಳ ತೆಗೆದುಕೊಳ್ಳುವ ಅಧಿಕಾರಿಗಳು ಸೆಕ್ರೆಟೇರಿಯೆಟ್‌ನಿಂದ ಹೊರಗೆ ನಿಮ್ಮ ಜೊತೆಗೆ ಬಂದು ಓಡಾಡಿ ನೋಡಲಿ. ದೊಡ್ಡ ಅಧಿಕಾರಿಗಳು ಹೀಗೆ ಬಂದು ನೋಡಲಿ ಅದು ಸಂತೋಷಕರ. ಅವರು ರುಜು ಹಾಕಬೇಕಾದ ಕಾಗದ ಪತ್ರ ಫೈಲುಗಳು ಎಲ್ಲಿಯೂ ಹೋಗುವುದಿಲ್ಲ. ಒಟ್ಟಿನಲ್ಲಿ ಬಡ ರೈತರ ಕೆಲಸದ ಕಡೆ ತಾವು ಹೆಚ್ಚು ಗಮನ ಕೊಡಬೇಕೆಂದು ಹೇಳುತ್ತೇನೆ.

1919-65ನೇ ಸಾಲಿನಲ್ಲಿ ಫ್ರೂಟ್ ಕಲ್ಚರ್ ಲೋನ್ಸ್ ಗಾಗಿ 5,000 ರೂಪಾಯಿ ಏತಕ್ಕೆ ಇಟ್ಟಿದ್ದೀರಿ ? ಇದನ್ನು ಕೊಡುತ್ತೇವೆಂದು ಯಾರಿಗಾದರೂ ಮಾತು ಕೊಟ್ಟಿದ್ದೀರಾ ? ಏನು ಯೋಜನೆ ತಯಾರ್ಮಾಡುತ್ತೀರಿ ? ಬಜೆಟ್ ಬುಕ್ 565 ಪುಟದಲ್ಲಿ ಇದನ್ನು ಕೊಟ್ಟಿದ್ದೀರಿ. ಲೋನ್ಸ್ ಅಂಡರ್ ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನ್ಸ್ ಆಕ್ಟ್, ಕೂರ್ಗ್ ಈ ಬಾಬಿಗೆ 75,000 ರೂಪಾಯಿ ಒದಗಿಸಿದ್ದೀರಿ. ಮಾನ್ಯ ಸದಸ್ಯರಾದ ಶ್ರೀ ಅಪ್ಪಣ್ಣರವರಿಗೆ ಈ ದುಡ್ಡು ಕೊಡುತ್ತೀರಾ ? ಯಾವ ಆಧಾರದ ಮೇಲೆ ಈ ಹಣ ಕೊಡುತ್ತೀರೋ ಆ ಯೋಜನೆ ಗಟ್ಟಿ ಇಲ್ಲ. ಕೊಡಗಿನಲ್ಲಿ ಒಳ್ಳೇ ಹಣ್ಣು ಬೆಳೆಯುತ್ತಿದ್ದಾರೆ. ಈ ರೀತಿ ಹಣ ಕೊಡುವ ಹವ್ಯಾಸ ಇಟ್ಟುಕೊಳ್ಳುವುದು ಬೇಡ. ಇದಲ್ಲದೆ ಕೋಳಿ ಕುರಿ ಮುಂತಾದ ಪಶು ಸಂಗೋಪನೆಗೆ ಒಂದು ಲಕ್ಷ ರೂಪಾಯಿ ಹಂಚುತ್ತೀರಿ, ಅದರಲ್ಲಿ ಒಂದು ತಾಲ್ಲೂಕಿಗೆ 500 ರೂಪಾಯಿ ಕೊಡುವುದಾದರೆ ಒಬ್ಬ ರೈತನಿಗೆ ಮೂರುವರೆ ರೂಪಾಯಿ ಹಂಚುತ್ತೀರಿ. ಮೂರೂವರೆ ರೂಪಾಯಿಯಲ್ಲಿ ಒಂದು ದನ ಬರುವುದಿಲ್ಲ, ಒಂದು ಕೋಳಿ ಬರಬಹುದು. ಈ ರೀತಿ ಹಣ ಹಂಚುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ನಿಮ್ಮಿಂದ ಹಣ ತೆಗೆದುಕೊಂಡು ಸಮಯಕ್ಕೆ ಸರಿಯಾಗಿ ಬೇರೆ ಯಾರದೋ ಒಂದು ದನ ತಂದು ತೋರಿಸಿ ಹಣ ಖರ್ಚುಮಾಡಿದ್ದೇನೆಂದು ಹೇಳಿ ಅವನ್ನು ವಾಪಸ್ಸು ಕೊಟ್ಟು ಬಿಡುತ್ತಾನೆ. ಇದರಿಂದ ನಮ್ಮನ್ನು ನಾವು ಮೋಸ ಮಾಡಿದಂತಾಗುತ್ತದೆ. ಈ ಯೋಜನೆಯಿಂದ ಮೋಸ ಹೇಗೆ ಮಾಡಬೇಕು ಎಂಬುದನ್ನು ಕಲಿಸುತ್ತದೆ. ಸಮಾಜ ಕಲ್ಯಾಣದ ಹೆಸರಿನಲ್ಲಿ ದೇಶದ ಅಭಿವೃದ್ಧಿ ಹೆಸರಿನಲ್ಲಿ, ಯೋಜನೆಯ ಹೆಸರಿನಲ್ಲಿ ಸಾರ್ವಜನಿಕರ ಹಣ ಖರ್ಚುಮಾಡಿ ದ್ರೋಹ ಬಗೆಯಲು ಹೊರಟಿದ್ದೇವೆ. ಇಂದಲ್ಲ ನಾಳೆ ನಾವು ಇರದೆ ಇದ್ದರೂ ಸಹ ನಮ್ಮ ಮಕ್ಕಳು ಮೊಮ್ಮಕ್ಕಳು ಈ ದ್ರೋಹದಿಂದ ಬಚಾವ್ ಆಗುವುದು ಬಹಳ ಕಷ್ಟ.

3-00 P.M.

ಏಕೆಂದರೆ ಇದನ್ನು ಮುಂದೆ ಕಕ್ಕಬೇಕಲ್ಲಾ, ತಿಂದದ್ದು ಕಕ್ಕಲೇಬೇಕು. ಸಾರ್ವಜನಿಕ ಹಣ ವಿಷಪ್ರಾಯವಾಗಿರುತ್ತದೆ. ಅದನ್ನು ತಿಂದವರು ಸಾಯಲೇಬೇಕು. ಅವನು, ಅವನು ಮಕ್ಕಳು ಮರಿ ಎಲ್ಲರಿಗೂ ತಟ್ಟುತ್ತದೆ, ಸಾಯುತ್ತಾರೆ. ಏನೋ ಕಟ್ಟುತ್ತೇವೆ ಅಂತ ಹೇಳಿ, ಹಣಕಾಸಿನ

(ಶ್ರೀ ಎಸ್. ಗೋಪಾಲ ಗೌಡ)

ವ್ಯವಸ್ಥೆಯಲ್ಲಿ ಬಹಳ ದೊಡ್ಡ ದೊಡ್ಡ ಲೋಪದೋಷಗಳು ನುಸುಳಿಕೊಂಡು, ಅದು ಹಾಗೆಯೆ ಮುಂದುವರಿದುಕೊಂಡು ಹೋಗುತ್ತಾ ಇದ್ದರೆ, ಇದರ ಬಗ್ಗೆ ಗಮನವಿಟ್ಟು, ವಿಚಾರಮಾಡಿ ಪುನರ್ವಿಮರ್ಶೆಮಾಡಿ, ಜನಗಳ ಆಶೋತ್ತರಗಳನ್ನು ಈಡೇರಿಸುವಂಥ ಒಂದು ವ್ಯವಸ್ಥೆಯನ್ನು, ಒಂದು ಕ್ರಮವನ್ನು ನೀವು ರೂಪಿಸಿಕೊಳ್ಳಬೇಕು ; ಇಲ್ಲದಿದ್ದರೆ ಇದರಿಂದ ಯಾವ ಸಾಧನೆಯನ್ನೂ ಮಾಡುವುದಕ್ಕಾಗುವುದಿಲ್ಲ. ನಾವೆಲ್ಲರೂ ಸಮಾಜವನ್ನು ಸಾಲದ ಹೊರೆಗೆ ಈಡುಮಾಡಿ, ಜನತೆ ತಲೆ ಮಾರುತನಕ ಬಡ್ಡಿ ಕೊಟ್ಟು ತೀರಿಸಬೇಕಾಗುತ್ತದೆ. ರಾಜ್ಯ ಒಂದು ಅಡಮಾನದ ಬ್ಯಾಂಕಾಗುತ್ತದೆ ದೆಹಲಿಯಲ್ಲಿ ಹೋಗಿ ತಾವು ನೋಡಿ : ಅಮೇರಿಕದವರು ಕಾನ್ನಾಟ್ ಸರ್ಕಸ್ಸಿನಲ್ಲಿ ಒಂದು ಚಾರ್ಟ್ ಹಾಕಿದ್ದಾರೆ. ಅದಕ್ಕೆ ಬಲ್ಬುಗಳನ್ನೂ ಹಾಕಿದ್ದಾರೆ. ರಾತ್ರಿ ಹಗಲು ಬೇಕಾದರೂ ನೋಡಬಹುದು. ಅದರಲ್ಲಿ ನಾವು ಎಷ್ಟು ಡಾಲರುಗಳನ್ನು ಅವರಿಂದ ತೆಗೆದುಕೊಂಡಿದ್ದೇವೆಂದು ತೋರಿಸುತ್ತದೆ. ಎರಡು ಸಾವಿರ ಚಿಲ್ಲರೆ ಕೋಟಿ ನಾವು ತೆಗೆದುಕೊಂಡಿದ್ದೇವೆ. ಅದಕ್ಕೆ ನಾವು ಭಾಗಿಗಳು. ಶರಾವತಿಗೆ 32 ಕೋಟಿ ರೂಪಾಯಿಗಳನ್ನು ಅಮೇರಿಕದವರು ಕೊಟ್ಟಿದ್ದಾರೆ, ಕೊಡುತ್ತಿದ್ದಾರೆ, ನಾವು ಅದರಲ್ಲಿ ಭಾಗಿಗಳಲ್ಲ ಅಂದು ತಿಳಿದುಕೊಂಡಿದ್ದರೆ ಅದು ತಪ್ಪು ಅಭಿಪ್ರಾಯ. ಈ ಹಣ ಗುಪ್ತಗಾಮಿನಿಯಾಗಿ ಹರಿದು ಹೋಗುತ್ತಾ ಇದೆ. ನಂದಿಯಲ್ಲಿ ಪೆನ್ನಾರ್ ನದಿ ಹುಟ್ಟಿದಹಾಗೆ ಇದು ಹುಟ್ಟಿದ್ದು ಸರಿ; ಅದು ಹರಿಯುವುದಕ್ಕೆ ಶುರುಮಾಡಿ ಐದು-ಆರು ಮೈಲಿ ಬರೀ ಮರಳಿನೊಳಗೆ, ಸಬ್‌ಟೆರೇನಿಯನ್ನಿನಲ್ಲಿ ಹೋಗುತ್ತಿದೆ. ಅದು ಗೊತ್ತಾದವರನ್ನು ಮುಟ್ಟಿ ಎಲ್ಲಿಯೊ ಹೋಗುವುದಾದರೆ ಯೋಜನೆ ಹೆಸರಿನಲ್ಲಿ, ಸಾಲ ಕೊಡುವ ಹೆಸರಿನಲ್ಲಿ ನಾವು ಅದಕ್ಕೆ ಉತ್ತೇಜನ ಕೊಟ್ಟಂತಾಗುತ್ತದೆ, ಇದರಿಂದ ದೇಶ ಕಟ್ಟುವುದಕ್ಕಾಗುವುದಿಲ್ಲ, ಸಮಾಜವಾದ ಸಮಾಜವನ್ನು ತರವಂಥಾದ್ದು ಸಾಧ್ಯವಿಲ್ಲ. ದೇಶವನ್ನು ಈಗಿರುವಂತೆ ಉಳಿಸುವುದಕ್ಕೂ ನಮಗೆ ಸಾಧ್ಯವಾಗುವುದಿಲ್ಲವೆಂತ ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ.

Sri K. S. SURYANARAYANA RAO (Mysore City).—Sir, I do not wish to take much time. I would like to confine myself to only one topic, *i.e.*, Sales-tax. This morning, we read in the Newspapers that there will be a licencing of food distribution. It suggests that every person who deals in foodgrains has to register himself, has to pay a deposit and has to pay perhaps a fee. It was this fee that was there in the Sales-tax Act originally and that was changed and we have reintroduced 1 per cent multi-point sales-tax on foodgrains. So, what we sought to adjust is reintroduced and we are having a second dose. These are the days when there is a cry of the soaring high pricesof essential commodities. I do not mind luxury goods going up. Those who can afford, perhaps, will have them.

ಶ್ರೀ ಎಸ್. ಗೋಪಾಲ ಗೌಡ.—ಬ್ಲೇಡು ಲಕ್ಸುರಿ ಗುಡ್ಸ್? ಎಂದು ತಮ್ಮ ಮೂಲಕ ಕೇಳುತ್ತಿದ್ದೇನೆ. 60 ನಯೆಪೈಸೆ ಒಂದು ಜಿಲ್ಲೆಟ್ ಬ್ಲೇಡಿಗೆ ಆಗುತ್ತದೆ.

Sri K. S. SURYANARAYANA RAO.—I did not mention which of them essential and which of them are luxury goods. A blade is a necessity unless we chose to grow beard.

ಶ್ರೀ ಡಿ. ದೇವರಾಜ ಅರಸ್.—ಹಾಗಾದರೆ ಎಲ್ಲ ಗಡ್ಡ ಬೆಳಸಿಕೋಳ್ಳಬೇಕೊ ?

Sri K. S. SURYANARAYANA RAO.—What will happen perhaps is, that the industry will protest and say : "what is this ? Government is encouraging people to grow beard." It is something like a Small-Car Project. Therefore, I do not think the Minister will venture to suggest our growing of beards. On the other hand, I would very much wish the Government to think about these things and to see how best the cost of razorblade comes down. That should be the approach. I am only sorry

how lightly we are treating matters. That is not the way. Therefore, I only hope that the Government will be serious enough to take things as seriously as a common man feels about it and try to have things under control. Control means a controlled way of distribution and checking of soaring prices. But, what is it we are doing to-day ? The cost of food articles and essential goods is going up. If we take off 2 per cent multi-point sales-tax on foodgrains, possibly it will reduce the cost a little. The cost is going up and we are adding tax to these necessities. This fee will be there again. This licencing begins and so many other undesirable things start and the distribution will become more costlier than what it is to-day. Therefore, I would very strongly urge on the Government to give up this 2 per cent multi-point sales-tax. May be that we lose some money. They say that crores of rupees are given as subsidy. These are days of subsidies. We say, we are giving as subsidy of crores of rupees to Co-operative Societies, we are giving subsidy for loss incurred in grade and we are giving subsidy to the Wearhouses if there should be pilferage. All these subsidies are there. I think, this is one such subsidy that you can think of. I wish the House finds time to discuss how we can plug the loopholes, how we can rationalise the tax structure and how we can economise and reduce the tax burden.

Therefore Sir, I say where there is a will, there is a way. Unfortunately, we do not seem to think of it at all Because the cost of the necessities, let me take food grains, which was 98 yesterday, a certain variety, this morning it was quoted at Rs. 100. Possibly the upper middle class men want finer variety which is more than Rs. 100 per bag.

Sri D. DEVARAJ URS. Which is that rice which was quoted like that ?

Sri K. S. SURYANARAYANA RAO.--Coimbatore Sanna or Bangar Sanna.

Sri D. DEVARAJ URS.—It is not so Sir. There are two types of rice—one is old rice and one is new rice. The majority of people are not using the old rice. They are using only the new rice and the medium rice. If Mr. Suryanarayana Rao wants old rice and pays a higher price, I cannot help it.

Sri K. S. SURYANARAYANA RAO.—What is the rate of the coarse rice today ? Let him not bother about the finer variety. What is the rate of ragi today ? Therefore, we cannot argue these things. They are there glaringly staring at us. We cannot shut our eyes to reality and say we do not see this within these four walls. If we go to the market place, of course, now they are on the treasury benches,—normally they used to go to the common market place and they would have known. Now it is rather difficult, because even if they go, it cannot be possible for them to know the truth. So this is the problem of the common man. I want our Government to think about it and see how the cost of the essential commodities are brought down. In any case, the present way of handling things, is not the way to bring down the price structure. You are now trying to add the licence fee in respect of rice. Our friend wanted to know wherefrom he got the money. If you go on giving

(SRI K. S. SURYANARAYANA RAO)

subsidy, where do you get the money. I am sorry, we are not looking at things from that angle. Therefore, whether it is a blade or foodgrains, it is the same. The other day some people argued and said: I always talk about consumer—what about the producer? I say even to the producer, there are ways of helping and supporting him. We are not doing it. For example, I will tell you about the fertiliser Why should you have a margin of 18-20/ per cwt. Is such a big margin necessary? Why should you have half-a-dozen people for distribution, Democracy is a costly affairs, I know. But there must be a way of doing things and these things should be done properly. Another thing is we are prepared to give subsidy for managerial co t of co-operative societies which misuse the funds. Why not give subsidy for the materials that the raiyat has to buy—iron materials for cart and other things? We do not give him subsidy and we say the retention price is there, profits and handling charges are there In order to meet these charges, this poor man is compelled to pay more. He therefore says that he has not got a fair price for his produce.

Sri M. C. BASAPPA.—Getting fair price for his produce is quite different.

Sri K. S. SURYANARAYANA RAO.—This is the way you can always help him. The fertiliser that he needs should be supplied to him at cheaper price. Possibly that will bring down the cost of production. Every year, well before the season, let them fix up the rates. Today, we are allowing speculation. Our State Government has come to the market in the month of February and says: it will buy and the price of the material has gone up to 43-44 per quintal of paddy, because Government entered the speculative market. We want that the man who produces should have a fair deal. We do not fix up proper prices when it is selling. We go to the market to percash when the raiyat has none to sell. That is how things are happening. Therefore, if we think about the tax structure and reorganise the several departments that are associated with the distribution and production of the necessities of life, possibly, we will be able to check prices of commodities. Even the other day, the Planning Commission has said, subsiding is not a solution. It is only a temporory remedy and it is only putting off the evil day. Therefore, instead of simply subsiding and getting over the difficulty, let us think in a deeper way and try to take concrete steps by which we can reduce these prices.

[SRI M. Y. GHORPADE (Chairman) in the Chair)]

So Sir, I wanted to confine myself to one topic which was uppermost in mind. I wanted to tell the Government that instead of levying 2 per cent sales-tax on foodgrains, you better avoid other unnecessary expenditure and try to balance the gap of 2 crores or 1½ crores If that is done, prices will come down. Today our closing balance will be something of the order of minus 18 crores or so—it is a minus balance.

When we can have 18 crores minus balance, and by ways and means 14 crores, why not have 2 crores more because the source from which we get is the same.

Mr. CHAIRMAN.—Is he sure of the figures of 18 crores? Is it 8 crores or 8 crores. I think it is 8.8 crores, if I remember correct.

Sri K. S. SURYANARAYANA RAO.—I stand corrected. It may be 8 crores, Sir. My only complaint is that there is no proper approach to the problems. They should try to face the facts and try to find out lasting remedy for the ills. But we are lost in the jumble of figures and somebody who may or may not have any practical experience or only has some theoretical experience, he will advise in his own way today. Such things should not happen.

Sri D. DEVARAJ URS.—By merely removing 2 per cent sales-tax on food grains, will the price come down? The moment there is an announcement that there is an increase in D. A the price will shoot up.

Sri K. S. SURYANARAYANA RAO.—Sir, I am extremely sorry. The revision of pay scales or the giving of a higher D A. will not very much have any speculative effect on the market. It is more the tax-structure and the tax burden that will have its effect. Of course, there may be a little inflatory trend which lends itself to higher prices. Inflation is a thing which everybody knows today. Then we say we want to raise the standard of living. We say we will revise the pay scales to keep pace with the rising prices. Are we in a position to revise salaries to a point when the salaried classes are able to make both ends meet? Therefore the remedy would be to bring down the cost. Either revise the salaries to that level or bring down the cost. We are doing neither. We are just thinking of giving an increase of Rs. 5/- in D. A. If he buys 3 blades, one rupee is gone out of his pocket. What is it that he is left with? Therefore, that is not the solution. We will have to think about it. Of course, we must just avoid by saying that it is the responsibility of the Centre. We agree. But you and I must think out these things and tell the Centre about it. Just yesterday, I read in the papers that the Agricultural Ministers have agreed to the proposal of the Centre to introduce licencing.

Sri D. DEVARAJ URS.—We are asking the merchants to take license just with a view to finding out how much of stock they hold and in what manner they distribute or sell the stock. Without knowing the stock position it may not be possible to effectively control the prices. This is one of the methods whereby we really want to know the stock position at a given time throughout the country. What objection my friend has with regard to the issuing of licence, he has not been able to tell us clearly.

Sri K. S. SURYANARAYANA RAO.—The merchant is not running a charity house. Every pie that he pays to the State he will charge to his consumer. We must know the stock position; to know the stock position this is not the only mode. There are other ways open. You can ask them to declare their stocks. (Sri D. Devaraj Urs They will not declare. In addition to taking licence, we are going to

(SRI K. S. SURYANARAYANA RAO)

ask them to declare.) For purposes of declaration, this heavy fee is not necessary. Therefore, I only request the State Government to think about the entire tax structure in contrast to the price structure that is prevailing to-day and see how best they can try to meet the common man's needs. That is all that I have got to say about sales-tax. With these remarks, I close my speech.

SRI B. P. KADAM (Karwar).—Mr. Speaker, Sir, I wish to offer a few suggestions on some of the items which are under discussion. Firstly, I refer to sales tax. Sales tax is a major source of revenue to our State, but there is leakage on a very large scale. The very officers who have to be vigilant, rather than collecting more tax they are helping the traders to evade tax. There was a big expert on income-tax in the City of Bombay; who was an income tax practitioner. It was said by him that he earned more by way of advising the income-tax payees to evade tax. So also you can imagine the situation here if the sales tax inspectors and other officers who are good experts, are more active in helping the traders to evade tax. What is necessary in this department is to have a striking squad just as there was one in the Police Department to deal with those who smuggled goods from Goa. Whether that squad had really struck the smugglers from Goa, that apart, there was such a squad. By appointing such a squad in the Sales Department, we can at least imagine that they would be collecting more. The main duty of the squad in the sales tax department should be to check the traders, whether they are evading tax or paying regularly. Many a trader keep two books or even three books and if there is a striking squad it will be possible to catch them red-handed. There can be surprise checks. Therefore, Government would do well to detect some cases and see that deterrent punishment is given to the culprits.

Regarding territorial and political pensions, I find that the dependents and relatives of the past rulers are still being paid pensions and allowances. It is very unfortunate to see that a class of parasites depending on State aid is still maintained. About pensions, I wish to say something. Undue time is taken to settle the pension claims. A friend of mine from the City of Hubli has written to me a letter that even though 18 months have elapsed since retirement, his pension claims have not been settled. He wrote three letters to the Minister for Finance whom he personally knows still nothing has been done so far. I will intimate the name of the officer to the Hon'ble Finance minister afterwards. There are innumerable cases like this where the people who have retired from service are facing undue hardships. There is another category of people whose seniority claims have not been settled for the past 6 or 7 years and incidentally, their provident fund claims also will not be settled. Their seniority claims have not been settled on account of technicalities and on account of the finalisation of the Inter-State seniority or fixation still pending by the Government of India. Many such people have already retired from service and they have retired on a

paltry sum of pension. If their seniority had been fixed early, they would have retired as Gazetted Officers. They have a large number of dependents and after retirement they are finding it very difficult to pull on and it will not be predicted if some such people resort to the extreme step of committing suicide. Let it not be said that Government were not warned in right time. Such cases must be taken up in right earnest and their claims settled without any delay.

About Loans and Advances by the State Government, the grant of taccavi loans to agriculturists has been in existence for the last so many years. But in the matter of granting such advances, a lot of corruption has crept into the revenue department and there is tendency on the part of the village officers and even Tahsildars to collect what is called 'dakshina' their share from the cultivators. The taccavi loans applied for by the agriculturists are not paid to them promptly even though they visit the offices several times and contact the hierarchy of officers right from the village officers to the Tahsildar. Some clerk or somebody says that 'dakshina' must be paid to some Sahib here and some Sahib there and the helpless agriculturist is compelled to pay a portion of the loan amount; in some cases, not even 50 percent of the loan amount goes to the hands of the ryot. This is very harsh. If the loan is to be paid, it must be paid within 15 days from the date of application. The Revenue Officer must finalise all the papers and he must say that it will be paid or not and if it is to be paid, it must be paid within fifteen days. If this Government can do it, let them do it; otherwise this facility may be scrapped. Let not the cultivator be kept under suspense.

3-30 P.M.

ಶ್ರೀಮತಿ ಸುಶೀಲಾಬಾಯಿ ಹೀರಾಚಂದ ಶಹಾ (ಬಾಗೇವಾಡಿ).—ಮಾನ್ಯ ಅಧ್ಯಕ್ಷರೇ, ಈ ಡಿಮ್ಯಾಂಡ್‌ಗಳನ್ನು ನಾನು ಸ್ವಾಗತಿಸುತ್ತಾ ಅಗ್ರಿಕಲ್‌ಚರಲ್ ಇನ್‌ಕಂಟ್ಯಾಕ್ಸ್ ಮತ್ತು ಸೇಲ್ಸ್ ಟ್ಯಾಕ್ಸ್‌ಗಳ ಬಗ್ಗೆ ನಾಲ್ಕು ಮಾತುಗಳನ್ನು ಆಡಬಯಸುತ್ತೇನೆ. ಈಗ ತಾವು ಹಾಕತಕ್ಕ ಅಗ್ರಿಕಲ್ಚರ್ ಇನ್‌ಕಂಟ್ಯಾಕ್ಸ್ ಬಹಳ ಅನ್ಯಾಯವಾದ್ದು. ಇದರಿಂದ ರೈತನಿಗೆ ಬಹಳ ತೊಂದರೆಯಾಗುತ್ತಿದೆ. ಇದರಿಂದ ಸರ್ಕಾರಕ್ಕೂ ಸರಿಯಾಗಿ ಹಣ ಬರುವುದಿಲ್ಲ. ಈ ದಿವಸ ಸರ್ಕಾರಕ್ಕೆ ಈ ಬಾಬಿನಿಂದ ಸುಮಾರು 4 ಕೋಟಿ ರೂಪಾಯಿಗಳು ತೆರಿಗೆ ಬರಬಹುದು. ಆದರೆ ಈ ಕಾನೂನಿನಲ್ಲಿ ಬಹಳ ತೊಡಕಿದೆ. ಅದರಿಂದ ರೈತರಿಗೆ ಬಹಳ ಅನ್ಯಾಯವಾಗುತ್ತದೆ. ಕೆಲವರು 10 ಎಕರೆಗೆ ಕಬ್ಬನ್ನು ಹಚ್ಚಿದ್ದರೆ ಅಲ್ಲಿಯ ಅಧಿಕಾರಿಗಳು ನಾಲ್ಕು ಎಕರೆಗಳೆಂತಲೇ ಬರೆದು ಬಿಡುತ್ತಾರೆ. ಇದರಿಂದ ಸರ್ಕಾರಕ್ಕೆ ಬರತಕ್ಕ ಟ್ಯಾಕ್ಸ್ ಕಡಮೆಯಾಗಬಹುದು. ಹೀಗೆ ಈಗಿರತಕ್ಕ ಕಾನೂನಿನಲ್ಲಿ ಇಂಥ ಅಡಚಣೆಗಳಿವೆ. ಯಾರು ದುಡ್ಡನ್ನು ಕೊಡುವುದಿಲ್ಲವೋ ಅಂಥವರಿಗೆ ಅಲ್ಲಿರತಕ್ಕ ತಲಾಟಿಗಳು ಕೂತಿದ್ದ ಸ್ಥಳದಲ್ಲೇ ಅಂದರೆ ಚಾವಡಿಗಳಲ್ಲೇ 4 ಎಕರೆಗೆ ಕಬ್ಬನ್ನು ಹಾಕಿದ್ದರೂ ಅವರು 10-11 ಎಕರೆ ಕಬ್ಬನ್ನು ಹಾಕಿದ್ದಾನೆಂದು ಲೆಕ್ಕದಲ್ಲಿ ಹಚ್ಚಿಬಿಡುತ್ತಾರೆ. ಹಾಗೆ ಬರೆದರೆ ಆ ರೈತ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸನ್ನು ಕೊಡಬೇಕಾಗುವುದು. ಈ ತೆರಿಗೆಯೆಂದರೆ ರೈತರಿಗೆ ತುಂಬಾ ಘಾಬರಿ. ಇದಕ್ಕಾಗಿ ಅವನು ವಕೀಲನ ಹತ್ತಿರ ಹೋಗಬೇಕಾಗುವುದು. ಅವನೂ ಸಾಕಷ್ಟು ಹಣವನ್ನು ಈತನಿಂದ ಕಸಗೊಂಡು ಮತ್ತೆ, ಆತನಿಗೆ ನೀನು 4000 ರೂಪಾಯಿಗಳ ತೆರಿಗೆಯನ್ನು ಸರ್ಕಾರಕ್ಕೆ ತುಂಬಲೇಬೇಕು ಇಲ್ಲದಿದ್ದರೆ ನಿನ್ನ ಜಮೀನು ಹರಾಜಾಗಿ ಹೋಗುತ್ತದೆ ಎಂದು ಘಾಬರಿ ಮಾಡಿಬಿಡುತ್ತಾನೆ. ಇಂಥ ಒಂದು ಟ್ಯಾಕ್ಸನ್ನು ಹಾಕಿರುವುದರಿಂದ ರೈತರ ಕಲ್ಯಾಣವಾಗುವುದಿಲ್ಲ. ಸರ್ಕಾರಕ್ಕೂ ಸಹಾ ಹಣ ಸರಿಯಾಗಿ ಬರುವುದಿಲ್ಲ. ಖಜಾನೆಗೆ ಬರತಕ್ಕ ಹಣ ತಪ್ಪಿ ಹೋಗಿ ರೈತನಿಗೆ ತೊಂದರೆ ಕಿರುಕುಳ ಜಾಸ್ತಿಯಾಗುತ್ತದೆ. ಇದರಿಂದ ದೇಶಕ್ಕೆ ಒಳ್ಳೆಯದಾಗುವುದಿಲ್ಲ. ಸರ್ಕಾರದವರು ಈ ತೆರಿಗೆಯನ್ನು ಬೇರೆ ರೂಪದಲ್ಲಿ ಬೇಕಾದರೆ ಡಬ್ಬಲ್ ಹಾಕಲಿ. ಅಂತೂ ಅಗ್ರಿಕಲ್ಚರಲ್

(ಶ್ರೀಮತಿ ಸುಶೀಲಾಬಾಯಿ ಹೀರಾಚಂದ ಶಹಾ)

ಇನ್‌ಕಂಟ್ಯಾಕ್ಸ್ ಬೇಡ ಎಂದು ಹೇಳುತ್ತೇನೆ. ಹೀಗೆ ಮಾಡಿದರೆ ಸರ್ಕಾರಕ್ಕೆ ಅಗ್ರಿಕಲ್ಚರ್ ತೆರಿಗೆಯಿಂದ ಬರುವುದಕ್ಕೆ ಡಬ್ಬಲ್ ತೆರಿಗೆ ಬರುತ್ತದೆ. ಅಧಿಕಾರಿಗಳು ಈ ವಿಚಾರದಲ್ಲಿ ಬಹಳ ತಪ್ಪು ಮಾಡುತ್ತಿದ್ದಾರೆ. ಒಂದು ವೇಳೆ ಒಬ್ಬ ರೈತ 4 ಎಕರೆಗೇ ಕಬ್ಬನ್ನು ಹಾಕಿದ್ದರೂ ಆತನಿಗೆ ನೀನು ನೀರು ತೆಗದುಕೊಂಡು ಕಬ್ಬನ್ನು ಹಚ್ಚಿದ್ದೀಯೇ ಎಂದು ಹೇಳಿ ಆಗಲೂ ತೊಂದರೆ ಕೊಡುತ್ತಾರೆ.

ಬಾವಿ ಇದ್ದ ಜಮೀನಿನಲ್ಲಿ ಕಬ್ಬು ಹಚ್ಚಿದ್ದಿಯೇ ಎಂದು ಏನಾದರೊಂದು ಬರೆದುಬಿಡುತ್ತಾರೆ. ಒಬ್ಬ ಮನುಷ್ಯ 50 ಎಕರೆಗೆ ಹತ್ತಿ ಹಾಕಿದರೆ ಟ್ಯಾಕ್ಸ್ ಕೊಡಬೇಕಾಗುತ್ತದೆಂದು 45 ಎಕರೆಗೆ ಮಾತ್ರ ಹತ್ತಿ ಹಾಕಿದ್ದನು. ಆದರೆ ಅಲ್ಲಿಯ ತಲಾಟಿ 50 ಎಕರೆಗಳಲ್ಲಿ ಹತ್ತಿ ಹಾಕಿದ್ದಾನೆಂದು ಲೆಕ್ಕದಲ್ಲಿ ಹಚ್ಚಿಬಿಟ್ಟ. ಪಾಣಿ ಲೆಕ್ಕದಲ್ಲಿ ಬರೆದೇ ಬಿಟ್ಟ. ನೀರುಬಿಟ್ಟು ಹತ್ತಿ ಬೆಳೆಸಿದ್ದೀಯೇ ಎಂದು ಬೇರೆ ಬರೆದಿದ್ದ. ಆ ರೈತನು ಹೋಗಿ ಏನೋ ಹೇಳಿಕೊಂಡಮೇಲೆ ಆ ನೀರು ಎಂಬ ಶಬ್ದಕ್ಕೆ ಹಿಂದೆ (ಇಲ್ಲ) ಎಂಬ ಇನ್ನೊಂದು ಶಬ್ದ ಹಾಕಿ ನೀರಿಲ್ಲದ ಬೆಳೆ ಎಂದು ಹೇಳಿ ಕೈಬಿಡಲಾಯಿತಂತೆ. ಹೀಗೆ ಕೊಟ್ಟರೇ ಒಂದು ಬರವಣಿಗೆ ಕೊಡವಿದ್ದರೇ ಒಂದು ಬರವಣಿಗೆ ಹೀಗಿದೆ. ಹೀಗೆ ಅಲ್ಲಿ ಏನೇನೋ ನಡೆಯುತ್ತಿದೆ. ಇದರಿಂದ ಸರ್ಕಾರಕ್ಕೆ ಹಣ ಬರುವುದಿಲ್ಲ, ರೈತರ ಕಲ್ಯಾಣವೂ ಆಗುವುದಿಲ್ಲ. ಆದರೆ ನಾನು ಸರ್ಕಾರಕ್ಕೆ ಟ್ಯಾಕ್ಸ್ ಕೊಡಬಾರದೆಂದು ಹೇಳುತ್ತಿಲ್ಲ. ನೀವು ಯಾವ ತೆರಿಗೆಯನ್ನೇ ಹಾಕಿ, ಅದರಿಂದ ಜನರಿಗೆ ತೊಂದರೆಯಾಗಬಾರದು, ಖಜಾನೆಗೆ ಸರಾಗವಾಗಿ ಹಣ ಬರುವಂತಿರಬೇಕು, ಅದರಿಂದ ರೈತರ ಕಲ್ಯಾಣವೂ ಆಗುವಂತಿರಬೇಕು; ಆರೀತಿ ಟ್ಯಾಕ್ಸನ್ನು ಹಾಕಬೇಕೆಂದು ಹೇಳುತ್ತೇನೆ. ಆದರೆ ಈಗ ಹಾಕತಕ್ಕ ಟ್ಯಾಕ್ಸ್ ಯೇನಿದೆ ಇದರಿಂದ ಸಂಸಾರಗಳು ಒಡೆಯುತ್ತಿವೆ. ಹೆಂಡತಿ ಹೆಸರಿನಲ್ಲೂ ಹೊಲ ಗಂಡನ ಹೆಸರಿನಲ್ಲೂ ಹೊಲ, ಮಗನ ಹೆಸರಿನಲ್ಲೂ ಹೊಲ, ಹೀಗಾಗಿದೆ. ಇದ್ದ ಜಮೀನನ್ನೆಲ್ಲಾ ಇವರು ಹಂಚಿಕೆ ಮಾಡಿ ಪಾರೀಕತ್ತು ಮಾಡಿಕೊಂಡಿದ್ದಾರೆ. ಆದ್ದರಿಂದ ಈ ತೆರಿಗೆಯಿಂದ ಕಷ್ಟ ಜಾಸ್ತಿ ಹೊರತು ಸರ್ಕಾರಕ್ಕೇನೂ ಅಷ್ಟು ಹೆಚ್ಚಿನ ಆದಾಯ ಬರುತ್ತಿಲ್ಲ. ಇನ್ನು ಸೇಲ್ಸ್‌ಟ್ಯಾಕ್ಸ್ ತೆರಿಗೆಯಲ್ಲಿ ಮೂರುವರ್ಷದ ಹಿಂದಿನ ಲೆಕ್ಕಗಳನ್ನು ಕೊಡಬೇಕೆಂದು ಹೇಳುತ್ತಾರೆ. ಇದರಿಂದ ಅರ್ಧ ಅಧಿಕಾರಿಗಳಿಗೆ ತೊಂದರೆ ಕೊಡಲು ಅವಕಾಶವಾಗಿದೆ. ವ್ಯಾಪಾರಿಗಳಿಗಾದರೆ ಇದು ಸುಲಭ. ರೈತನಿಗೆ ಇದು ಸಾಧ್ಯವಿಲ್ಲ. ರೈತನಿಗೆ ಸರಿಯಾಗಿ ಲೆಕ್ಕ ಇಟ್ಟು ಸಮಜಾಯಿಷಿ ಕೊಡುವುದಕ್ಕೆ ತಿಳಿಯದು. ಅಧಿಕಾರಿಗಳು ಒಳ್ಳೇ ರೀತಿಯಿಂದ ನಡೆದುಕೊಂಡರಂತೂ ಸರಿ, ಇಲ್ಲದಿದ್ದರೆ ರೈತನ ಗೋಳು ಹೇಳತೀರದಾಗಿದೆ. ನೀರಾವರಿ ಇರತಕ್ಕ ಅಗ್ರಿಕಲ್ಚರ್ ಇನ್‌ಕಂಟ್ಯಾಕ್ಸನ್ನು ತಾವು ಬೇಕಾದರೆ ಡಬ್ಬಲ್ ಮಾಡಿ. ಇನ್ನುಳಿದ ಜಮೀನುಗಳಿಗೆ ಈ ಟ್ಯಾಕ್ಸನ್ನು ಹಾಕಬಾರದೆಂದು ಹೇಳುತ್ತೇನೆ. ಹೀಗೆಮಾಡಿ ಸರಿಯಾದ ಅಧಿಕಾರಿಗಳನ್ನಿಟ್ಟರೆ ಸರ್ಕಾರಕ್ಕೆ ಬರತಕ್ಕ ಆದಾಯ ಡಬ್ಬಲಾಗುತ್ತದೆ. ತಾವು ಸರ್ಕಾರದ ಟ್ರೆಜರಿಗೆ ಸರಿಯಾಗಿ ಹಣಬರುವಂಥ ರೀತಿಯಲ್ಲಿ, ರೈತನ ಕಲ್ಯಾಣವಾಗತಕ್ಕ ರೀತಿಯಲ್ಲಿ ರೈತನಿಗೆ ಕಿರುಕುಳವಾಗದ ರೀತಿಯಲ್ಲಿ ತೆರಿಗೆ ಹಾಕತಕ್ಕ ವಿಧಾನವನ್ನು ಅನುಸರಿಸಬೇಕೆಂದು ಹೇಳಿ ನನಗೆ ಈ ನಾಲ್ಕು ಮಾತನಾಡಲು ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನಾನು ಕುಳಿತುಕೊಳ್ಳುತ್ತೇನೆ.

† ಶ್ರೀ ಕೆ. ಪಿ. ರೇವಣಸಿದ್ದಪ್ಪ (ತಿಪಟೂರು).—ಈಗತಾನೆ ಶ್ರೀಮತಿ ಸುಶೀಲಾಬಾಯಿಯವರು ಮಾತನಾಡಿದ್ದನ್ನು ಕೇಳಿದೆನು. ಅವರು ಹೇಳಿದ್ದು ಬಹುಶಃ ನನಗೆ ತಿಳಿದಮಟ್ಟಿಗೂ ಹಳ್ಳಿಯಲ್ಲಿರತಕ್ಕ ರೈತರಿಗೆ ಅಗ್ರಿಕಲ್ಚರ್ ಇನ್‌ಕಂಟ್ಯಾಕ್ಸನ್ನು ಹಾಕಬಾರದು, ಈ ತೆರಿಗೆಯಿಂದ ಈಗ ಗಂಡನೇ ಬೇರೆ, ಹೆಂಡತಿಯೇ ಬೇರೆ, ಮಗನೇ ಬೇರೆ ಜಮೀನನ್ನು ಮಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ ಅನ್ನುವ ಅಭಿಪ್ರಾಯವನ್ನು ಅವರು ವ್ಯಕ್ತಪಡಿಸಿದಂತೆ ನಾನು ಅರ್ಥಮಾಡಿಕೊಂಡಿದ್ದೇನೆ. ಈ ದೃಷ್ಟಿಯಿಂದ ರೈತರಿಗೆ ಅಗ್ರಿಕಲ್ಚರ್ ಇನ್‌ಕಂಟ್ಯಾಕ್ಸ್ ಹಾಕುವುದು ಸರಿಯಿಲ್ಲವೆಂದು ಹೇಳಿದ್ದಾರೆ. ವರ್ತಕರಿಗೆ ಟ್ಯಾಕ್ಸ್ ಹಾಕುವಂತೆ ರೈತರಿಗೂ ಟ್ಯಾಕ್ಸನ್ನು ಹಾಕಿದರೆ ಧಾನ್ಯದ ಬೆಲೆ ಜಾಸ್ತಿಯಾಗುತ್ತದೆ. ಇದರಿಂದ ರೈತ ಹೆಚ್ಚು ಧಾನ್ಯದ ಉತ್ಪತ್ತಿಯನ್ನೂ ಸಹಾ ಮಾಡುವುದಿಲ್ಲ ಎಂಬುದಾಗಿ ಅವರು ಹೇಳಿದ್ದಾರೆ. ಇದೇ ಅವರು ವ್ಯಕ್ತಪಡಿಸಿದ ಅಭಿಪ್ರಾಯವೆಂದು ನಾನು ಭಾವಿಸಿದ್ದೇನೆ. ಇನ್ನು ಇಲ್ಲಿ ಮುನಿಸಿಪಾಲಿಟಿಗಳಿಗೆ ಕೊಡುವುದಕ್ಕಾಗಿ 58 ಲಕ್ಷ ರೂಪಾಯಿಗಳನ್ನೂ, ರೈತರಿಗೆ ಸಾಲ ಕೊಡಲು 2 ಕೋಟಿ 66 ಲಕ್ಷ ರೂಪಾಯಿಗಳನ್ನೂ, ಗೆಜೆಟೆಡ್ ಅಧಿಕಾರಿಗಳಿಗೆ ಕಾರುಗಳನ್ನು ಕೊಂಡುಕೊಳ್ಳಲು 6 ಲಕ್ಷ ರೂಪಾಯಿಗಳನ್ನೂ ಮತ್ತು ನಾನ್‌ಗೆಜೆಟೆಡ್ ನೌಕರಿಗೆ 2 ಲಕ್ಷ ರೂಪಾಯಿಗಳನ್ನೂ ತೆಗೆದಿಟ್ಟಿಲ್ಲ ಅದನ್ನು ತೋರಿಸಿದ್ದಾರೆ. ಇದೊಂದರಿಂದಲೇ ಈ ಸರ್ಕಾರ ಎಷ್ಟರಮಟ್ಟಿಗೆ ಸೋಷಿಯಲ್ ಪ್ಯಾಟ್ರನ್ ಆಫ್ ಸೊಸೈಟಿಯನ್ನು ಜಾರಿಗೆ ತರುತ್ತಾರೆಂಬ ವಿಷಯ ಎಲ್ಲರಿಗೂ ವೇದ್ಯವಾಗುತ್ತದೆ. ಮುನಿಸಿಪಾಲಿಟಿಗಳಿಗೆ ಕೊಡತಕ್ಕ ಸಾಲದ ಮೊಬಲಗು ಅದರ ಜೊತೆಗೆ ಕಂಟ್ರಾಕ್ಟರುಗಳಿಗೆ ಸಾಲ ಕೊಡಲು ಉದ್ದೇಶಿಸಿರತಕ್ಕ ಮೊಬಲಗು 3 ಲಕ್ಷ ಎಂತ ಹೇಳಿದ್ದಾರೆ. ಅಂದರೆ ಇವರು ಟೆಂಡರನ್ನು

ಕೊಡತಕ್ಕ ಕಾಲದಲ್ಲಿ ಅಡ್ವಾನ್ಸಾಗಿ ಎಷ್ಟು ಹಣ ಕೊಡುತ್ತಾರೆಂಬುದನ್ನು ಹೇಳಿಲ್ಲ. ಇನ್ನು ಹೌಸಿಂಗ್ ಸ್ಕೀಮನ್ನು ಬೇರೆ ಹೇಳಿದ್ದಾರೆ; ಆದರೆ ನಮ್ಮ ದೇಶದಲ್ಲಿ ಎಷ್ಟು ಜನರಿಗೆ ಮನೆಗಳಿಲ್ಲ, ಎಲ್ಲೆಲ್ಲಿ ಜನಗಳಿಗೆ ಮನೆಯಿಲ್ಲ, ಇನ್ನೂ ಎಷ್ಟು ಮನೆಗಳು ನಮಗೆ ಅಗತ್ಯವಿದೆ ಎಂಬತಕ್ಕ ತಪಶೀಲು ಗಳೊಂದೂ ಇವರಲ್ಲಿಲ್ಲ. ಪ್ರತಿವರ್ಷ ಶೇಕಡಾ ಯಾವ ದಾಮಾಷದಲ್ಲಿ ಮನೆಗಳನ್ನು ಒದಗಿಸ ಬೇಕೆಂದಿದ್ದಾರೆ ಎಂಬ ವಿವರಗಳೊಂದೂ ಇಲ್ಲ. ಇನ್ನು ಕೋ-ಆಪರೇಟಿವ್ ಸೊಸೈಟಿಗಳ ವಿಚಾರ ಹೇಳುತ್ತಾ ದಾಂಡೇಲಿಯಲ್ಲಿ ಊರೇ ಇಲ್ಲ ಅಂಥ ಕಡೆ ಊರನ್ನು ಕಟ್ಟುತ್ತೇವೆಂದು 4 ಲಕ್ಷ ರೂಪಾಯಿ ಗಳನ್ನು ತೋರಿಸಿದ್ದಾರೆ. ಇದೇನು ಇವರು ಕಥೆಯನ್ನು ಬರೆಯುತ್ತಿದ್ದಾರೋ ಏನೋ ಒಂದು ಗೊತ್ತಾಗುವುದಿಲ್ಲ. ದಂಡೇಲಿ ಎಂಬುದು ಒಳ್ಳೆಯ ಕೈಗಾರಿಕೆಯ ಸ್ಥಳ. ಇನ್ನು ರೂರಲ್ ಕಮ್ಯೂನಿಟಿ ಡೆವಲಪ್‌ಮೆಂಟ್ ಬಗ್ಗೆ ಸಾಲವಾಗಿ ಐದು ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ಇಂತಹ ಹಣವನ್ನು ಮಾರ್ಚ್ ತಿಂಗಳಲ್ಲಿ ಸರ್ಕಾರದವರು ತಾಲ್ಲೂಕು ಮತ್ತು ಜಿಲ್ಲಾ ಹೆಡ್ ಕ್ವಾರ್ಟರ್ಸ್‌ಗಳಿಗೆ ಕಳುಹಿಸು ತ್ತಾರೆ. ಆದ್ದರಿಂದಲೇ ಆ ಬಾಬಿಗೆ ಸಂಬಂಧಪಟ್ಟ ಹಾಗೆ ಅಭಿವೃದ್ಧಿ ಕೆಲಸ ಕಾರ್ಯಗಳನ್ನು ಮಾಡುವು ದಕ್ಕಾಗುವುದಿಲ್ಲ.

ಇನ್ನು ಪೆನ್ಷನ್ ಪೇಪರ್ಸ್ ವಿಷಯವಾಗಿ ನಾನು ಒಂದೆರಡು ಮಾತುಗಳನ್ನು ಹೇಳಬೇಕೆಂದಿ ದ್ದೇನೆ. ಸರ್ಕಾರೀ ನೌಕರರು ಪೆನ್ಷನ್ ಆದ ಕೂಡಲೇ ಅವರಿಗೆ ಪೆನ್ಷನ್ ಬರುವುದಿಲ್ಲ. ಬಹು ಬೇಗ ಅಂತಹ ಕೇಸುಗಳನ್ನು ತೀರ್ಮಾನ ಮಾಡುತ್ತೇವೆಂದು ಬಾಯಲ್ಲಿ ಹೇಳುತ್ತಾರೆ. ಕಾರ್ಯತಃ ಒಂದೂ ಆಗುತ್ತಿಲ್ಲ. ರಿಟೈರ್ ಆದ ಬಹಳ ದಿನಗಳಿಗೆ ಆದರಲ್ಲೂ ಕೆಲವರು ಸತ್ತು ಹೋದ ಮೇಲೆ ಅವರಿಗೆ ಪೆನ್ಷನ್ ಮಂಜೂರಾಗಿ ಬರುತ್ತದೆ. ಈ ರೀತಿ ಸತ್ತ ಮೇಲೆ ಕೊಡುವ ಪೆನ್ಷನ್ನನ್ನು ಯಾವ ಪರ್ಸೆಂಟಿಗೆ ಇಳಿಸಿದ್ದಾರೋ ಗೊತ್ತಿಲ್ಲ. ನಿವೃತ್ತಿ ಹೊಂದಿದ ನೌಕರರ ಜೀವ ಇರುವಾಗಲೇ ಪೆನ್ಷನ್ ಕೊಡುವುದಕ್ಕೇನಾದರೂ ವ್ಯವಸ್ಥೆ ಮಾಡಿದ್ದಾರೋ ಇಲ್ಲವೋ ಗೊತ್ತಿಲ್ಲ. ಒಟ್ಟಿನಲ್ಲಿ ಸರ್ಕಾರೀ ನೌಕರಿಯಿಂದ ನಿವೃತ್ತಿ ಹೊಂದಿದ ಮೇಲೆ ಅಂತಹ ನೌಕರರಿಗೆ ನಿವೃತ್ತಿ ವೇತನ ಕೊಡುವ ಬಗ್ಗೆ ಕಾಲ ವಿಳಂಬ ಮಾಡದೆ ಅತಿ ಜಾಗ್ರತೆಯಾಗಿ ಅವರ ಕಾಗದಗಳನ್ನು ತೀರ್ಮಾನಿಸುವಂತೆ ಸರ್ಕಾರದವರು ತಕ್ಕ ವ್ಯವಸ್ಥೆಯನ್ನು ಕೂಡಲೇ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸು ತ್ತೇನೆ.

ಶ್ರೀ ಬಿ. ಡಿ. ಜತ್ತಿ.—ಪರ್ಟಿಕ್ಯುಲರ್ ಕೇಸ್ ಗಮನಕ್ಕೆ ತಂದರೆ ಹೇಳಬಹುದು.

Sri B. P. KADAM.—I raised a point. I asked what would be the fate of those Government servants who retire now and whose claims in respect of seniority are settled much after retirement. If their seniority had been settled in time, they would have become gazetted officers and be entitled to higher salary. Would Government give them benefits of promtion even after retirement?

Sri B. D. JATTI.—If the Hon'ble Member cares to go through the provisions of the State Reorganisation Act, everything would be clear. We will follow those provisions.

Mr. SPEAKER.—The question is :

"That the respective sums not exceeding the amounts shown in the list of demands circulated to the members be granted to defray the charges which will come in course of payment during the financial year ending with 31st day of March 1965 in respect of demands Nos. 1, 5, 34, 35, 36, 40, 41, 52 and 54"

The motion was adopted.

As directed by the Chair the motion for Demands for Grants which were adopted by the House, are reproduced below:—

DEMAND No. 1.—TAXES ON INCOME OTHER THAN CORPORATION TAX.

Taxes on Income other than Corporation Tax.

"That a sum not exceeding Rs. 4,27,000 be granted to the Government to defray the charges which will come in course of payment during the financial year for the period ending 31st day of March 1965, in respect of 'Taxes on Income other than Corporation Tax'."

DEMAND No. 5.—SALES-TAX—ADMINISTRATION.

12. *Sales-Tax.*

"That a sum not exceeding Rs. 41,82,000 be granted to the Government to defray the charges which will come in course of payment during the financial year for the period ending 31st day of March 1965, in respect of 'Sales-Tax'."

DEMAND No. 34.—PENSIONS AND OTHER RETIREMENT BENEFITS.

65. *Pensions and other Retirement Benefits.*

"That a further sum not exceeding Rs. 2,21,40,000 be granted to the Government to defray the charges which will come in course of payment during the financial year for the period ending 31st day of March 1965, in respect of 'Pensions and other Retirement Benefits'."

DEMAND NO. 35.—TERRITORIAL AND POLITICAL PENSIONS.

66. *Territorial and Political Pensions.*

"That a sum not exceeding Rs. 1,73,000 be granted to the Government to defray the charges which will come in course of payment during the financial year for the period ending 31st day March 1965, in respect of 'Territorial and a Political Pension'."

DEMAND NO. 36.—PRIVY PURSES AND ALLOWANCES.

67. *Privy Purses and Allowances of Indian Rulers.*

"That a sum not exceeding Rs. 32,000 be granted to the Government to defry the charges which will come in course of payment during the financial year for the period ending 31st day of March 1965, in respect 'Privy Purses and Allowances of Indian Rulers'."

5- P.M.

DEMAND NO. 40.—COMMUTATION OF PENSIONS.

72. *Commutation of Pensions.*

"That a sum not exceeding Rs. 7.52,000 be granted to the Government to defray the charges which will come in course of payment during the financial year for the period ending 31st day of March 1965, in respect of 'Commutation of Pensions'."

DEMAND NO. 41.—MISCELLANEOUS CONTRIBUTIONS AND ASSIGNMENTS

76. *Other Miscellaneous Contributions and Assignments.*

"That a sum not exceeding Rs. 89,16,000 be granted to the Government to defray the charges which will come in course of payment during the financial year for the period ending 31st day of March 1965, in respect of 'Other Miscellaneous Contributions and Assignments'."

DEMAND NO. 52.—COMMUTED VALUE OF PENSIONS.

120. *Payments of Commuted Value of Pensions.*

"That a sum not exceeding Rs. 7,52,000 be granted to the Government to defray the charges which will come in course of payment during the financial year for the period ending 31st day of March 1965, in respect of 'Payments of Commuted Value of Pensions'."

DEMAND NO. 54.—ADVANCES AND LOANS.

Q. Loans and Advances by State and Union Territory Governments.

"That a sum not exceeding Rs. 10,43,99,000 be granted to the Government to defray the charges which will come in course of payment during the financial year for the period ending 31st day of March 1965, in respect of 'Loans and Advances by State and Union Territory Governments'."

Mr. SPEAKER.—I wish to inform the House that on the 30th of March 1964 at 9-00 P.M. in the Legislators' Home, a Special documentary film styled 'Malnad', will be shown to the Hon'ble Members. It is a beautiful film. The Joint Director, Field Publicity, says that he will show it at the Legislators' Home. I am mentioning particularly for the benefit of those Members, who are staying outside. As a measure of abundant caution, I will have a Circular also issued. If there are any other films which the Members would like to see, that can also be arranged,

Budget Estimates for 1964-65

DEMAND NO. 27

Smt. YASHODARA DASAPPA (Minister for Social Welfare).—Sir, on the recommendation of the Governor of Mysore, I beg to move:

"That a sum not exceeding Rs. 1,87,60,000 be granted to the Government to defray the charges which will come in course of payment during the financial year for the period ending 31st day of March 1965, in respect of 'Miscellaneous Social and Developmental Organisations'."

Mr. SPEAKER.—Motion moved:

"That a sum not exceeding Rs. 1,87,60,000 be granted to the Government to defray the charges which will come in course of payment during the financial year for the period ending 31st day of March 1965, in respect of 'Miscelleneous Social and Developmental Organisations'."

DEMAND NOS. 38 AND 51

Sri B. RACHIAH (Minister for Forests and Fisheries).—Sir, on the recommendation of the Governer of Mysore, I beg to move:

"That a sum not exceeding Rs. 5,46,29,000 be granted to the Government to defray the charges which will come in course of payment during the financial year for the period ending 31st day of March 1965, in respect of 'Forests'."

Sri B. RACHAIAH.—Sir, on the recommendation of the Governor of Mysore I beg to move;

"That a sum not exceeding Rs. 14,00,000 be granted to the Government to defray the charges which will come in course of payment during the financial year for the period ending 31st day of March 1965, in respect of 'Capital outlay on Forests'."

Mr. SPEAKER.—Motion moved :

"That a sum not exceeding Rs. 5,46,29,000 be granted to the Government to defray the charges which will come in course of payment during the financial year for the period ending 31st day of March 1965, in respect of Forests'."

"That a sum not exceeding Rs. 14,00,000 be granted to the Government to defray the charges which will come in course of payment during the financial year for the period ending 31st day of March 1965, in respect of 'Capital Outlay on Forests'."

† ಶ್ರೀ ಬಿ. ಎಲ್. ಗೌಡ (ಚಳ್ಳಕೆರೆ).—ಸಭಾಪತಿಯವರೇ, ಈ ಒಂದು ಸಮಾಜ ಕಲ್ಯಾಣದ ಮತ್ತು ಹರಿಜನ ಗಿರಿಜನ ಅಭಿವೃದ್ಧಿಗಳ ಬೇಡಿಕೆಗಳ ವಿಚಾರದಲ್ಲಿ ಮಾತನಾಡುತ್ತಾ ನಾನು ಈ ಮಾನ್ಯ ಸಭೆಯ ಮುಂದೆ ಬಹಳ ವಿಷಾದ ಪೂರಿತವಾಗಿ ಕೆಲವು ವಿಷಯಗಳನ್ನು ಇಡಬಯಸುತ್ತೇನೆ ಯಾವುದೇ ಒಂದು ದೇಶವಾಗಲೀ, ರಾಜ್ಯವಾಗಲೀ ಮುಂದುವರಿಯಬೇಕಾಗಿದ್ದರೆ: ಒಂದು ಸಮಾಜ ದಲ್ಲಿರತಕ್ಕ ಪ್ರತಿಯೊಂದು ವರ್ಗವೂ ಮುಂದೆ ಬರಲು ಸಹಾಯವಾಗತಕ್ಕಂಥ ಮತ್ತು ಅವರ ಯೋಗ ಕ್ಷೇಮಗಳನ್ನು ಕಾಪಾಡತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದು ಸರ್ಕಾರದ ಕರ್ತವ್ಯ. ಈ ಸಂಗತಿಯನ್ನು ಮನಗಂಡೇ ನಮ್ಮ ದೇಶದ ರಾಜ್ಯಾಂಗವನ್ನು ರಚಿಸತಕ್ಕವರು ಅದರಲ್ಲಿ ಸಮಾಜದ ಪ್ರತಿಯೊಂದು ವರ್ಗಕ್ಕೂ ಒಂದು ರಕ್ಷಣೆಯನ್ನು ಕೊಟ್ಟುಕೊಂಡೇ ಬಂದಿದ್ದಾರೆ. ಆದರೂ ಅಂಥ ಒಂದು ಕಾನೂನುಬದ್ಧವಾದ ರಕ್ಷಣೆ ರಾಜ್ಯಾಂಗದಲ್ಲಿದ್ದರೂ ನಮ್ಮ ಮೈಸೂರು ಸರ್ಕಾರದವರು ಆ ರಕ್ಷಣೆಗಳನ್ನು ಕೊಟ್ಟಿಲ್ಲವೆಂದು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಈ ಇಲಾಖೆಯವರು ಈ ದಲಿತ ಜನಾಂಗದ ವಿಚಾರದಲ್ಲಿ ಏನೇನು ಅಭಿವೃದ್ಧಿ ಕಾರ್ಯಗಳನ್ನು ನಡೆಸಿದ್ದಾರೆಂದರೆ ಅದಕ್ಕೆ ಒಂದು ದೊಡ್ಡ ಸೊನ್ನೆಯನ್ನು ಹಾಕಿದ್ದಾರೆ. ಹಾಗಿರುವಾಗ ನಮಗೆ ಈ ಇಲಾಖೆಯಿಂದ ಏನು ಪ್ರಯೋಜನ? ಇದು ಏತಕ್ಕಿರಬೇಕು ಎಂಬ ಅನುಮಾನ ನಮಗೆ ಬಂದಿದೆ. ನಮಗೆ ಈ ಮಂತ್ರಿಗಳ ಕಾಲದಲ್ಲಿ ಈ ಜನಾಂಗದ ಅಭಿವೃದ್ಧಿ ಗೋಪುರದಷ್ಟು ಆಗುತ್ತದೆಂದು ನಾವು ಆಶಿಸಿದ್ದೆವು. ಅದೆಲ್ಲಾ ಈ ದಿವಸ ಮಣ್ಣುಪಾಲಾಗಿದೆ. ಈ ನಮ್ಮ ಮಂತ್ರಿಗಳವರು ಈ ಹಿಂದೆ ಮಹಾತ್ಮ ಗಾಂಧಿಯವರ ಆಶ್ರಮದಲ್ಲಿ ವಾಸವಾಗಿದ್ದವರು. ಇವರಿಗೆ ಈ ವಿಚಾರದಲ್ಲಿ ಬೇಕಾದಷ್ಟು ಅನುಭವ ವಿದೆ.

Mr. SPEAKER.—Why speak about personalities? Let him come directly to the point.

ಶ್ರೀ ಬಿ. ಎಲ್. ಗೌಡ.—ನಾನು ಹೇಳತಕ್ಕ ವಿಚಾರ ಎಲ್ಲರಿಗೂ ಗೊತ್ತಿರತಕ್ಕದ್ದು. ಮಂತ್ರಿಗಳ ವಿಚಾರದಲ್ಲಿ ನನಗೆ ಬಹಳ ಗೌರವವಿದೆ.

Mr. SPEAKER.—I have no doubt that every Member of this House has got the highest respect for the Hon'ble Minister, but I am more concerned with regard to the default of the Government.

ಶ್ರೀ ಬಿ. ಎಲ್. ಗೌಡ.—ಈ ಇಲಾಖೆ ಅಸ್ತಿತ್ವಕ್ಕೆ ಬಂದಮೇಲೆ ಇಲ್ಲಿಗೆ 2 ವರ್ಷಗಳಿಂದ ಇಲ್ಲಿ ಆಗಿರತಕ್ಕ ಅವಿವೇಕಗಳನ್ನೂ ಮತ್ತು ಲೋಪದೋಷಗಳನ್ನೂ ಈ ಮಾನ್ಯ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ. ನನಗೆ ಕ್ಲೋಸ್ ಅಸೋಸಿಯೇಷನ್ನಿನಲ್ಲಿದ್ದು ನನಗೆ ಚೆನ್ನಾಗಿ ಗೊತ್ತಿರುವ ಕೆಲವು ವಿಷಯಗಳನ್ನೀಗ ಹೇಳಲಿಚ್ಛಿಸುತ್ತೇನೆ. ಈ ಇಲಾಖೆಯ ಬಗ್ಗೆ ಈಗಾಗಲೇ ಸಾಕಷ್ಟು ಚರ್ಚೆ ನಡೆದಿದೆ, ಈ ಹಿಂದೆ ಹರಿಜನಗಿರಿಜನರಿಗೆ ಮನೆಗಳನ್ನು ಕಟ್ಟಿಕೊಳ್ಳಲು ಗ್ರಾಂಟ್ ರೂಪದಲ್ಲಿ ಹಣವನ್ನು ಕೊಡುತ್ತಿದ್ದರು. ಅದು ಏನೋ ಒಂದು ರೀತಿಯಲ್ಲಿ ನಡೆದುಕೊಂಡು ಬರುತ್ತಿತ್ತು. ಈಗ ಈ ಸಭೆ

(ಶ್ರೀ ಬಿ. ಎಲ್. ಗೌಡ)

ಯಲ್ಲೂ ಇದು ವಿಫಲವಾಗಿ ಚರ್ಚೆಯಾಗಿದೆ. ಆ ಒಂದು ಪದ್ಧತಿಯನ್ನು ಬದಲಾವಣೆ ಮಾಡಿ ಈಗ ಈ ಒಂದು ಹೊಸ ಪದ್ಧತಿಯನ್ನು ಜಾರಿಗೆ ತಂದು ಹಿಂದೆ ಮುಫತ್ತಾಗಿ ಹಣ ಕೊಡುತ್ತಿದ್ದುದನ್ನು ಈಗ ರದ್ದು ಮಾಡಿದ್ದಾರೆ. ಈಗ ಈ ಜನರು ತಮ್ಮ ಅಭಿವೃದ್ಧಿಯನ್ನು ತಾವೇ ಸಾಧಿಸಿಕೊಳ್ಳಲು ಅನುಕೂಲವಾಗುವಂತೆ ಮಾಡುತ್ತೇವೆಂದು ಹೇಳಿ ಇವರಿಗೆ 126 ಸೊಸೈಟಿಗಳನ್ನು ಸ್ಥಾಪನೆ ಮಾಡಿದ್ದಾರೆ. ಒಂದು ಜಿಲ್ಲೆಗೆ 6 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ, ಇನ್ನುಳಿದ ಜಿಲ್ಲೆಗಳಲ್ಲಿರತಕ್ಕ ಸೊಸೈಟಿಗಳಿಗೆ ಒಂದು ಕಾಸನ್ನೂ ಕೊಟ್ಟಿಲ್ಲ. ನಿಜವಾಗಿಯೂ ಆರ್ಥಿಕ ಸ್ಥಿತಿಯಲ್ಲಿ ಹಿಂದುಳಿದಿರತಕ್ಕ ಈ ಹರಿಜನ ಗಿರಿಜನರು ಈ ಸೊಸೈಟಿಗಳಲ್ಲಿ ಷೇರನ್ನು ಹಾಕಲು ತಮ್ಮಲ್ಲಿದ್ದ ಅಷ್ಟಿಷ್ಟು ಒಡವೆ ವಸ್ತುಗಳನ್ನು ಮಾರಿ ತಮ್ಮ ಸೊಸೈಟಿಗಳನ್ನು ಬಹಳ ಕಷ್ಟಪಟ್ಟು ರಿಜಿಷ್ಟರ್ ಮಾಡಿಸಿಕೊಂಡಿದ್ದಾರೆ. ಅಲ್ಲಿ ಷೇರ್‌ದಾರರಾಗಿ ಸಾಲಕ್ಕೆ ಅರ್ಜಿ ಹಾಕಿ ಇಲ್ಲಿಗೆ ಒಂದು ವರ್ಷದ ಮೇಲಾಯಿತು ಅವರು ಮನೆಯು ಕಟ್ಟಡಕ್ಕೆ ಬೇಕಾದ ಕೆಲವು ಸಾಮಾನುಗಳನ್ನು ಹೊಂದಿಸಿಕೊಂಡಿದ್ದರೂ ಅವರಿಗೆ ಸರ್ಕಾರದವರು ಹಣವನ್ನು ಕೊಡದೆ ಇರುವುದರಿಂದ ಅವರು ಮನೆಗಳನ್ನು ಕಟ್ಟಿಕೊಳ್ಳಲು ಸಾಧ್ಯವಾಗಿಲ್ಲ. ಇನ್ನು ಹರಿಜನರಿಗೆ ಈ ಮನೆಗಳಿಗಿಂತಲೂ ಅತಿಶಯವಾಗಿರತಕ್ಕ ಕುಡಿಯುವ ನೀರಿನ ಬಾವಿಗಳಿಲ್ಲ. ಅವರಿಗೆ ಕುಡಿಯುವ ನೀರಿನ ಬಾವಿಗಳನ್ನು ಒದಗಿಸತಕ್ಕ ಕೆಲಸದಲ್ಲಿ ಸರ್ಕಾರದವರು ವಿಫಲರಾಗಿದ್ದಾರೆ. ಇದನ್ನು ತಿಳಿಸಲು ನನಗೆ ಬಹಳ ವಿಷಾದವಾಗುತ್ತದೆ. ಇಷ್ಟು ಕೆಲಸವನ್ನು ಸಾಧಿಸಲು ಈ ಇಲಾಖೆಗೆ ಸಾಧ್ಯವಾಗಲಿಲ್ಲ ಎಂದಮೇಲೆ ಈ ಇಲಾಖೆಯನ್ನು ಏಕೆ ವೈಂಡಪ್ ಮಾಡಬಾರದೆಂದು ಕೇಳುತ್ತೇನೆ ? ನಮ್ಮ ಜಿಲ್ಲೆಯಲ್ಲಿ 13 ಹರಿಜನರ ಹಟ್ಟಿಗಳಲ್ಲಿ ಕುಡಿಯುವ ನೀರಿನ ಬಾವಿಗಳಿಲ್ಲ. ಅದಕ್ಕಾಗಿ ನಾವು ಬೇಕಾದ ಅಂದಾಜು, ಪ್ಲಾನ್ ಇತ್ಯಾದಿಗಳನ್ನೆಲ್ಲಾ ಮಾಡಿಸಿ ಕಳುಹಿಸಿಕೊಟ್ಟೆವು. ಆದರೆ ಇಲ್ಲಿಯವರೆಗೂ ಅಲ್ಲಿ ಒಂದು ಬಾವಿಯನ್ನಾದರೂ ತೆಗಿಸಿಲ್ಲ. ಹೀಗಿರುವಾಗ ಏಕೆ ಈ ಇಲಾಖೆಯಿರಬೇಕು ? ಇನ್ನು ಈ ಇಲಾಖೆಯವರು ಕೆಲವರ ಉಪಯೋಗಕ್ಕಾಗಿ ಕೆಲವು ಕಾಲೋನಿಗಳನ್ನು ಮಾಡಿದ್ದಾರೆ. ನಮ್ಮ ತಾಲ್ಲೂಕಿನಲ್ಲಿ ಅಂಥ ಮೂರು ಕಾಲೋನಿಗಳಿವೆ. ಒಂದು ರಾಜಪ್ಪ ಕಾಲೋನಿ, ಎರಡು ಜತ್ತಿ ಕಾಲೋನಿ, ಮೂರನೆಯದು ಜಗಜೀವನರಾಮ ಕಾಲೋನಿ ಹೀಗೆ ಮೂರು ಕಾಲೋನಿಗಳಿವೆ ಈ ಹೈಕಿ ರಾಜಪ್ಪ. ಕಾಲೋನಿಯಲ್ಲಿ 512 ಎಕರೆ ಜಮೀನಿದೆ. ಅಲ್ಲಿ 200 ಎಕರೆ ನೀರಾವರಿಯಾಗತಕ್ಕ ಅವಕಾಶವಿದೆ. ಅಲ್ಲಿರತಕ್ಕ ಜನರಲ್ಲಿ ಅವರವರಲ್ಲೇ ಒಳಜಗಳ ಎದ್ದಿದೆ. ಅಲ್ಲಿ 119 ಜನರಿಗೆ ಜಮೀನು ಮಂಜೂರಾಗಿದೆ. ಅಲ್ಲಿ 300 ಜನರು ವಾಸವಾಗಿದ್ದಾರೆ. ಈಗ ಅವರವರಲ್ಲೇ ವ್ಯಾಜ್ಯ ಉಂಟಾಗಿ ಆ 119 ಜನರೂ ಈಗ ಕೋರ್ಟಿಗೆ ಓಡಾಡುತ್ತಿದ್ದಾರೆ. ಆ ಜಮೀನು 145 ನೇ ಸೆಕ್ಷನ್ ಪ್ರಕಾರ ಅಟ್ಯಾಚಾಗಿದೆ.

ಇಂತಹ ಒಂದು ಅಕ್ರಮ ಈ ಇಲಾಖೆಯಲ್ಲಿ ನಡೆಯುತ್ತಾ ಇದೆ. ಈ ಇಲಾಖೆಗೆ ಸಂಬಂಧಪಟ್ಟ ಮಂತ್ರಿಗಳಾದ ಸೋಷಿಯಲ್ ವೆಲ್‌ಫೇರ್ ಮಂತ್ರಿಗಳು ಏತಕ್ಕೋಸ್ಕರ ಸೂಕ್ತ ಕ್ರಮ ತೆಗೆದುಕೊಳ್ಳಲಿಲ್ಲ. ಇನ್ನು ಅಗ್ರಿಕಲ್‌ಚರಲ್ ಕಾಲೋನಿಗಳನ್ನು ಮಾಡುವ ಉದ್ದೇಶವೇನು ? ಇನ್ನೊಂದು ವಿಷಯ. ಸನಿಕೆರೆ ಕಾವಲನಲ್ಲಿ ಜತ್ತಿಯವರ ಹೆಸರಿನಲ್ಲಿ ಕಾಲೋನಿಯನ್ನು ಇಟ್ಟಿದ್ದಾರೆ. ಒಂದು ಲಕ್ಷ 60 ಸಾವಿರ ರೂಪಾಯಿಗಳನ್ನು ಮನೆ ಕಟ್ಟುವುದಕ್ಕೋಸ್ಕರ, ಎತ್ತುಗಳನ್ನು ಕೊಂಡುಕೊಳ್ಳುವುದಕ್ಕೋಸ್ಕರ, ದನದ ಕೊಟ್ಟಿಗೆಗಳನ್ನು ಕಟ್ಟುವುದಕ್ಕೋಸ್ಕರ ಗ್ರಾಂಟು ರೂಪವಾಗಿ ಖರ್ಚು ಮಾಡಿದ್ದಾರೆ. ಕಾಲೋನಿಗಳನ್ನು ಕಟ್ಟುವುದಕ್ಕೆ ಪ್ರಾರಂಭ ಮಾಡುವುದಕ್ಕೆ ಮುಂಚಿತವಾಗಿ ಅಲ್ಲಿನ ಸ್ಥಳವನ್ನು ಪರಿಶೀಲನೆ ಮಾಡಿದ್ದಾರೋ ಇಲ್ಲವೋ ಗೊತ್ತಿಲ್ಲ. ಈಗ ಊರಿನವರು ಈ ವಿಷಯದಲ್ಲಿ ತಕರಾರು ಮಾಡಿದ್ದರಿಂದ ಅನೇಕ ಜಮೀನುಗಳು ನೀರಿನಲ್ಲಿ ಮುಳುಗಡೆಯಾಗಿದೆ. ಈ ರೀತಿ ತಕ್ರಾರು ಆಗಿ ಆ ಒಂದು ಲಕ್ಷ 60 ಸಾವಿರ ರೂಪಾಯಿಗಳು ಮಣ್ಣುಪಾಲು ಮಾಡಿದ್ದಾರೆ. ಈಗ ಅದರಿಂದ ಒಂದು ಸಂಸಾರವೂ ಜೀವನ ಮಾಡುವ ಹಾಗಿಲ್ಲ. ಅವರಿಗೆ ವಾಸಕ್ಕೆ ಮನೆಯೇ ಇಲ್ಲ. ಇದು ಬಹಳ ವಿಷಾದಕರವಾದ ಸಂಗತಿ. ಅಂತಹ ಪರಿಸ್ಥಿತಿ ಅಲ್ಲಿ ಇದೆ. ಮುಖ್ಯವಾಗಿ ಕಾಲೋನಿಗಳನ್ನು ಕಟ್ಟುವಾಗ ಅಥವಾ ಅವುಗಳನ್ನು ಕಟ್ಟುವುದಕ್ಕೆ ಪ್ರಾರಂಭ ಮಾಡುವುದಕ್ಕಿಂತ ಮುಂಚೆ ಸಂಬಂಧಪಟ್ಟ ಅಧಿಕಾರಿಗಳು ಆ ಸ್ಥಳವನ್ನು ಚೆನ್ನಾಗಿ ಪರಿಶೀಲನೆ ಮಾಡಿ ಜಮೀನು ಸರ್ಕಾರಕ್ಕೆ ಸಂಬಂಧಪಟ್ಟದು ಇದೆಯೋ ಇಲ್ಲವೋ ಎಂಬುದನ್ನು ವಿಚಾರ ಮಾಡಿದ್ದರೆ ಈ ಒಂದು ಲಕ್ಷ 60 ಸಾವಿರ ರೂಪಾಯಿಗಳು ನಿಜವಾಗಿ ಲುಕ್ಸಾನು ಆಗುತ್ತಿರಲಿಲ್ಲ. ಇದೇ ರೀತಿಯಾಗಿ ಹಿರೇಕೆರೆ ಕಾವಲನಲ್ಲಿಯೂ ಒಂದು ಅಗ್ರಿಕಲ್‌ಚರಲ್ ಕಾಲೋನಿಯನ್ನು ಮಾಡಿದ್ದಾರೆ. ಅಲ್ಲಿಗೂ ಸುಮಾರು 2 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ. ಸುಮಾರು 15 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಗುಡದ ಮೇಲೆ ಬಾವಿಗಳನ್ನು ತೆಗೆಸಿದ್ದಾರೆ. ಆದರೆ ಆ ಎರಡು ಬಾವಿಗಳಲ್ಲೂ ನೀರಿಲ್ಲ. 30 ಮನೆಗಳವರು ಅದರಿಂದ ಊರನ್ನು ಬಿಟ್ಟು ಹೋದರು 15 ಸಾವಿರ ರೂಪಾಯಿಗಳನ್ನು ಖರ್ಚು

ಮಾಡಿದ್ದರೂ ಏನೂ ಫಲವಿಲ್ಲದಂತಾಯಿತು. ಅಲ್ಲೊಂದು ಕಮ್ಯೂನಿಟಿ ಸೆಂಟರ್ ಮಾಡಿದ್ದರು. ಅಲ್ಲಿದ್ದ ಒಂದು ಸ್ಕೂಲ್ ಬೇರೆ ಬಿದ್ದು ಹೋಗಿದೆ. ಮನೆಗಳನ್ನು ಕಟ್ಟುವುದಕ್ಕಾಗಿ ಸುಮಾರು 2 ಲಕ್ಷ ರೂಪಾಯಿಗಳನ್ನು ವೃಥಾ ಅನ್ಯಾಯ ಮಾಡಿದ್ದಾರೆ. ಲುಕ್ಸಾನು ಮಾಡಿದ್ದಾರೆ. ಬರವಣಿಗೆಯ ಮೂಲಕವೂ, ಸಂಬಂಧಪಟ್ಟ ಉಪಮಂತ್ರಿಗಳಿಗೂ personal ಆಗಿಯೂ ಕಂಡು ಹೇಳಿದ್ದೇವೆ. ಆದರೂ ಇದುವರೆಗೆ ಏನೊಂದು ಕ್ರಮವನ್ನು ತೆಗೆದುಕೊಂಡಿಲ್ಲ. ಇದರಲ್ಲಿ ಯಾರು ತಪ್ಪಿತಸ್ಥರು. ಯಾರು ಅಂತಹ ಲೋಪದೋಷಗಳ ಕೆಲಸವನ್ನು ಮಾಡಿದ್ದಾರೆಂಬುದನ್ನು ಏತಕ್ಕೋಸ್ಕರ ಇವರು ತನಿಖೆ ಮಾಡಲಿಲ್ಲವೋ ಗೊತ್ತಿಲ್ಲ. ಈ ರೀತಿ ಯಥೇಚ್ಛವಾಗಿ ಹಣವನ್ನು ಲೋಪಮಾಡಿ ವ್ಯಯಮಾಡತಕ್ಕ ಇಲಾಖೆ ಏತಕ್ಕೋಸ್ಕರ ನಮ್ಮ ದೇಶದಲ್ಲಿರಬೇಕೆಂದು ನಾನು ಪ್ರಶ್ನೆಮಾಡುತ್ತೇನೆ. ಇದೇ ರೀತಿಯಲ್ಲಿ ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿನಲ್ಲಿ ಕೆಲವು ಅಗ್ರಿಕಲ್‌ಚರಲ್ ಕಾಲೋನಿಗಳನ್ನು ಮಾಡಿದ್ದಾರೆ. ಅಲ್ಲಿಯೂ ಬಹಳ ವಿಷಾದಕರವಾದ ಪರಿಸ್ಥಿತಿ ಇದೆ. ಇದಕ್ಕಾಗಿ ಬಹಳ ಹಣ ವ್ಯಯವಾಗಿದೆ. ಈಗಲಾದರೂ ತಕ್ಕ ಕ್ರಮ ತೆಗೆದುಕೊಂಡು ಈ ಕಾಲೋನಿಗಳನ್ನು ಬಹಳ ಒಳ್ಳೆಯ ಸ್ಥಿತಿಗೆ ತರಬೇಕೆಂದು ನಾನು ಮಂತ್ರಿಗಳಲ್ಲಿ ತಮ್ಮ ಮೂಲಕ ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಮೊದಲಿನಿಂದಲೂ ಹಿಂದುಳಿದವರು ಅದರಲ್ಲೂ ಅನುಸೂಚಿತ ಜಾತಿಗಳು ಆದಷ್ಟು ಮುಂದೆ ಬರಬೇಕೆಂದು ಹೇಳಿ ವಿದ್ಯಾರ್ಥಿ ವೇತನಗಳನ್ನು ಬಹಳ ಲಿಬರಲ್ಲಾಗಿ ಕೊಡುತ್ತಿದ್ದರು. ಈಗಿನ ಪರಿಸ್ಥಿತಿ ನೋಡಿದರೆ ಎಲ್ಲರಿಗೂ ವಿದ್ಯಾರ್ಥಿ ವೇತನ ಸಿಗುತ್ತಿಲ್ಲ. ನನ್ನ ಜಿಲ್ಲೆ ವಿಚಾರವಾಗಿ ಹೇಳುವುದಾದರೆ ಎಲ್ಲಾ ಷೆಡ್ಯೂಲ್ಡ್ ಕ್ಯಾಸ್ಟ್ ಜನಗಳಿಗೆ ಈ ವರ್ಷ ಅದನ್ನು ಕೊಟ್ಟಿಲ್ಲ. ಇದರಿಂದ ಹಿಂದುಳಿದವರನ್ನು ಮುಂದೆ ತರುತ್ತೇವೆಂದು ಹೇಳುವುದರ ಅರ್ಥವೇನು ? ವಿದ್ಯಾರ್ಥಿವೇತನವನ್ನು ಅವರಿಗೆ ಕೊಡದೇ ಇರುವುದಕ್ಕೆ ಕಾರಣವೇನು ? ಈ ವಿದ್ಯಾರ್ಥಿಗಳಿಗೆ ಸಾಕಷ್ಟು ವ್ಯವಸ್ಥೆ ಮಾಡಿದೆ ಎಂದು ಸುಮ್ಮನೆ ಬಾಯಲ್ಲಿ ಹೇಳುತ್ತಾರೆ. ಈ ರೀತಿ ಮಾಡಿದರೆ ನಿಜವಾಗಿ ಈ ಪಂಗಡದವರು ಮುಂದೆ ಬರುವುದಕ್ಕೆ ಸಾಧ್ಯವಿಲ್ಲ. ಯಾರು ಇದರಲ್ಲಿ ಅಪೇಕ್ಷೆ ಪಡುತ್ತಾರೋ ಅವರಿಗೆ ಇದನ್ನು ಕೊಡುವುದು ಸರ್ಕಾರದ ಕರ್ತವ್ಯವಾಗಿದೆಯೆಂದು ನಾನು ಹೇಳಬಯಸುತ್ತೇನೆ. ಇನ್ನು ವಿದ್ಯಾರ್ಥಿ ನಿಲಯಗಳಲ್ಲಿ ಎಲ್ಲಾ ಜಾತಿಯ ವಿದ್ಯಾರ್ಥಿಗಳು ಸೇರಬೇಕೆಂಬ ತತ್ವವನ್ನು ಇವರು ಇಟ್ಟುಕೊಂಡಿದ್ದಾರೆ. ಇದನ್ನು ಮಂತ್ರಿಗಳೂ, ಸರ್ಕಾರದವರೂ ಒಪ್ಪಿಕೊಂಡಿದ್ದಾರೆ. ಈಗಿನ 19 ಜಿಲ್ಲೆಗಳಲ್ಲಿ ಕೇವಲ ಎರಡು ಹಾಸ್ಟಲುಗಳಲ್ಲಿ ಮಾತ್ರ ಎಲ್ಲಾ ಜಾತಿಯವರನ್ನೂ ಸೇರಿಸುವ ವ್ಯವಸ್ಥೆ ನಡೆದಿದೆ. ಇದು ಬಹಳ ಮುಖ್ಯವಾದ ದೊಡ್ಡ ಪ್ರಶ್ನೆಯಲ್ಲವೇ ! ಪ್ರತಿಯೊಂದು ತಾಲ್ಲೂಕು ಹೆಡ್ ಕ್ವಾರ್ಟರ್ಸ್‌ನಲ್ಲಿ ಒಂದೊಂದು ವಿದ್ಯಾರ್ಥಿನಿಲಯ ಮಾಡಿ ಅಲ್ಲಿ ಎಲ್ಲಾ ಜಾತಿಯ ವಿದ್ಯಾರ್ಥಿಗಳನ್ನು ಸೇರಿಸಬೇಕೆಂಬುದಾಗಿ ಏತಕ್ಕೋಸ್ಕರ ಒಂದು ಸರ್ಕಾರಿ ಆಜ್ಞೆಯನ್ನು ಹೊರಡಿಸಬಾರದು ? ಈಗಲೇ ಇವರು ಆ ರೀತಿ ಆರ್ಡರ್ ಕೊಡಲಿ. ಬಾಕಿ ಜಾತಿಯವರೆಲ್ಲರೂ ಪ್ರತಿ ವಿದ್ಯಾರ್ಥಿ ನಿಲಯಕ್ಕೆ ಸೇರುವುದಕ್ಕೆ ಪ್ರಯತ್ನ ಪಡುತ್ತಾರೆ. ಇವರು ಸುಮ್ಮನೆ ಯಾವುದೊಂದು ಬಾಯಲ್ಲಿ ಹೇಳುವುದು ಜಾಸ್ತಿಯಾಗಿದೆಯೇ ಹೊರತು ಕಾರ್ಯದಲ್ಲಿ ನಡೆಯುವುದು ಬಹಳ ಕಡಿಮೆಯಾಗಿದೆ. ಇನ್ನು ಕಾನ್ಸ್ಟಿಟ್ಯೂಷನ್ನಲ್ಲಿರುವ ಪ್ರಕಾರ ಈ ಪಂಗಡದವರಿಗೆ ಹುದ್ದೆಗಳನ್ನು ಕೊಡುವಾಗ ಶೇ. 18 ರಷ್ಟನ್ನು ಮೀಸಲಾಗಿಡಬೇಕು ಎಂದು ಹೇಳಿದೆ. ಆದರೆ ಆ ವಿಷಯದಲ್ಲಿ ಇವರು ಏನು ಮಾಡಿಲ್ಲ. ಈ ವಿಷಯದಲ್ಲಿ ನಾವು ಬಹಳ ಕನಿಕರ ಪಡಬೇಕಾಗಿದೆ. ಸುಮಾರು 15 ಜನ ಸೋಷಿಯಲ್ ಆಫೀಸರ್ಸನ್ನು ಕೆಲಸದಿಂದ ತೆಗೆದು ಹಾಕಿರುವುದರಿಂದ ಅವರು ಸುಮಾರು 6-7-8 ವರ್ಷಗಳಿಂದ ಬೀದಿ ಬಿಕಾರಿಗಳ ಹಾಗೆ ಕೆಲಸಕ್ಕಾಗಿ ಅಲೆಯುತ್ತಿದ್ದಾರೆ. ಹೀಗಾದರೆ ಅವರ dependants, ತಾಯಿ ತಂದೆಗಳ ಗತಿಯೇನ ? ಇವರೇನಾದರೂ ಅದನ್ನು ಯೋಚನೆ ಮಾಡಿದ್ದಾರೆಯೇ ? ನಿಜವಾಗಿ ನಾನು ಕಾನೂನು ಪರಿಣತರಿಂದ ಅನೇಕ ವಿಚಾರಗಳನ್ನು ತಿಳಿದುಕೊಂಡಿದ್ದೇನೆ. ಹಿಂದೆ ಜತ್ತಿ ಮಂತ್ರಿ ಮಂಡಲವಿದ್ದ ಕಾಲದಲ್ಲಿ ಕಾನೂನು ಪ್ರಕಾರ ಎರಡನೇ ದರ್ಜೆ ನೌಕರರನ್ನು 6 ತಿಂಗಳುಗಳ ಕಾಲ ಹಂಗಾಮಿಯಾಗಿ ಕೆಲಸ ಮಾಡಿದ ಮೇಲೆ ಮನೆಗೆ ಕಳುಹಿಸಿದ್ದಾರೆ. ಏತಕ್ಕೋಸ್ಕರವೆಂದರೆ 6 ತಿಂಗಳುಗಳಾದ ಮೇಲೆ ಹಂಗಾಮಿಯಾಗಿರುವವರು ಇರಕೂಡದೆಂದು. ಡಿಸ್ಟ್ರಿಕ್ಟ್ ಸೋಷಿಯಲ್ ವೆಲ್‌ಫೇರ್ ಆಫೀಸರ್ ಹುದ್ದೆ ಬಗ್ಗೆ ನಾನು ಒಂದು ಹೇಳಿಕೆಯನ್ನು ಕೊಡಲು ಇಚ್ಛಿಸುತ್ತೇನೆ. 1960 ನೇ ಇಸವಿಯ ಹಿಂದೆ special officers of depressed class ಎಂದು ಹಳೆಯ ಮೈಸೂರಿನಲ್ಲಿತ್ತು. ಹೊಸ ಮೈಸೂರಿನಲ್ಲಿ 3ನೇ ದರ್ಜೆ ನೌಕರರು ಮತ್ತು 2ನೇ ದರ್ಜೆ ನೌಕರರು ಎಂದು ಇತ್ತು. 1-1-62 ರಲ್ಲಿ ಯಾರ್ಯಾರು ಹಂಗಾಮಿಯಾಗಿ ಕೆಲಸ ಮಾಡುತ್ತಿದ್ದಾರೋ ಅವರನ್ನು ಖಾಯಂ ಮಾಡಬೇಕು ಎಂಬುದಾಗಿ ಒಂದು ಸರ್ಕಾರೀ ಆಜ್ಞೆಯನ್ನು ಕೊಟ್ಟರು. ಆಗ 15 ಜನ ಸೋಷಿಯಲ್ ವೆಲ್‌ಫೇರ್ ಆಫೀಸರ್ಸ್ ಬೇಕೆಂದು 3ನೇ ದರ್ಜೆ ನೌಕರರನ್ನು ಖಾಯಂ ಮಾಡಿದಿರಿ. ಸೀನಿಯಾರಿಟಿ ಪ್ರಕಾರ ಸಂಬಂಧ ಪಟ್ಟ ಇಲಾಖೆಯಲ್ಲಿ ಇವರೆಲ್ಲರಿಗೂ ಉನ್ನತ ಸ್ಥಾನ ಪಡೆಯುವ ಅವಕಾಶವಿತ್ತು. ಈ ಕಾರ್ಯದಲ್ಲಿಯೂ ಸಹ ಸರ್ಕಾರ ವಿಫಲವಾಗಿದೆ. ಸರ್ಕಾರದವರು ಕೊಟ್ಟಿದ್ದಂತಹ ಸರ್ಕಾರೀ

(ಶ್ರೀ ಬಿ. ಎಲ್. ಗೌಡ)

ಆಜ್ಞೆಯನ್ನು ಸಹ ವಾಪಸ್ಸು ತೆಗೆದುಕೊಂಡರು. ಆದರೆ ಇವತ್ತಿನವರೆಗೂ ಆ ಹುದ್ದೆಗಳನ್ನು ಪಬ್ಲಿಕ್ ಸರ್ವೀಸ್ ಕಮಿಷನ್ನಿನಿಂದ ಅಡ್ವರ್ಟೈಸ್ ಮಾಡಿಸಿ ಅಭ್ಯರ್ಥಿಗಳು ಅರ್ಜಿ ಹಾಕುವುದಕ್ಕೆ ತಕ್ಕ ಏರ್ಪಾಡನ್ನು ಸರ್ಕಾರ ಮಾಡಲಿಲ್ಲ. ಇದರಿಂದ 15 –17 ಜನ ಬೀದಿ ಬಿಕಾರಿಗಳ ಹಾಗೆ ಕೆಲಸವಿಲ್ಲದೆ ತಿರುಗಾಡುತ್ತಿದ್ದಾರೆ. ಪಬ್ಲಿಕ್ ಸರ್ವೀಸ್ ಕಮಿಷನ್ನಿನವರು ಆ ಬಗ್ಗೆ ಅಡ್ವರ್ಟೈಸ್‌ಮೆಂಟನ್ನು ಕರೆದಿಲ್ಲ. ಇನ್ನು ನೋಟಿಫಿಕೇಷನ್ ಕಳುಹಿಸಿಲ್ಲ. ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಸೆಕ್ರೆಟರಿಯರು ಹಂಗಾಮಿಯಾಗಿ ಈ ಕೆಲಸವನ್ನು ನೋಡುತ್ತಿದ್ದರು. ಇವರನ್ನು ಮುಂದುವರಿಸಬೇಕಾಗಿತ್ತು. ಕೂಡಲೇ ಇವರನ್ನು ನೇಮಕ ಮಾಡಲು ಅಡ್ವರ್ಟೈಸ್‌ಮೆಂಟನ್ನು ಪಬ್ಲಿಕ್ ಸರ್ವೀಸ್ ಕಮಿಷನ್ ಮೂಲಕ ಮಾಡಿಸುವ ಒಂದು ಅವಕಾಶವನ್ನು ಕೊಡಬೇಕಾಗಿತ್ತು ಎಂಬುದಾಗಿ ನಾನು ತಮ್ಮ ಮೂಲಕ ಹೇಳಬಯಸುತ್ತೇನೆ. ಇದೇ ರೀತಿಯಲ್ಲಿ ಮೆಡಿಕಲ್ ಡಿಪಾರ್ಟ್‌ಮೆಂಟ್ ವಿಷಯವೂ ಆಗಿದೆ. ಇದರಲ್ಲಿ ಗೆಜೆಟೆಡ್ ಆಫೀಸರ್ ಒಬ್ಬರು ಮಾತ್ರ ಇದ್ದಾರೆ. ಷೆಡ್ಯೂಲ್ಡ್ ಕ್ಯಾಸ್ಟಿನಲ್ಲಿ ಇವರು ಯಾವ ರೀತಿ ರೆಪ್ರಸೆಂಟೇಷನ್ನಿಗೆ ಅವಕಾಶವನ್ನು ಕೊಟ್ಟಿದ್ದಾರೋ ಗೊತ್ತಿಲ್ಲ. ಹಿಂದೆ ಇದ್ದವರು ಅಸಿಸ್ಟೆಂಟ್ ಪ್ರೊಫೆಸರ್ ಆಗಿದ್ದವರು. ಇಂತಹ ಇಲಾಖೆಯಲ್ಲಿ ಒಬ್ಬರೇ ಗೆಜೆಟೆಡ್ ಆಫೀಸರ್ ಇದ್ದಾರೆ. ಇದರಿಂದಲೇ ಯಾವ ರೀತಿ ಹಿಂದುಳಿದ ಪಂಗಡಗಳಿಗೆ ಉತ್ತೇಜನ ಕೊಡುತ್ತಾರೆಂಬುದನ್ನು ನೋಡಬಹುದು. ಈ ಇಲಾಖೆಯಲ್ಲಿ ಇವತ್ತಿನವರೆಗೂ ಪಬ್ಲಿಕ್ ಸರ್ವೀಸ್ ಕಮಿಷನ್ನಿನಿಂದ ಆ ಹುದ್ದೆಗಳು ಅಡ್ವರ್ಟೈಸ್ ಆಗಲೇ ಇಲ್ಲ. ಆ ಕಡೆ ಸರ್ಕಾರ ಹೆಚ್ಚಿಗೆ ಗಮನ ಕೊಡಬೇಕು.

ಇನ್ನು ಹರಿಜನ-ಗಿರಿಜನರಿಗೆ ಮನೆ ಕಟ್ಟಿಕೊಳ್ಳುವುದಕ್ಕೆ ಜಾಗ ಕೊಡುವ ವಿಷಯ. ಈ ವಿಚಾರವಾಗಿ ನಾನು ಈ ಸಭೆಯಲ್ಲಿ ಹತ್ತಾರು ಸಾರಿ ಹೇಳಿದ್ದೇನೆ. ನನ್ನ ಜಿಲ್ಲೆಯ ಹಿರಿಯೂರು ತಾಲ್ಲೂಕಿನ ಒಂದು ಗ್ರಾಮದಲ್ಲಿ 1954 ನೇ ಇಸವಿಯಲ್ಲಿ ಒಂದು ಜಾಗವನ್ನು ಅಕ್ವೈರ್ ಮಾಡಿಕೊಂಡರು. ಸಂಬಂಧಪಟ್ಟ ಇಲಾಖೆಯ ಸ್ವಾಧೀನಕ್ಕೆ ಅದನ್ನು ತೆಗೆದುಕೊಂಡರು. ಅದನ್ನು ಈ ಪಂಗಡದವರಿಗೆ ಮನೆಗಳನ್ನು ಕಟ್ಟಿಸಿಕೊಡುವುದಕ್ಕಾಗಿಯೇ ತೆಗೆದುಕೊಂಡದ್ದು. ಕಾನೂನು ಪ್ರಕಾರ ಇವತ್ತಿನವರೆಗೂ ಯಾವ ರೈತರಿಂದ ಆ ಜಮೀನನ್ನು ಅಕ್ವೈರು ಮಾಡಿಕೊಂಡರೋ ಅವರು ಇನ್ನು ಆ ಜಾಗವನ್ನೇ ಬಿಟ್ಟಿಲ್ಲ. ಹರಿಜನರೇನಾದರೂ ಅಲ್ಲಿ ಮನೆ ಕಟ್ಟಿಕೊಂಡರೇ ಊರನ್ನೇ ಸುಟ್ಟು ಹಾಕುತ್ತೇವೆಂದು ಹೇಳುತ್ತಿದ್ದಾರೆ. ಈ ಸ್ಥಳವನ್ನು ಮೂರು ಜನ ಮಂತ್ರಿಗಳಿಗೂ ನೋಡಿಸಿದ್ದೇನೆ. ಶ್ರೀಮಾನ್ ರಾಚಯ್ಯನವರಿಗೂ ತೋರಿಸಿದ್ದೇನೆ. ಶ್ರೀಮಾನ್ ಪ್ರಭಾಕರ್ ಅವರು 3 ಸಾರಿ ಆ ಸ್ಥಳಕ್ಕೆ ಬಂದಿದ್ದರು. ಆದರೆ ಇವತ್ತಿನವರೆಗೂ ಯಾವ ಒಂದು ಕ್ರಮವನ್ನು ತೆಗೆದುಕೊಂಡಿಲ್ಲ. ಇವರಿಗೆ ಮನೆಕಟ್ಟಿಸುವುದಕ್ಕೆ ಜಾಗಕೊಡಿಸುವಬಗ್ಗೆ ಸಾಕಷ್ಟು ಶಕ್ಯವಿಲ್ಲದೆ ಹೋಗಿದೆ. ಅಂದ ಮೇಲೆ ಈ ಇಲಾಖೆಯಲ್ಲಿ ಅವ್ಯವಸ್ಥೆ ಬಹಳ ಜಾಸ್ತಿಯಾಗಿದೆ. ಅದರಿಂದ ಈ ಇಲಾಖೆ ಏಕೆಬೇಕು ! ಈ ಒಂದು ಇಲಾಖೆ ಎಫಿಷಿಯಂಟಾಗಿ ಉಪಯುಕ್ತವಾಗಿ ಏನು ಇದರ ಉದ್ದೇಶವಿದೆಯೋ ಅದನ್ನು ಸಾಧನೆ ಮಾಡಬೇಕಾಗಿದ್ದರೆ ಈ ಇಲಾಖೆಗೆ ಸಂಬಂಧಪಟ್ಟ ಮಂತ್ರಿಗಳು iron hand deal ಮಾಡುವಂಥ ಬೇರೊಬ್ಬ ಮಂತ್ರಿಬೇಕು ಎಂದು ನಾನು ಹೇಳಬಯಸುತ್ತೇನೆ. ಏಕೆಂದರೆ ಈಗಿರತಕ್ಕ ಸಂಬಂಧಪಟ್ಟ ಮಂತ್ರಿಣಿಯವರು ಬಹಳ ಕೋಮಲ ಹೃದಯವುಳ್ಳವರು. ಈ ವಿಚಾರವಾಗಿ ಸರ್ಕಾರದವರು ಕೂಡಲೇ ತಕ್ಕ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಅರಣ್ಯ ಇಲಾಖೆಯ ವಿಷಯದಲ್ಲಿ ಒಂದೆರಡು ಮಾತುಗಳನ್ನು ನಾನು ಹೇಳಬಯಸುತ್ತೇನೆ. ಅದೇನು ನನ್ನ ಅದೃಷ್ಟವೋ ಅಥವಾ ದುರಾದೃಷ್ಟವೋ ನನಗೆ ಗೊತ್ತಿಲ್ಲ. ಹಳೆಯ ಮೈಸೂರು ಮತ್ತು ಹೊಸ ಮೈಸೂರು ಎಂದು ಹೇಳುವ ಅವಶ್ಯಕತೆ ನನಗೆ ಕಂಡುಬರುತ್ತಿದೆ. ಮೈಸೂರು ಎರಡು ಭಾಗವಾಗಬೇಕು ಎನ್ನುವ ವಾದವನ್ನು ನಾನು ಇಟ್ಟುಕೊಂಡಿರುವವನಲ್ಲ. ಆದರೆ ಸರ್ಕಾರದವರು ಇಂಥಾ ಒಂದು ವಾದಕ್ಕೆ ಅವಕಾಶವನ್ನು ಕೊಡದಹಾಗೆ ಇರಬೇಕೆಂದು ನಾನು ಸರ್ಕಾರಕ್ಕೆ ಎಚ್ಚರಿಕೆಯನ್ನು ಕೊಡುತ್ತೇನೆ. ಇಂಟರ್ ಸ್ಟೇಟ್ ಸೀನಿಯಾರಿಟಿ ವಿಷಯದಲ್ಲಿ ಕೆಲವರಿಗೆ ಬಹಳ ಅನ್ಯಾಯ ವಾಗಿದೆ. 1959 ನೇ ಇಸವಿಯಲ್ಲಿ ಒಂದು ಸೀನಿಯಾರಿಟಿ ಲಿಸ್ಟನ್ನು ತಯಾರು ಮಾಡಿದ್ದರು. ಆಮೇಲೆ 1960 ನೇ ಇಸವಿಯಲ್ಲಿ ಶ್ರೀಮಾನ್ ದತ್ ಎಂಬ ಇಂಡಿಯಾ ಸರ್ಕಾರದ ಆಫೀಸರು ಒಬ್ಬರು ನಮ್ಮ ಮೈಸೂರು ಸ್ಟೇಟಿಗೆ ಬಂದು ಈ ಸೀನಿಯಾರಿಟಿ ಲಿಸ್ಟಿನ ವಿಷಯದಲ್ಲಿ ಕೆಲವು ಆಫೀಸರುಗಳಿಗೆ ಇದ್ದಂತಹ ಗ್ರಿವೆನ್ಸಸ್‌ಗಳನ್ನೆಲ್ಲಾ ಕೇಳಿ ಅದರ ಆಧಾರದ ಮೇಲೆ ಇನ್ನೊಂದು ಸೀನಿಯಾರಿಟಿ ಲಿಸ್ಟನ್ನು ತಯಾರು ಮಾಡಿ ಅದನ್ನು ಇಂಡಿಯಾ ಸರ್ಕಾರದವರ ಅಂಗೀಕಾರಕ್ಕಾಗಿ ಕಳುಹಿಸಿಕೊಟ್ಟರು. ಈ ಸೀನಿಯಾರಿಟಿ ಲಿಸ್ಟಿಗೆ ಇಡೀ ಮಂತ್ರಿಮಂಡಲದವರು ಏನು ಶಿಫಾರಸ್ಸನ್ನು ಮಾಡಿ ಕಳುಹಿಸಿಕೊಟ್ಟಿದ್ದರೋ ಅದು ಕೆಳಗೆ ಬಂದಿದೆ. ಕೆಲವು ಸ್ಥಾನಗಳು ಮೇಲೆ ಇದ್ದವು ಕೆಳಗೆ ಬಂದಿವೆ. 22 ವರ್ಷ ಸರ್ವೀಸ್ ಮಾಡಿರತಕ್ಕ ಒಬ್ಬ ಅಧಿಕಾರಿಗಳು 14 ವರ್ಷ ಸರ್ವೀಸ್ ಮಾಡಿರತಕ್ಕ ಅಧಿಕಾರಿಗಳ

ಕೆಳಗಡೆ ಬಂದಿದ್ದಾರೆ. ನಾಲ್ಕು ತಿಂಗಳು ಡಿ. ಎಫ್. ಓ. ಆಗಿದ್ದವರು 5 ವರ್ಷ ಸರ್ವೀಸ್ ಆಗಿರುವ ಡಿ. ಎಫ್. ಓ. ಅಧಿಕಾರಿಯ ಮೇಲೆ ಬಂದಿದ್ದಾರೆ. ಡೆಹರಾಡೂನಿಗೆ ಹೋಗಿ ವಿದ್ಯಾಭ್ಯಾಸ ಮಾಡಿ ಬಂದಿರತಕ್ಕ ಒಂದೇ ಕ್ವಾಲಿಫಿಕೇಷನ್ ಇರತಕ್ಕ ಡಿ. ಎಫ್. ಓ. ಗಳ ಹುದ್ದೆಗಳನ್ನು ಸಮೀಕರಣ ಮಾಡಬೇಕೆಂದು ಹೋಗಿ ಅವರ ಸ್ಥಾನಗಳನ್ನು ಮೇಲೆ ಕೆಳಗೆ ಮಾಡಿದ್ದಾರೆ. ಇದಕ್ಕಿಂತ ಬೇರೆ ಅನ್ಯಾಯ ಯಾವುದಾದರೂ ಇದೆಯೆ ! ಇಂಥ ಒಂದು ಪದ್ಧತಿಯನ್ನು ಮುಂದುವರಿಸಿಕೊಂಡು ಹೋದರೆ ಅಧಿಕಾರಿಗಳಿಂದ ಒಳ್ಳೆಯ ಕೆಲಸವನ್ನು ನಿರೀಕ್ಷಣೆ ಮಾಡಬಹುದೇ ಎಂದು ನಾನು ಕೇಳುತ್ತೇನೆ. ಇಂಡಿಯಾ ಸರ್ಕಾರದವರ ಒಂದು ಆರ್ಡರಿನಿಂದ ಸುಮಾರು 10—15 ಜನ ಫಾರೆಸ್ಟ್ ಡಿಪಾರ್ಟ್‌ಮೆಂಟಿನ ಆಫೀಸರುಗಳು ಮೇಲಿದ್ದವರು ಕೆಳಗೆ ಹೋಗಿ ಕೆಳಗೆ ಇದ್ದವರು ಮೇಲೆ ಹೋಗಿ ಕೆಲಸಮಾಡಬೇಕಾದಂತಹ ಒಂದು ಪರಿಸ್ಥಿತಿ ಉದ್ಭವವಾಗಿದೆ.

Mr. SPEAKER.—I am told that the matter is pending before the High Court.

ಶ್ರೀ ಬಿ. ಎಲ್. ಗೌಡ.—ಈ ಒಂದು ಸಮೀಕರಣದಲ್ಲಿ ಇಂಟರ್-ಸ್ಟೇಟ್ ಸೀನಿಯಾರಿಟಿ ಲಿಸ್ಟನ್ನು ತಯಾರುಮಾಡುವಾಗ ಹಳೆಯ ಮೈಸೂರಿನ ಅಧಿಕಾರಿಗಳಿಗೆ ದೊಡ್ಡ ಅನ್ಯಾಯ ಆಗಿದೆ. ಇದನ್ನೇ ಮುಂದುವರಿಸಿಕೊಂಡು ಹೋದರೆ ಬಹಳ ಅನ್ಯಾಯವಾಗುತ್ತದೆ. ಇದನ್ನು ರಿವೈಜ್ ಮಾಡತಕ್ಕ ಅಧಿಕಾರ ಸರ್ಕಾರಕ್ಕೆ ಇದೆಯೆಂದು ನಾನು ಕೇಳಿದ್ದೇನೆ. ನಮ್ಮ ಸರ್ಕಾರದವರು ಇಂಡಿಯಾ ಸರ್ಕಾರದವರೊಡನೆ ಸಮಾಲೋಚನೆಯನ್ನು ನಡೆಸಿ 1957 ನೇ ಇಸವಿಯಲ್ಲಿ ತಯಾರು ಮಾಡಿದಂತಹ ಸೀನಿಯಾರಿಟಿ ಲಿಸ್ಟ್ ಏನಿದೆಯೋ ಅದನ್ನು ಕೇಂದ್ರಸರ್ಕಾರದವರು ಒಪ್ಪುವಹಾಗೆ ಮಾಡಬೇಕು. ಮತ್ತು ಅದರಲ್ಲಿ ಆಗಿರತಕ್ಕ ಅನ್ಯಾಯವನ್ನು ಸರಿಪಡಿಸಬೇಕು ಎಂದು ನಾನು ಮಾನ್ಯ ಅಧ್ಯಕ್ಷರ ಮೂಲಕ ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ;

ಇನ್ನೊಂದು ವಿಷಯ. ನಮ್ಮ ಚಿತ್ರದುರ್ಗ ಜಿಲ್ಲೆಯಲ್ಲಿ ಬಹುಭಾಗ ಬರಗಾಲಕ್ಕೆ ತುತ್ತಾಗತಕ್ಕ ಪ್ರದೇಶವಿದೆ. ಅಲ್ಲಿ ಸಹಸ್ರಾರು ಎಕರೆ ಅಮೃತಮಹಲ್ ಕಾವಲು ಪ್ರದೇಶವಿದೆ. ಆ ಪ್ರದೇಶದಲ್ಲಿ ಅರಣ್ಯವನ್ನು ಬೆಳೆಸಬೇಕೆಂದು ಸರ್ಕಾರದವರು ಆ ಜಮೀನನ್ನು ತೆಗೆದುಕೊಂಡಿದ್ದಾರೆ. ಅದು ಬಹಳ ಒಳ್ಳೆಯದು. ಮಳೆಬಾರದೆ ಇರುವ ಪ್ರದೇಶದಲ್ಲಿ ಎಲ್ಲೆಲ್ಲಿ ಖಾಲಿ ಜಮೀನು ಇದೆಯೋ ಅಂಥಾ ಪ್ರದೇಶಗಳಲ್ಲಿ ಹೆಚ್ಚು ಹೆಚ್ಚು ಕಾಡನ್ನು ಬೆಳಸಿದರೆ ಮಳೆ ಬರುವುದಕ್ಕೆ ಅನುಕೂಲವಾಗುತ್ತದೆ. ಮತ್ತು ಅರಣ್ಯ ಸಂಪತ್ತನ್ನು ಅಭಿವೃದ್ಧಿ ಮಾಡುವುದು ಒಳ್ಳೆಯದು. ಈ ಅರಣ್ಯ ಸಂಪತ್ತನ್ನು ವಿಲೇವಾರಿ ಮಾಡುವ ವಿಷಯದಲ್ಲಿ ನಾನು ಒಂದು ವಿಷಯವನ್ನು ಹೇಳಬೇಕಾಗಿದೆ. ಚಿತ್ರದುರ್ಗ ಜಿಲ್ಲೆಯಲ್ಲಿ ಅರಣ್ಯಸಂಪತ್ತನ್ನು ಪ್ರತಿ ವರ್ಷ ಹರಾಜು ಮಾಡುತ್ತಾರೆ. ಒಂದು ವರ್ಷಕ್ಕೆ ಎರಡೂವರೆ ಲಕ್ಷರೂಪಾಯಿಗಳ ಹರಾಜು ಆಗತಕ್ಕಂಥಾದ್ದನ್ನು 40 ಸಾವಿರ ರೂಪಾಯಿಗಳಿಗೆ ಯಾರೋ ಒಬ್ಬರು ಕಂಟ್ರಾಕ್ಟರಿಗೆ ಹರಜು ಕೊಟ್ಟಿದ್ದಾರೆ. ಈ ಹರಾಜಿನ ಸಂಬಂಧದಲ್ಲಿ ಸರ್ಕಾರಕ್ಕೆ ಬರತಕ್ಕಂತಹ ಅರ್ಜಿಗಳೆಲ್ಲವನ್ನೂ ಕ್ಯಾನ್ಸಲ್ ಮಾಡಿ ಯಾರೋ ಒಬ್ಬರು ಕಂಟ್ರಾಕ್ಟರಿಗೆ ಆ ಹರಾಜನ್ನು ಖಾಯಮ್ ಮಾಡುವುದು ಈರೀತಿ ಮಾಡುತ್ತಿದ್ದಾರೆ. ಇದೇರೀತಿ ಬಹಳ ವರ್ಷಗಳಿಂದಲೂ ಮಾಡುತ್ತಿದ್ದಾರೆ. ಇದು ಸರಿಯಲ್ಲ.

ಶ್ರೀ ಬಿ. ರಾಚಯ್ಯ.—ರೀ-ಟೆಂಡರ್ ಕಾಲ್‌ಫಾರ್ ಮಾಡಿ ಅದರ ಪ್ರಕಾರ ಅದರ ಹರಾಜನ್ನು ಕನ್‌ಫರ್ಮ್ ಮಾಡಬೇಕೆಂದು ನಾವು ಹೇಳಿದ್ದೇವೆ.

ಶ್ರೀ ಬಿ. ಎಲ್. ಗೌಡ.—ಇಷ್ಟು ಹೇಳಿ ಮಾನ್ಯ ಸಚಿವರ ಅರಣ್ಯ ಸಂಪತ್ತಿನ ಹರಾಜಿನ ವಿಷಯದಲ್ಲಿ ಮತ್ತೆ ರೀ ಕನ್‌ಸಿಡರ್ ಮಾಡುತ್ತೇವೆಂದು ಭರವಸೆಯನ್ನು ಕೊಟ್ಟದ್ದಕ್ಕಾಗಿ ಅವರಿಗೆ ನನ್ನ ವಂದನೆಗಳು. ಮತ್ತು ಮಾನ್ಯ ಅಧ್ಯಕ್ಷರು ನನಗೆ ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

†ಶ್ರೀ ಜಿ ವಿ. ಗೌಡ (ಪಾಳ್ಯ).—ಮಾನ್ಯ ಸಭಾಪತಿಗಳೇ ನಾನು ಸಮಾಜಕಲ್ಯಾಣ ಇಲಾಖೆಯ ವಿಷಯದಲ್ಲಿ ಒಂದೆರಡು ವಿಷಯಗಳನ್ನು ಪ್ರಸ್ತಾಪಮಾಡುವುದಕ್ಕೆ ಇಚ್ಛೆಪಡುತ್ತೇನೆ. ತಮಗೆ ಗೊತ್ತಿರುವ ಹಾಗೆ ನಮ್ಮ ದೇಶದಲ್ಲಿ ಬಹಳ ಜನಗಳ ಆರ್ಥಿಕ ಸ್ಥಿತಿ ಬಹಳ ದುಸ್ಥಿತಿಯಲ್ಲಿದೆ. ಸಮಾಜ ಸುಧಾರಣೆಯಾಗದೆ ಅವರು ಆರ್ಥಿಕವಾಗಿ ಮುಂದೆ ಬರುವುದಕ್ಕೆ ಆಗುವುದಿಲ್ಲ. ಈ ಒಂದು ರಂಗದಲ್ಲಿ ಸಮಾಜಕಲ್ಯಾಣ ಇಲಾಖೆ ಹೆಚ್ಚಿಗೆ ಕೆಲಸಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಸಮಾಜಕಲ್ಯಾಣ ಇಲಾಖೆಯ ಮುಖಾಂತರ ಯೋಜನೆಗಳಲ್ಲಿ ಎಷ್ಟರಮಟ್ಟಿಗೆ ಸಮಾಜವನ್ನು ಸುಧಾರಣೆಮಾಡಬೇಕಾಗಿತ್ತೊ ಅಷ್ಟರಮಟ್ಟಿಗೆ ಸಮಾಜವನ್ನು ಸುಧಾರಣೆ ಮಾಡಿಲ್ಲ. ಈ ಪಂಚವಾರ್ಷಿಕ ಯೋಜನೆಗಳು ವಿಫಲವಾಗಿವೆ ಎಂದು ಹೇಳದೆ ವಿಧಿಯಿಲ್ಲ. ಯೋಜನೆಗಳಲ್ಲಿ ಸಮಾಜಕಲ್ಯಾಣ ಇಲಾಖೆಗೆ ಒದಗಿಸಿರತಕ್ಕ ಹಣ ಬಹಳ ಕಡಿಮೆ ಇದೆ. ಇವೊತ್ತಿನ ದಿವಸ 100ಕ್ಕೆ 75 ಭಾಗ ನಮ್ಮ ದೇಶದಲ್ಲಿ ಸಮಾಜಿಕ ಪರಿಸ್ಥಿತಿ ಚೆನ್ನಾಗಿಲ್ಲದೆ

(ಶ್ರೀ ಜಿ. ವಿ. ಗೌಡ)

ಇರುವಾಗ ಅವರ ಸುಧಾರಣೆಯಾಗಬೇಕಾದರೆ ಎಷ್ಟರಮಟ್ಟಿಗೆ ಅದಕ್ಕೆ ಪ್ರಾಶಸ್ತ್ಯವನ್ನು ಕೊಡಬೇಕು, ಎಷ್ಟೊಂದು ದುಡ್ಡನ್ನು ಅದಕ್ಕೆ ಒದಗಿಸಬೇಕು ಎಂಬುದನ್ನು ಸಮಾಜಕಲ್ಯಾಣ ಇಲಾಖೆಯವರು ಮತ್ತು ಸರ್ಕಾರದವರು ಯೋಚನೆ ಮಾಡಬೇಕು. ಇವೊತ್ತಿನ ದಿವಸ ನಮ್ಮ ಸಮಾಜದಲ್ಲಿ ಹರಿಜನರು, ಗಿರಿಜನರು ಮತ್ತು ತೀರಾ ಹಿಂದುಳಿದವರು ಬಹಳ ಜನ ಇದ್ದಾರೆ. ಇವರ ಸಾಮಾಜಿಕ ಪರಿಸ್ಥಿತಿಯನ್ನು ಸುಧಾರಿಸದೇ ಹೋದರೆ ಅವರು ಆರ್ಥಿಕವಾಗಿ ಮುಂದೆ ಬರುವುದಕ್ಕೆ ಆಗುವುದಿಲ್ಲ. ಆದ್ದರಿಂದ ಸರ್ಕಾರದವರು ಈ ಕಡೆ ಸ್ವಲ್ಪ ಗಮನಿಸಬೇಕು. ಇವೊತ್ತಿನ ದಿವಸ ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಮೂರು ವರ್ಷಗಳು ಈಗಾಗಲೇ ಕಳೆದು ಹೋಗಿವೆ. ಆದರೆ ಈ ಸಮಾಜ ಕಲ್ಯಾಣ ಇಲಾಖೆಯು ಮುಖಾಂತರ ಈ ಯೋಜನೆಯಲ್ಲಿ ಎಷ್ಟರಮಟ್ಟಿಗೆ ಸಮಾಜ ಸುಧಾರಣೆಯಾಗಿದೆ, ಎಷ್ಟರಮಟ್ಟಿಗೆ ಸಾಮಾಜಿಕವಾಗಿ ಹಿಂದುಳಿದವರು ಸರ್ಕಾರದವರು ಕೊಡತಕ್ಕಂಥ ಒಂದು ಪ್ರಯೋಜನವನ್ನು ಹೊಂದಿದ್ದಾರೆ ಎಂದು ಹೇಳುವುದು ಸಲ್ಪ ಅನುಮಾನಾಸ್ಪದವಾದ ವಿಷಯ. ಈ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿಗೆ ಷೆಡ್ಯೂಲ್ಡ್ ಕ್ಯಾಸ್ಟಿನವರ ಮತ್ತು ಷೆಡ್ಯೂಲ್ಡ್ ಟ್ರೈಬಿನವರ ವೆಲ್‌ಫೇರ್‌ಗೋಸ್ಕರವಾಗಿ 142 ಲಕ್ಷ 21 ಸಾವಿರ ರೂಪಾಯಿಗಳನ್ನು ಕೇಳಿದ್ದಾರೆ. ಈ ದುಡ್ಡಿನಲ್ಲಿ ಎಷ್ಟೊಂದು ಅಗಾಧವಾದ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಿದೆ ಎಂಬುದನ್ನು ಈ ಇಲಾಖೆಗೆ ಸಂಬಂಧಪಟ್ಟ ಮಂತ್ರಿಗಳು ಸ್ವಲ್ಪ ಯೋಚನೆ ಮಾಡಬೇಕು. ಹರಿಜನರಿಗೆ ಮತ್ತು ಗಿರಿಜನರಿಗೆ ಹೆಚ್ಚಿಗೆ ಬೇರೆ ಏನೂ ಸಹಾಯವನ್ನು ಮಾಡುವುದಕ್ಕೆ ಸಾಧ್ಯವಿಲ್ಲದಿದ್ದರೂ ಕೂಡ ವಿಧ್ಯಾಭ್ಯಾಸದ ಸೌಕರ್ಯವನ್ನು ಕೊಡಬೇಕು ಮತ್ತು ಹಿಂದುಳಿದ ಜನ ಬೇರೆ ಯಾರು ಇದ್ದಾರೆಯೋ ಅವರಿಗೂ ಸಹ ಶಿಕ್ಷಣಕ್ಕೆ ಅನುಕೂಲವನ್ನು ಮಾಡಿಕೊಡಬೇಕಾಗಿದೆ. ಈ ಕೆಲಸಗಳನ್ನೆಲ್ಲಾ ಮಾಡಬೇಕಾದರೆ ಎಷ್ಟು ದುಡ್ಡು ಬೇಕಾಗುತ್ತದೆಂಬುದನ್ನು ಯೋಚನೆ ಮಾಡಬೇಕಾಗುತ್ತದೆ. ಸಮಾಜದಲ್ಲಿ ಹಿಂದುಳಿದ ಜನಗಳ ಮಕ್ಕಳ ವಿದ್ಯಾಭ್ಯಾಸ, ಸ್ತ್ರೀಯರ ಅಭಿವೃದ್ಧಿಯ ಕೆಲಸ ಇವುಗಳು ಆಗದೆ ಸಮಾಜದ ಪರಿಸ್ಥಿತಿಯನ್ನು ಸುಧಾರಣೆಮಾಡುತ್ತೇವೆಂದರೆ ಅದರಲ್ಲಿ ಅರ್ಥವಿಲ್ಲ ಎಂದು ನಾನು ಹೇಳಬೇಕಾಗಿದೆ. ಎಲ್ಲೆಲ್ಲಿ ಹರಿಜನರ ಸಂಖ್ಯೆ ಹೆಚ್ಚಾಗಿದೆಯೋ ಅಂಥಾಕಡೆ ಸ್ತ್ರೀಯರ ಮತ್ತು ಮಕ್ಕಳ ಅಭಿವೃದ್ಧಿಕೇಂದ್ರಗಳನ್ನು ಸ್ಥಾಪನೆ ಮಾಡಿ ಅವರ ಮಾನಸಿಕ ಪರಿವರ್ತನೆಯಾಗುವ ಹಾಗೆ ಮಾಡಬೇಕು. ಮತ್ತು ಅವರಿಗೆ ಜ್ಞಾನಾರ್ಜನೆಯಾಗುವಂತಹ ಶಿಕ್ಷಣವನ್ನು ಕೊಡುವುದಾದರೆ ಅವರ ಮಾನಸಿಕ ಪರಿವರ್ತನೆಯಾಗಿ ಎಷ್ಟೋ ಸಮಾಜಸುಧಾರಣೆಯಾಗುತ್ತದೆ. ಮೂರನೆಯ ಪಂಚವಾರ್ಷಿಕ ಯೋಜನೆಯ ಮೂರನೆಯ ವರ್ಷದಲ್ಲಿ ಸಮಾಜಕಲ್ಯಾಣ ಇಲಾಖೆಯ ಮುಖಾಂತರ ಮಕ್ಕಳ ಮತ್ತು ಸ್ತ್ರೀಯರ ಅಭಿವೃದ್ಧಿಕೇಂದ್ರಗಳನ್ನು ಸ್ಥಾಪನೆ ಮಾಡುವುದಕ್ಕೋಸ್ಕರ ಒಂದು ಕೋಟಿ ರೂಪಾಯಿಗಳನ್ನು ಒದಗಿಸಲಿಕ್ಕೆ ಸರ್ಕಾರದವರಿಗೆ ಸಾಧ್ಯವಾಗಿಲ್ಲ ಎಂದಮೇಲೆ ಯಾವ ರೀತಿ ಸಮಾಜ ಪರಿಸ್ಥಿತಿಯನ್ನು ಸುಧಾರಿಸುತ್ತಾರೆ ಎಂದು ನಾನು ಕೇಳಬೇಕಾಗಿದೆ. ಈಗಿನ ಮಂತ್ರಿಗಳು ಅಧಿಕಾರಕ್ಕೆ ಬಂದ ಮೇಲೆ ಒಂದು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಅದೇನೆಂದರೆ ಹರಿಜನರ ವಿದ್ಯಾರ್ಥಿ ನಿಲಯಗಳಿಗೆ ಒಬ್ಬ ವಿದ್ಯಾರ್ಥಿಗೆ 15 ರೂಪಾಯಿಗಳ ಗ್ರಾಂಟ್ ಕೊಡುತ್ತಿದ್ದುದನ್ನು 18 ರೂಪಾಯಿ ಮಾಡಿದ್ದಾರೆ. ಅದು ಒಂದು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಈ ರೀತಿ ಮಾಡಿರತಕ್ಕಂಥ ಕಾನೂನು ಎಲ್ಲ ವಿದ್ಯಾರ್ಥಿ ನಿಲಯಗಳಿಗೂ ಅನ್ವಯಿಸುತ್ತದಯೇ ಹೇಗೆ ಎಂಬುದನ್ನು ನಾವು ಸ್ವಲ್ಪ ವಿಚಾರಮಾಡಬೇಕಾಗಿದೆ. ಸರ್ಕಾರದ ಹಣ ಹರಿಜನರ ಮಕ್ಕಳಿಗೆ ಖರ್ಚಾಗುತ್ತಿದೆಯೇ ಎಂಬುದನ್ನು ವಿಚಾರಮಾಡತಕ್ಕ ಯಂತ್ರ ಸರಿಯಾಗಿಲ್ಲ ಎಂದು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ.

5-30 P.M.

ಹರಿಜನರ ವಿದ್ಯಾರ್ಥಿ ನಿಲಯಗಳಿಗೆ ಸರ್ಕಾರ ಗ್ರಾಂಟ್ ಕೊಡುತ್ತಿದೆ. ಅದನ್ನು ತನಿಖೆ ಮಾಡತಕ್ಕ ಯಂತ್ರ, ಲೆಕ್ಕಗಳನ್ನು ಆಡಿಟ್ ಮಾಡತಕ್ಕ ಯಂತ್ರ ನಮ್ಮ ಸರ್ಕಾರದಲ್ಲಾಗಬೇಕು. ಸ್ಟೇಟ್ ಅಕೌಂಟ್ಸ್ ಇಲಾಖೆಯಿಂದ ಆಡಿಟ್ ಆಗದೆ ಅವರು ಬರೆಯುತಕ್ಕ ಲೆಕ್ಕ ಸರಿಯಾಗಿದೆ ಎಂದು ಒಪ್ಪುವುದಾದರೆ ಎಷ್ಟರಮಟ್ಟಿಗೆ ಕಾರ್ಯವಾಗುತ್ತದೆ? 25 ರೂಪಾಯಿ ಫೀ ಕೊಟ್ಟರೆ ಯಾವುದಾದರೂ ಲೆಕ್ಕವನ್ನು ಆಡಿಟ್ ಮಾಡಿ ತರುವುದಕ್ಕೆ ಸಾಧ್ಯವಿದೆ. ಅದನ್ನು ತಂದು ಡೈರೆಕ್ಟರ ಮುಂದೆ ಇಟ್ಟರೆ ಮಂಜೂರು ಮಾಡುತ್ತಾರೆ, ಗ್ರಾಂಟ್ ಸಿಕ್ಕುತ್ತದೆ. ಕೆಲವು ವಿದ್ಯಾರ್ಥಿನಿಲಯಗಳು ಚೆನ್ನಾಗಿ ನಡೆಯುತ್ತಿವೆ. ಆದರೆ ಕೊಡತಕ್ಕ ಪ್ರತಿಯೊಂದು ಕಾಸೂ ಹರಿಜನರ ಮಕ್ಕಳಿಗೇ ಖರ್ಚಾಗಬೇಕೆನ್ನುವ ದೃಷ್ಟಿಯಿಂದ ಮೇಲ್ವಿಚಾರಣೆ ಆಗುವುದು ಅಗತ್ಯ. ಆದುದರಿಂದ State Accounts Department ವಿದ್ಯಾರ್ಥಿ ನಿಲಯಗಳ ಲೆಕ್ಕವನ್ನು ಆಡಿಟ್ ಮಾಡುವ ವ್ಯವಸ್ಥೆಯನ್ನು 1964-65 ರಿಂದಲಾದರೂ ಮಾಡಬೇಕೆಂದು ಒತ್ತಾಯಪೂರ್ವಕವಾಗಿ ಹೇಳುತ್ತೇನೆ.

ಅನೇಕ ಹಿಂದುಳಿದ ಜನ ಲಂಬಾಣಿಗರು, ಕೊರಚರು, ಕೊರಮರು, ಬೋವಿಗಳು ಇವರು ಐದು ವಿಧವಾಗಿದ್ದಾರೆ. ಲಂಬಾಣಿಯವರನ್ನು ಮದ್ರಾಸ್ ಪ್ರಾಂತ್ಯದಲ್ಲಿ ಹಿಂದುಳಿದ ವರ್ಗಕ್ಕೆ ಸೇರಿಸಿದ್ದಾರೆ. ಹಳೆಯ ಮೈಸೂರಿನಲ್ಲಿ ಹರಿಜನರ ಗುಂಪಿನಲ್ಲಿ ಸೇರಿಸಿದ್ದಾರೆ. ಇವರ ಸಮನ್ವಯ ಅತಿ ಬೇಗ ಆಗಬೇಕು. ಅವರ ಸ್ಥಿತಿ ಬಹಳ ಚಿಂತಾಜನಕವಾಗಿದೆ. ಒಂದು ಕಡೆ ಒಂದು ಕೋಮಿನ ಜನಗಳಿಗೆ ಏನೊಂದು ಪ್ರಯೋಜನ ಸಿಕ್ಕುತ್ತದೆಯೋ ಇನ್ನೊಂದು ಭಾಗದಲ್ಲಿಯೂ ಅದೇ ಪ್ರಯೋಜನ ಸಿಕ್ಕುವುದಿಲ್ಲ ಎಂದು ಹೇಳುವುದಾದರೆ ಅದು ರಾಜ್ಯಾಂಗದ ವಿಧಿ ಪ್ರಕಾರ discrimination ಆಗುತ್ತದೆ. ಲಂಬಾಣಿಗಳಿಗೆ ಹಳೇ ಮೈಸೂರು ಭಾಗದಲ್ಲಿ ಏನೊಂದು ಅನುಕೂಲ ಸಿಕ್ಕಿದೆಯೋ ಎಲ್ಲ ಭಾಗದಲ್ಲಿಯೂ ಅದೇ ರೀತಿ ಸಿಕ್ಕುವ ವ್ಯವಸ್ಥೆ ಬೇಗ ಆಗಬೇಕಾಗಿದೆ. ಅದನ್ನು ಮಾಡ ಬೇಕೆಂದು ನಾನು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳನ್ನು ಬೇಡುತ್ತಿದ್ದೇನೆ.

ಹರಿಜನರ ಮತ್ತು ಗಿರಿಜನರ ಮತ್ತು ಹಿಂದುಳಿದವರ ಕ್ಷೇಮಾಭಿವೃದ್ಧಿ ಕೆಲಸಗಳಿಗೆ ಕೊಡತಕ್ಕ ಹಣ ವರ್ಷದ ಆದಿಯಲ್ಲಿ ಸಂಬಂಧಪಟ್ಟ ತಾಲ್ಲೂಕು ಬೋರ್ಡ್‌ಗಳಿಗೆ ಹೋಗತಕ್ಕ ವ್ಯವಸ್ಥೆಯಾಗ ಬೇಕು. ಡಿಸೆಂಬರ್, ಜನವರಿ, ಫೆಬ್ರುವರಿ ತಿಂಗಳಿನಲ್ಲಿ ಈ ಹಣವನ್ನು ಕೊಡುವ ಪರಿಪಾಠವನ್ನು ಇಟ್ಟುಕೊಂಡಿದ್ದಾರೆ. ಇದು ತಪ್ಪಬೇಕು. ತಾಲ್ಲೂಕು ಬೋರ್ಡ್ ತನ್ನ ಬಡ್ಜೆಟ್ಟನ್ನು ತಯಾರು ಮಾಡುವಾಗ ಅದರಲ್ಲಿ ಕೂಡ ಸಾಕಷ್ಟು ಪ್ರಮಾಣದಲ್ಲಿ ಹರಿಜನ, ಗಿರಿಜನರ ಮತ್ತು ಹಿಂದುಳಿದ ಜನರ ಸೌಕರ್ಯಕ್ಕೆ ಸಾಕಷ್ಟು ಹಣವನ್ನು ಒದಗಿಸತಕ್ಕ ವ್ಯವಸ್ಥೆಯಾಗಬೇಕು. ಅದಕ್ಕೆ ತಕ್ಕಂತೆ ಸಲಹೆ ಯನ್ನು ಸರ್ಕಾರದವರು ಕೊಟ್ಟು ಬೇಕಾದ ಹಣವನ್ನು ಕೊಡುವ ಕೆಲಸವನ್ನೂ ಮಾಡಬೇಕು.

ಹರಿಜನರ ಮನೆಗಳನ್ನು ಕಟ್ಟುವ ವಿಷಯ ಬೃಹದಾಕಾರವಾಗಿರುವ ಸಮಸ್ಯೆ. ಇದನ್ನು ಪರಿಹರಿಸುತ್ತೇವೆ ಎಂದು ಏನೇನೋ ಯೋಚನೆ ಮಾಡುತ್ತಿದ್ದಾರೆ. ಈವಾಗ ಸಾಲದ ರೂಪದಲ್ಲಿ ಹಣ ಕೊಡುವಂತೆ ಮಾಡಿದ್ದಾರೆ. ಅದು ಕಾರ್ಯತಃ ಆಗಬೇಕು. ಬರೀ ಮಾತಿನಲ್ಲಿ ಹೇಳುವುದು ಪ್ರಯೋಜನವಿಲ್ಲ.

ಹರಿಜನ ಗಿರಿಜನರ ಕ್ಷೇಮಾಭಿವೃದ್ಧಿಗೆ ನಡೆಯುತಕ್ಕ ವೆಚ್ಚವೆಲ್ಲ ಸಮಾಜ ಕಲ್ಯಾಣ ಇಲಾಖೆಯ ಮೂಲಕವೇ ಆಗಬೇಕು. ಹರಿಜನರಿಗಾಗಿ ನಾನಾ ಇಲಾಖೆಗಳಿಂದ ಬರತಕ್ಕ ಸಹಾಯ ಸೋಷಿ ಯಲ್ ವೆಲ್‌ಫೇರ್ ಇಲಾಖೆಗೆ ಬಂದು ಅದರ ಮುಖಾಂತರ ಪ್ರತಿ ಜಿಲ್ಲೆಗೂ ದಾಮಾಷಾ ಪ್ರಕಾರ ಹಂಚಿಕೆಯಾಗಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಈಗ ಯಾವ ಸದಸ್ಯರಿಗೆ ಹೆಚ್ಚು ಪ್ರಭಾವ ವಿದೆಯೋ ಆ ಕಡೆಗೆ ಹೆಚ್ಚು ಹಣ ಹೋಗಿ ಇತರ ಕಡೆಗೆ ಸರಿಯಾದ ರೀತಿಯಲ್ಲಿ ಹಂಚಿಕೆಯಾಗುತ್ತಿಲ್ಲ. ಈ ದೃಷ್ಟಿಯಿಂದ ಮನೆಗಳು ಎಲ್ಲೆಲ್ಲಿ ಆವಶ್ಯಕವಾಗಿರಬೇಕಾಗಿತ್ತೋ ಅಂಥ ಕಡೆ ಅಸ್ತಿತ್ವಕ್ಕೆ ಬರಲು ಅವಕಾಶವಾಗುತ್ತಿಲ್ಲ. ಈ ದೃಷ್ಟಿಯಿಂದ ಜಿಲ್ಲಾವಾರು, ದಾಮಾಷಾ ಪ್ರಕಾರ ಹಂಚಿಕೆಯಾಗತಕ್ಕ ವ್ಯವಸ್ಥೆಯನ್ನು ಮಾಡಬೇಕೆಂದು ತಿಳಿಸುತ್ತಿದ್ದೇನೆ.

ಆಶ್ರಮ ಶಾಲೆಗಳು ಹೆಚ್ಚಿಗೆ ಆಗಬೇಕು. ಸಣ್ಣಮಕ್ಕಳನ್ನು ವಿದ್ಯಾಭ್ಯಾಸದ ಕಡೆಗೆ ಎಳೆಯು ವಂಥಾ ಸನ್ನಿವೇಶವನ್ನುಂಟುಮಾಡುವುದಾದರೆ, ಪ್ರಾಥಮಿಕ ಶಾಲೆ, ಹೈಸ್ಕೂಲು ಇವುಗಳಿಗೆ ಹೋಗ ತಕ್ಕ ಅಭಿರುಚಿ ಹುಟ್ಟುತ್ತದೆ. ಈ ದೃಷ್ಟಿಯಿಂದ ಆಶ್ರಮ ಸ್ಕೂಲುಗಳನ್ನು ಹೆಚ್ಚು ಮಾಡಲು ಗಮನ ಕೊಡಬೇಕೆಂದು ತಿಳಿಸುತ್ತಿದ್ದೇನೆ.

ನಮ್ಮ ರಾಜ್ಯದಲ್ಲಿ ತೀರ ಹಿಂದುಳಿದ ಜನ ಬಹಳ ಇದ್ದಾರೆ. ಅಂಥವರು ಕೆಲವು ಕಡೆ ಗಿರಿಜನರ ಪರಿಸ್ಥಿತಿಗಿಂತಲೂ ಕೆಟ್ಟಿರತಕ್ಕ ಪರಿಸ್ಥಿತಿಯಲ್ಲಿದ್ದಾರೆ. ಅವರಿಗೆ ಆರ್ಥಿಕವಾಗಿ ಸಹಾಯ ಮಾಡುವು ದಕ್ಕೆ ಆಗುವುದಿಲ್ಲ. ಕೊನೆಯ ಪಕ್ಷ ಶಿಕ್ಷಣದಲ್ಲಿ ಏನು ಸೌಕರ್ಯ ಕೊಡಬೇಕೋ ಅದನ್ನೆಲ್ಲ ಕೊಟ್ಟು, ವಿದ್ಯಾರ್ಥಿವೇತನ ಕೊಟ್ಟು, ಬೇರೆ ಕಡೆ ಬಂದು ಪಾಠಶಾಲೆಗಳಲ್ಲಿ ಓದುವವರಿಗೆ ಬೋರ್ಡಿಂಗ್ ಗ್ರಾಂಟ್ ತೀರ ಹಿಂದುಳಿದ ಜನಗಳಿಗೆ ಕೊಡತಕ್ಕ ವ್ಯವಸ್ಥೆಯನ್ನು ಮಾಡುವುದರ ಮೂಲಕ ಅತಿ ಹಿಂದುಳಿದ ಜನ ವಿದ್ಯಾವಂತರಾಗುತ್ತಾರೆ. ಈ ಒಂದು ಕೆಲಸವನ್ನು ಮಾಡಬೇಕೆಂದು ಈ ಸಂದರ್ಭ ದಲ್ಲಿ ತಿಳಿಸುತ್ತಿದ್ದೇನೆ.

ಜಿಲ್ಲಾ ಮಟ್ಟದಲ್ಲಿ District Welfare Officers ಇದ್ದಾರೆ. ಅವರು ಜಿಲ್ಲೆಯಲ್ಲಿ ಸಂಚಾರ ಮಾಡಿ ಹರಿಜನರಿಗೆ ಎಷ್ಟು ಕುಡಿಯುವ ನೀರಿನ ಬಾವಿಗಳನ್ನು ಕೊಟ್ಟಿದೆ. ಎಷ್ಟು ಜನರಿಗೆ ಮನೆ ಗಳನ್ನು ಕಟ್ಟಿಕೊಳ್ಳಲು ಸಹಾಯ ಮಾಡಿದೆ, ಎಷ್ಟು ಜನರಿಗೆ boarding grant ಕೊಟ್ಟಿದೆ, ಏನೇನು ಸೌಕರ್ಯಗಳನ್ನು ಒದಗಿಸಬೇಕು ಎಂದು ನೋಡಬೇಕು. ಒಂದೊಂದು ಜಿಲ್ಲೆಯಲ್ಲಿಯೂ 9-10 ತಾಲ್ಲೂಕುಗಳಿವೆ. ಅವರಿಗೆ ಜೀಪ್ ಕೊಟ್ಟಿರುತ್ತಾರೆ. ಆದರೂ ಅವರು ಈ ಕೆಲಸಗಳನ್ನು ಮಾಡುತ್ತಿಲ್ಲ. ಅವರು ತಮ್ಮ ಕೆಲಸದಲ್ಲಿ ಹೆಚ್ಚಿನ ಆಸಕ್ತಿಯನ್ನು ತೋರಿಸುವುದು ಆವಶ್ಯಕವಾಗಿದೆ. ಯಾವಾಗಲೋ ಒಂದು ಸಾರಿ ಹೋಗಿ ಹಾಸ್ಟಲ್ ಮಂತಾದುವನ್ನು ನೋಡಿ ಒಂದು ರುಜು ಹಾಕಿ ಬರುವುದರಿಂದ ಪ್ರಯೋಜನವಿಲ್ಲ. ಸರ್ಕಾರದಿಂದ ತೆಗೆದುಕೊಳ್ಳತಕ್ಕ ಸಂಬಳಕ್ಕೆ ಆತ್ಮವಂಚನೆ ಮಾಡಿದ ಹಾಗಾಗುತ್ತದೆ. ಈ ಬಗ್ಗೆ ಸರ್ಕಾರ ಗಮನ ಕೊಡಬೇಕೆಂದು ತಿಳಿಸುತ್ತಿದ್ದೇನೆ.

(ಶ್ರೀ ಜಿ. ವಿ. ಗೌಡ)

ನಾನು ಹೇಳಿದ ಕೆಲವು ವಿಷಯಗಳಿಗೆ ಮಾನ್ಯ ಮಂತ್ರಿಗಳು ಗಮನ ಕೊಟ್ಟು ಸಾಕಾದಷ್ಟು ದುಡ್ಡನ್ನು ಒದಗಿಸುವ ವ್ಯವಸ್ಥೆ ಮಾಡಬೇಕು. ಇದರಿಂದ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಹಾಯವಾಗುತ್ತದೆ. ಈಗ ಕೇಳಿರುವ 147 ಲಕ್ಷ ರೂಪಾಯಿಗಳು ಯಾವುದಕ್ಕೂ ಸಾಲುವುದಿಲ್ಲ. ಅದರಲ್ಲಿಯೂ ಹಿಂದುಳಿದ ವರ್ಗಗಳಿಗೆ ಏನೂ ಕೊಡಲಿಕ್ಕೆ ಆಗುವುದಿಲ್ಲ. ಹೆಚ್ಚಿನ ದುಡ್ಡನ್ನು ಪಡೆದು ಈ ವರ್ಗಗಳವರಿಗೆ ಇನ್ನೂ ಹೆಚ್ಚು ಸಹಾಯ ಮಾಡಬೇಕೆಂದು ಪ್ರಾರ್ಥನೆ ಮಾಡುತ್ತಿದ್ದೇನೆ.

ಅರಣ್ಯಗಳ ವಿಚಾರವಾಗಿ ಹೇಳಬೇಕೆಂದರೆ ಈಚೆಗೆ ಒಂದೆರಡು ವರ್ಷಗಳಿಂದ ನಿರೀಕ್ಷಿತ ಮಟ್ಟಕ್ಕೆ ಇಲ್ಲದಿದ್ದರೂ ಸುಮಾರು ಮಟ್ಟಿಗೆ ಕಾಡಿನ ಅಭಿವೃದ್ಧಿಯಾಗುತ್ತಿದೆ. ಮೂರನೆಯ ಯೋಜನೆಯಲ್ಲಿ ಹೆಚ್ಚು ಪ್ರಗತಿಯಾಗುತ್ತದೆ, ಹೆಚ್ಚು ಆದಾಯ ಬರುತ್ತದೆಂದು ನಾನಾದರೂ ಅಂದುಕೊಂಡಿದ್ದೆ. 1962-63ನೆ ಸಾಲಿಗಿಂತ 1964-65ರಲ್ಲಿ 39, 30,000 ರೂಪಾಯಿಗಳ ಹೆಚ್ಚು ಆದಾಯವನ್ನೂ ನಿರೀಕ್ಷೆ ಮಾಡಿ ತೋರಿಸಿದ್ದಾರೆ. ಹಾಗೆಯೇ ಖರ್ಚೂ ಕೂಡ 103 ಲಕ್ಷ ರೂಪಾಯಿ ಹೆಚ್ಚಾಗುತ್ತದೆಂದು ತೋರಿಸಿದ್ದಾರೆ. ಹೆಚ್ಚಿನ ಖರ್ಚು ಮಾಡುವುದು ಇನ್ನೂ ಹೆಚ್ಚಿನ ಪ್ರತಿಫಲ ಸಿಕ್ಕಬೇಕು ಎಂದು ತಿಳಿಯಬಹುದಾದರೆ, ಸಮರ್ಪಕವಾಗಿ ಖರ್ಚು ಮಾಡಿದರೆ ಅದರಲ್ಲಿ ಎರಡು ಅಭಿಪ್ರಾಯವಿರಲಾರದು. ಸಿಬ್ಬಂದಿಗಾಗಿ 1962-63ರಲ್ಲಿ 61,97,000 ರೂಪಾಯಿ ಖರ್ಚು ಮಾಡಿದ್ದಾರೆ. 1964-65ರಲ್ಲಿ 68,57,000 ರೂಪಾಯಿ ಬೇಕಾಗುತ್ತದೆಂದು ಕೊಟ್ಟಿದ್ದಾರೆ. ಶೇಕಡ 10 ಹೆಚ್ಚಿನ ಖರ್ಚಾಗುತ್ತದೆನ್ನುವ ವಿಷಯ ಇಲ್ಲಿ ಬರುತ್ತದೆ. ಒಟ್ಟಿನಲ್ಲಿ ನಮಗೆ ಏನು ಆದಾಯ ಬರುತ್ತದೆ ಆ ಆದಾಯದ ಶೇಕಡ 7.4ರಷ್ಟು ಇಲಾಖೆಯ ಸಿಬ್ಬಂದಿಗಾಗಿ ಖರ್ಚಾಗುತ್ತಿದೆ. ಇಷ್ಟು ಖರ್ಚಾಗುವುದು ಜಾಸ್ತಿ ಎಂದು ಹೇಳುವುದಕ್ಕೆ ಸಾಧ್ಯವಿಲ್ಲದೇ ಇದ್ದರೂ ಕೂಡ ಖರ್ಚನ್ನೂ ಕಡಮೆ ಮಾಡತಕ್ಕ ಅವಕಾಶವಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಇಲಾಖೆಯಲ್ಲಿ ಹೆಚ್ಚಾಗಿ ಆದಾಯವನ್ನು ಪಡೆಯುವುದಕ್ಕೆ ಅವಕಾಶವಿದೆ. ಎಲ್ಲಿ afforestation ಆಗಬೇಕು ಎನ್ನುವುದಕ್ಕೆ ಸರ್ವೆ ನಡೆಯಬೇಕಾದ್ದು ಅವಶ್ಯಕವೆಂದು ನಾನು ತಿಳಿದುಕೊಂಡಿದ್ದೇನೆ. ಎಲ್ಲಿ ಹೆಚ್ಚು ಮಳೆ ಬರುತ್ತಿದೆ ಎಲ್ಲಿ afforestation ಮಾಡಿ ಬೇಕಾದಂಥ ಗಿಡಗಳನ್ನು ನೆಡುವುದರಿಂದ ಪ್ರತಿಫಲ ಸಿಕ್ಕುತ್ತದೆಂದು ಇಲಾಖೆಯವರು ಮತ್ತು technical people ಅಭಿಪ್ರಾಯ ಕೊಡುತ್ತಾರೆಯೋ ಆ ಕಡೆ ವಿಸ್ತರಿಸಿ ಹೆಚ್ಚಿನ ಪ್ರತಿಫಲವನ್ನು ಪಡೆಯುವ ಕೆಲಸ ಮಾಡಬೇಕು. ಕೆಲವು ಕಡೆ ಅರಣ್ಯ ಎಂದು ಹೇಳಿಸಿಕೊಳ್ಳದೆ ಇರುವ ಕಾಡುಗಳಿವೆ. ಅದರಿಂದ ಸರ್ಕಾರಕ್ಕೂ, ಸಾರ್ವಜನಿಕರಿಗೂ ಪ್ರಯೋಜನವಿಲ್ಲ. ಅದರಿಂದ ಸರಿಯಾದ ರೀತಿಯಲ್ಲಿ, ಪ್ರಯೋಜನ ಪಡೆಯತಕ್ಕ ವ್ಯವಸ್ಥೆಯನ್ನು ಸರ್ಕಾರ ಯೋಚನೆ ಮಾಡಬೇಕು ಅಲ್ಲದೆ ಅದರಲ್ಲಿ ಅಫಾರೆಸ್ಟೇಷನ್ ಮಾಡಬೇಕು; ಹೆಚ್ಚು ಅರಣ್ಯ ಸಂಪತ್ತನ್ನು ಬೆಳೆದು ಆದಾಯ ಹೆಚ್ಚುವಂತೆ ಮಾಡಬೇಕು. ಇಲ್ಲದಿದ್ದರೆ ವ್ಯವಸಾಯಕ್ಕೆ ಪರಿವರ್ತನೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು ರೈತರಿಗೆ ಆ ಜಮೀನನ್ನು ಕೊಡುವುದರ ಮೂಲಕ ವ್ಯವಸಾಯಕ್ಕೆ ತರುವ ವ್ಯವಸ್ಥೆ ಮಾಡಬೇಕು. ಹೀಗೆ ಯಾವುದೂ ಮಾಡದೆ ಬರಿಯ ಬಂಜರು ಕಾಡುಗಳು, ಬರಿಯ ಕುರುಚಲು ಗಿಡಗಳು ಬೆಳೆಯುವ ಕಾಡುಗಳು ಹಾಗೆಯೇ ಇವೆ. ಇದರಿಂದ ಸರಕಾರಕ್ಕೆ ಏನೂ ಪ್ರಯೋಜನವಿಲ್ಲ. ಅಧಿಕಾರಿಗಳನ್ನು ನೇಮಕ ಮಾಡಿದರೆ, ಇಂತಹ ಕಾಡುಗಳು ಎಷ್ಟಿವೆ, ಇವುಗಳನ್ನು ಯಾವ ರೀತಿ ಉಪಯೋಗ ಮಾಡಬಹುದು ಎಂಬುದನ್ನು ಅವರಿಂದ ತಿಳಿಯುವುದು ಒಳ್ಳೆಯದು.

ಮಾನ್ಯ ಮಂತ್ರಿಗಳು ರೈತ ಕುಟುಂಬದಲ್ಲಿ ಹುಟ್ಟಿದವರು. ನಮ್ಮ ದೇಶದಲ್ಲಿ ಹೆಚ್ಚು ಜನ ಬೇಸಾಯ ಕೂಲಿಗಾರರಿದ್ದಾರೆ. ಇಂಥವರಿಗೆ ಜಮೀನು ಕೊಡುವುದಕ್ಕೆ ಅರಣ್ಯಗಳಲ್ಲಿ ಸ್ಥಳವಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ನಮ್ಮ ದೇಶದಲ್ಲಿ ಎಷ್ಟು ಅರಣ್ಯವಿರಬೇಕೋ ಅಷ್ಟಿಲ್ಲ. ಅದು ಜಾಸ್ತಿಯಾಗಬೇಕಾಗಿದೆ. ಈ ದೃಷ್ಟಿಯಿಲ್ಲದೆ ರೈತರಿಗೆ ಜಮೀನು ಹಂಚುವುದು ಸರಿಯಲ್ಲ. ಸರಕಾರ ಈ ವಿಚಾರದಲ್ಲಿ ಒಂದು ನೀತಿಯನ್ನನುಸರಿಸಬೇಕು. ಈ ಬಗ್ಗೆ ಒಂದು ನಿರ್ಣಯ ತೆಗೆದುಕೊಂಡು ಆಯಾ ಸ್ಥಳದವರ ಒಂದೊಂದು ಸಮಿತಿ ನೇಮಕ ಮಾಡಿ, ಯಾವುದೇ ಒಂದು ಜಮೀನನ್ನು ಕೊಡುವುದರಿಂದ ಅದರ ಪಕ್ಕದ ಕಾಡಿಗೆ ಧಕ್ಕೆ ಬರುವುದಿಲ್ಲವಾದುದರಿಂದ ಆ ಜಮೀನು ಆಬಾದು ಮಾಡಿ ವ್ಯವಸಾಯಕ್ಕೆ ತರಬಹುದೆಂದು ಎಲ್ಲಿ ಅಭಿಪ್ರಾಯ ಬರುತ್ತದೆಯೋ ಅಂತಹ ಜಮೀನನ್ನು ವ್ಯವಸಾಯಕ್ಕೆ ಕೊಡಬಹುದೆಂಬ ನಿಲುವನ್ನು ತೆಗೆದುಕೊಂಡರೆ ಒಳ್ಳೆಯದು. ಈ ಬಗ್ಗೆ ವರದಿಯನ್ನು ತರಿಸಿಕೊಂಡು ಬೇಗ ಕಾರ್ಯಗತ ಮಾಡಬೇಕು. ಹಾಗೆ ಮಾಡಿದರೆ ವ್ಯವಸಾಯದಲ್ಲಿ ನಿರತರಾದವರು ಹಾಗೂ ಭೂಮಿ ಇಲ್ಲದೆ ರೈತರು ಮತ್ತು ಸಾಕಷ್ಟು ಭೂಮಿ ಇಲ್ಲದ ರೈತರು ಇವರಿಗೆ ಅನುಕೂಲವಾಗುತ್ತದೆ. ಅಲ್ಲದೆ ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ದೇಶದಲ್ಲಿ ಜನರ ಆರ್ಥಿಕ ಸುಧಾರಣೆಯಾಗುತ್ತದೆ. ಆದಷ್ಟು ಬೇಗ ಇದನ್ನು ಮಾಡಬೇಕೆಂದು ಸೂಚಿಸುತ್ತೇನೆ. ಅರಣ್ಯ

ಸಂಪತ್ತನ್ನು ಹೆಚ್ಚು ಮಾಡತಕ್ಕ ವಿಷಯದಲ್ಲಿ ಅರಣ್ಯ ಮಂತ್ರಿಗಳು ಹೇಗೆ ಆಸಕ್ತಿ ವಹಿಸಿದ್ದಾರೆಯೋ ಹಾಗೆಯೇ ಇಲಾಖೆಯವರೂ ಹೆಚ್ಚಿನ ಆಸಕ್ತಿ ವಹಿಸಿ ಅರಣ್ಯಗಳಿಂದ ಹೆಚ್ಚು ಉತ್ಪತ್ತಿ ಬರುವಂತೆ ಮಾಡಬೇಕು. ಈಗ ರಾಜ್ಯಕ್ಕೆ ಸಮನ್ವಯ ಕಾನೂನಾಗಿದೆ, ಅದಕ್ಕೆ ರಾಷ್ಟ್ರಾಧ್ಯಕ್ಷರೂ ಒಪ್ಪಿಗೆ ಕೊಟ್ಟಿದ್ದಾರೆ. ದೇಶದಲ್ಲೆಲ್ಲ ಒಂದೇ ರೀತಿಯ ನಿಯಮಗಳಿರಬೇಕು. ಇಲ್ಲಿ ರೈತರಿಗೆ ಎಷ್ಟು ಸಹಾಯ ಸಿಕ್ಕಬೇಕೋ ಅಷ್ಟು ಸಿಕ್ಕುತ್ತಿಲ್ಲ. ರೈತರಿಗೆ ಸೌದೆ ಸಿಕ್ಕುವುದು ಕಷ್ಟವಾಗಿದೆ. ಕೆಲವು ಕಡೆ ಕಾಡಿನಿಂದ ರೈತರು ಸೌದೆ ತರಬಹುದು, ನಮ್ಮ ಕಡೆ ಆ ರೀತಿ ಇಲ್ಲ. ಇದರಿಂದ ಕಷ್ಟವಾಗಿದೆ. ಒಂದೇ ನಿಯಮ ಎಲ್ಲ ಭಾಗದಲ್ಲಿಯೂ ಇರಲಿ, ರೈತರಿಗೆ ಹೆಚ್ಚು ಸಹಾಯವಾಗಲಿ ಎಂಬುದು ನನ್ನ ಅಭಿಪ್ರಾಯ. ಕಳ್ಳ ಸಾಗಾಣಿಕೆ ಸ್ವಲ್ಪ ಕಡಮೆಯಾಗಿದೆ ಎನಿಸುತ್ತದೆ. ಆದರೂ ಕೆಲವುಕಡೆ ನಡೆಯುತ್ತಿದೆ.

ಹೊಗೇನಕಲ್‌ನಲ್ಲಿ ಒಂದು ಟೂರಿಸ್ಟ್ ಕೇಂದ್ರವನ್ನು ಮಾಡಬೇಕು. ಹೀಗೆ ಮಾಡಿದರೆ ಕಾವೇರಿ ನದಿಯ ಮೂಲಕ ನಡೆಯುವ ಕಳ್ಳ ಸಾಗಾಣಿಕೆ ತಪ್ಪುತ್ತದೆ. ಮಂತ್ರಿಗಳು ಹೋಗಿ ನೋಡಬೇಕು. ಹೊಗೇನಕಲ್ ಯೋಜನೆ ಮಾಡತಕ್ಕ ಸ್ಥಳದಲ್ಲಿ ನಮ್ಮ ಕಾಡು ರಕ್ಷಣೆಯಾಗಬೇಕು. ಮೇಲಿಂದ ಕೆಳಗೆ ನೀರು ಹೋಗುತ್ತಿದೆ. ಅಲ್ಲಿ ನಾಟಾವನ್ನು ಮತ್ತು ಬೊಂಬುಗಳನ್ನು ನೀರಿಗೆ ಬಿಟ್ಟರೆ ನದಿಯಲ್ಲಿ ಮೆಟ್ಟೂರು ಕಡೆ ಹೋಗುತ್ತದೆ. ಅರಣ್ಯ ಅಧಿಕಾರಿಗಳು ಮತ್ತು ಅವರ ಕೈಕೆಳಗಿನ ಸಣ್ಣ ಅಧಿಕಾರಿಗಳಲ್ಲಿ ದೇಶ ಪ್ರೇಮ, ಕರ್ತವ್ಯನಿಷ್ಠೆ, ಕಾರ್ಯಶ್ರದ್ಧೆ ಹೆಚ್ಚಬೇಕೆಂದು ಆಶಿಸುತ್ತೇನೆ. ಅದಿಲ್ಲದಿದ್ದರೆ ಎಷ್ಟೇ ಕಠಿಣವಾದ ಕಾಯಿದೆಯಿದ್ದರೂ ಪ್ರಯೋಜನವಿಲ್ಲ, ಇದನ್ನು ತಡೆಗಟ್ಟುವುದು ಕಷ್ಟ. ಕಳ್ಳ ಸಾಗಾಣಿಕೆ ಮಾಡುವವರನ್ನು ಮೂರು ರೂಪಾಯಿಕೊಟ್ಟರೆ ಬಿಟ್ಟುಬಿಡುತ್ತಾರೆ. ಆದುದರಿಂದ ನೌಕರರಲ್ಲಿ ಪ್ರಾಮಾಣಿಕತೆ ದೇಶ ಪ್ರೇಮವಿಲ್ಲದಿದ್ದರೆ ಇದನ್ನು ಪೂರ್ಣವಾಗಿ ತಪ್ಪಿಸುವುದು ಕಷ್ಟ. ದಕ್ಷತೆಯನ್ನು ಹೆಚ್ಚುಮಾಡಿ ಅಪ್ರಾಮಾಣಿಕತೆಯನ್ನು ಕಡಮೆ ಮಾಡಿ ಆದಷ್ಟು ಮಟ್ಟಿಗೆ ಅರಣ್ಯಬಾಬಿನಿಂದ ಆದಾಯ ಹೆಚ್ಚುವಂತಾಗಬೇಕು. ರೈತರಿಗೆ ಅನುಕೂಲವಾಗಬೇಕು.

† ಶ್ರೀಮತಿ ರತ್ನಮ್ಮ ಮಾಧವರಾವ್ (ಶಿವಮೊಗ್ಗ).—ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಮುಂದಿರುವ ಬೇಡಿಕೆಗಳನ್ನು ಅನುಮೋದಿಸುತ್ತ ಇವುಗಳ ವಿಷಯವಾಗಿ ಒಂದೆರಡು ಮಾತುಗಳನ್ನು ಹೇಳಲಿಚ್ಛಿಸುತ್ತೇನೆ. ಸಮಾಜಕಲ್ಯಾಣ ಇಲಾಖೆಯ ವಿಷಯ ಯಾವಾಗ ಬಂದರೂ ಅದಕ್ಕೊದಗಿಸಿರುವ ಹಣ ಖರ್ಚಾಗದೆ ಲ್ಯಾಪ್ಸ್ ಆಯಿತು ಎಂಬ ಟೀಕೆಟಿಪ್ಪಣಿಗಳು ಬರುತ್ತವೆ. ಆದುದರಿಂದ ಹರಿಜನರಿಗೆ, ಹೆಣ್ಣು ಮಕ್ಕಳಿಗೆ ಒದಗಿಸಿರುವ ಹಣ ಇದುವರೆಗೆ ಎಷ್ಟು ಖರ್ಚುಮಾಡಿದ್ದಾರೆ ಎನ್ನುವುದನ್ನು ಉತ್ತರ ಹೇಳುವಾಗ ಹೇಳಬೇಕೆಂದು ಕೇಳಿಕೊಳ್ಳುತ್ತೇನೆ. ಈಗಿನ ಮಂತ್ರಿಗಳು ಅಧಿಕಾರಕ್ಕೆ ಬಂದಮೇಲೆ ಏನೇನು ಕಾರ್ಯಗಳನ್ನು ಮಾಡಿದ್ದಾರೆ, ಎಷ್ಟು ಹಣ ಲ್ಯಾಪ್ಸ್ ಆಗಿವೆ ಎನ್ನುವುದನ್ನು ಹೇಳಬೇಕು. ಮೂರನೆಯ ಯೋಜನೆಯಲ್ಲಿ ಹತ್ತು ಲಕ್ಷ ರೂಪಾಯಿ ಒದಗಿಸಿದ್ದುದರಲ್ಲಿ ಈ ಸಾರಿ ಎಷ್ಟು ಖರ್ಚಾಯಿತು, ಎಷ್ಟು ಲ್ಯಾಪ್ಸ್ ಆಯಿತು ಎನ್ನುವುದನ್ನು ಹೇಳಬೇಕು. ಎಷ್ಟೋ ಜನರು ಹೆಣ್ಣು ಮಕ್ಕಳ ಸಂಸ್ಥೆಗಳನ್ನು ಪ್ರಾರಂಭ ಮಾಡಿ ಸಹಾಯ ಕೇಳುತ್ತಿದ್ದಾರೆ, ಅವರಿಗೆ ಸಹಾಯ ಕೊಡಬೇಕು. ಇದುವರೆಗೆ ಇದಕ್ಕಾಗಿ ಎಷ್ಟು ಹಣ ಒದಗಿಸಿದ್ದಾರೋ ಗೊತ್ತಿಲ್ಲ. ಎಷ್ಟೋ ಜನ ಹೆಣ್ಣು ಮಕ್ಕಳು ಅನಾಥರಾಗಿ ಬೀದಿಯಲ್ಲಿ ಅಲೆಯುತ್ತಿದ್ದಾರೆ. ಇಂಥವರಿಗಾಗಿ ಆಶ್ರಮಗಳು ಮತ್ತು ಶಾಲೆಗಳನ್ನು ಮಾಡಿದರೆ ಅವರಿಗೆ ಸಹಾಯ ಮಾಡುತ್ತೇವೆ ಎಂದು ಹೇಳಿ ಹಳ್ಳಿಗಳಲ್ಲಿ ಹೆಣ್ಣು ಮಕ್ಕಳಿಗೆ ಅನುಕೂಲ ಮಾಡಬೇಕೆಂದು ಹೇಳುತ್ತೇನೆ. ಹರಿಜನರು, ಗಿರಿಜನರು, ಹಿಂದುಳಿದವರು ಯಾವ ಜನರಿಗೆ ಬೇಕಾದರೂ ಸಹಾಯ ಮಾಡಿ, ವೀಕರ್ ಸೆಕ್ಷನ್ಸ್‌ಗೆ, ಎಂದರೆ ದಲಿತ ವರ್ಗದವರಿಗೆ ಹೆಚ್ಚು ಹಣವನ್ನು ಒದಗಿಸಿ ಅದು ಲ್ಯಾಪ್ಸ್ ಆಗದಂತೆ ಸದ್ವಿನಿಯೋಗ ಮಾಡಬೇಕು. ಸೋಷಿಯಲ್ ವೆಲ್‌ಫೇರ್ ಬೋರ್ಡಿನಿಂದ ಹಳ್ಳಿಗಳಿಗೆ ಕೆಲವು ಬಾಬುಗಳಿಗೆ ಗ್ರ್ಯಾಂಟ್ ಕೊಟ್ಟು ಸಂಸ್ಥೆಗಳನ್ನು ನಡೆಸುತ್ತಿದ್ದಾರೆ, ಅವು ಹೇಗೆ ನಡೆಯುತ್ತವೆ, ಹಣ ಸದ್ವಿನಿಯೋಗವಾಗುತ್ತಿದೆಯೆ ಎನ್ನುವುದನ್ನು ನೋಡಬೇಕು. ಅಲ್ಲದೆ ಸರಕಾರದಿಂದ ಅವರಿಗೆ ಹಣ ಸಕಾಲದಲ್ಲಿ ಬರುವುದಿಲ್ಲವೆಂದು ಹೇಳುತ್ತಿದ್ದಾರೆ, ಅದನ್ನು ನೋಡಿ ಸರಿಪಡಿಸಬೇಕು. ಈ ಮಂತ್ರಿಗಳು ಬಂದ ಮೇಲೂ ಈ ಇಲಾಖೆಯಲ್ಲಿ ಕೆಲಸಕಾರ್ಯಗಳು ಸರಿಯಾಗಿ ಆಗಲಿಲ್ಲವೆಂದು ಹೇಳಿದರು. ಈ ಇಲಾಖೆಯಲ್ಲಿ ಆರ್ಥಿಕ, ಶೈಕ್ಷಣಿಕ ಮತ್ತು ಸಾಮಾಜಿಕ ಎಂದು ಮೂರು ಭಾಗವಿದೆ. ಹಣವನ್ನು ಇಂಥಾದ್ದಕ್ಕೆ ಎಂದು ಕೊಡುತ್ತಾರೆ ; ಇದರಲ್ಲಿ ಹೆಚ್ಚು ಕಡಮೆಯಾಗಿ ಒಂದಕ್ಕೆ ಕೊಟ್ಟಿರುವುದನ್ನು ಬೇರೆ ಭಾಗಕ್ಕೆ ಉಪಯೋಗ ಮಾಡುವುದಕ್ಕೆ ಅವಕಾಶವಿಲ್ಲ. ಇದಕ್ಕೆ ಅವಕಾಶ ಕೊಡಬೇಕು. ಹೋದ ಸಾರಿ ತುರ್ತುಪರಿಸ್ಥಿತಿ ಎಂದು ಈ ಇಲಾಖೆಗೆ ಕೊಡುವ ಹಣವನ್ನು ಕಡಮೆ ಮಾಡಿದುದರಿಂದ ಗೃಹವಸತಿ ನಿರ್ಮಾಣ, ವಿದ್ಯಾರ್ಥಿವೇತನ, ಮತ್ತು ಚೈಲ್ಡ್ ವೆಲ್‌ಫೇರ್ ಕೇಂದ್ರಗಳ ಕೆಲಸಕಾರ್ಯಗಳು ನಿಂತುಹೋಗಿವೆ. ಈ ವರ್ಷ ಸಾಧ್ಯವಾದರೆ ಇದನ್ನೆಲ್ಲ ತರಿಸಿ ಕೊಡುವ ಏರ್ಪಾಡು ಮಾಡಬೇಕು. ಹಾಸ್ಟೆಲುಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳು ಬಹಳ ಜನರು ಪರೀಕ್ಷೆಗಳಲ್ಲಿ ಅನುತ್ತೀರ್ಣರಾಗಿದ್ದಾರೆ, ಇದಕ್ಕೇನಾದರೂ ಶಿಕ್ಷಣದ ಏರ್ಪಾಡು ಮಾಡಿ ಸರಿಪಡಿಸ

(ಶ್ರೀಮತಿ ರತ್ನಮ್ಮ ಮಾಧವರಾವ್)

ಬೇಕು. ಸಮಿತಿಗಳನ್ನು ಪ್ರತಿವರ್ಷವೂ ರಚನೆ ಮಾಡಬೇಕು. ಒಂದೇ ಸಮಿತಿ ಇರುತ್ತದೆ, ಇದು ಒಳ್ಳೆಯದಲ್ಲ.

ಹರಿಜನರ ಸಹಕಾರ ಸಂಘಗಳ ಮೂಲಕ ಹಣ ಕೊಡುವುದಕ್ಕೆ ಏರ್ಪಾಡು ಮಾಡಿದ್ದಾರೆ. ಯಾವ ಸಹಕಾರ ಸಂಘವನ್ನು ಕೇಳಿದರೂ ತಮಗೆ ಬರಬೇಕಾದ ಹಣ ಬರಲಿಲ್ಲವೆಂದು ಹೇಳುತ್ತಾರೆ. ಇದಕ್ಕೆ ಸರಿಯಾದ ವ್ಯವಸ್ಥೆ ಮಾಡಿ ಸಕಾಲದಲ್ಲಿ ಒದಗಿಸಬೇಕು. ಕುರಿ, ದನ, ಕೋಳಿ ಕೊಂಡುಕೊಳ್ಳುವುದಕ್ಕೆ ನಾಲ್ಕು ಸಾವಿರ ರೂಪಾಯಿ ಗ್ರಾಂಟು ಕೊಡುತ್ತಾರೆ, ಇದು ಯಾರಿಗೆ ಬರುತ್ತದೆಯೋ ಯಾರಿಗೆ ಇಲ್ಲವೋ ಗೊತ್ತಿಲ್ಲ. ಅಂತೂ ಕುರಿ, ದನ ಯಾವುದೂ ಸರಿಯಾಗಿ ಬರುವುದಿಲ್ಲ. ಇದಕ್ಕೆ ಬೇರೆ ವ್ಯವಸ್ಥೆ ಮಾಡುವುದು ಒಳ್ಳೆಯದು. ವ್ಯವಸಾಯ ಕಾಲೊನಿಗಳನ್ನು ಮಾಡಿದರೆ ಒಳ್ಳೆಯದೆಂದು ನನ್ನ ಸಲಹೆ.

ಇನ್ನೊಂದು ವಿಷಯ. ಹೆಣ್ಣು ಮಕ್ಕಳಿಗೆ ಎಲ್ಲ ಕಾರ್ಯ ಕ್ಷೇತ್ರದಲ್ಲಿಯೂ ಸರಿಯಾಗಿ ಪ್ರಾತಿನಿಧ್ಯ ಕೊಡಬೇಕು. ನಮ್ಮ ಮಂತ್ರಿಮಂಡಳದಲ್ಲಿ 28 ಜನ ಮಂತ್ರಿಗಳಿದ್ದಾರೆ. ಇದರಲ್ಲಿ ಒಂದೂವರೆ ಸ್ಥಾನ ಮಹಿಳೆಯರಿಗೆ ಕೊಟ್ಟಿದ್ದಾರೆ. ಇದು ಬಹಳ ಕಡಿಮೆ. ಇನ್ನೊಂದು ಮಂತ್ರಿ ಸ್ಥಾನವನ್ನು ಮಹಿಳೆಯರಿಗೆ ಕೊಡಬೇಕಾಗಿತ್ತು ಎಂದು ಅನಿಸುತ್ತದೆ. ಸೋಷಿಯಲ್ ವೆಲ್‌ಫೇರ್ ಸಚಿವೆಯರು ಚೆನ್ನಾಗಿ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಿದ್ದಾರೆ. ಈ ಇಲಾಖೆಯಲ್ಲಿ ಕೆಲಸ ಹೆಚ್ಚಾಗಿದೆ. ಇನ್ನೊಂದು ಸ್ಥಾನ ಮಹಿಳೆಯರಿಗೆ ಕೊಡಬೇಕೆಂದು ಸೂಚಿಸುತ್ತೇನೆ.

ಹರಿಜನರ ಅಭಿವೃದ್ಧಿಗಾಗಿ ಒದಗಿಸಿದ ಹಣ ಕಡಿಮೆಯಾಗಿದೆ. ಇನ್ನೂ ಹೆಚ್ಚು ಹಣ ಹರಿಜನರ ಅಭಿವೃದ್ಧಿಗೆ ಒದಗಿಸಿ ಹರಿಜನ ಮಕ್ಕಳಿಗೆ ಒಳ್ಳೇ ಬಟ್ಟೆ ಒದಗಿಸುವ ಏರ್ಪಾಡು ಮಾಡಬೇಕಾದುದು ಅಗತ್ಯ. ಇದಕ್ಕೆ ಎಲ್ಲರೂ ಬೆಂಬಲ ಕೊಡುತ್ತಾರೆಂದು ಧೈರ್ಯವಾಗಿ ಹೇಳಬಯಸುತ್ತೇನೆ. ಆದುದರಿಂದ ಇದಕ್ಕೆ ಹೆಚ್ಚು ಗಮನ ಕೊಟ್ಟು ಧೈರ್ಯದಿಂದ ಕೆಲಸ ಮಾಡಬೇಕು.

ಇನ್ನೊಂದು ವಿಚಾರ. ಅನೇಕ ಕಡೆ ಕಾಡು ನಾಶವಾಗುತ್ತಿದೆ. ಕಾಡಿನಲ್ಲಿ ವಾಸಿಸುವ ಕಾಡು ಪ್ರಾಣಿಗಳನ್ನು ಓಡಿಸುತ್ತಿದ್ದಾರೆ. ಇಂಥ ಕಾಡು ಪ್ರಾಣಿಗಳನ್ನು ಸಂರಕ್ಷಣೆ ಮಾಡುವುದು ಅಗತ್ಯ. ಮಲೆನಾಡು ಪ್ರದೇಶದಲ್ಲಿ ಬೇಕಾದಷ್ಟು ಕಾಡು ಇದೆ. ಕಾಡು ಪ್ರಾಣಿಗಳ ಸಂರಕ್ಷಣೆ ಮಾಡುವುದಲ್ಲದೆ ಮಲೆನಾಡು ಅಭಿವೃದ್ಧಿ ಬಗ್ಗೆ ಹೆಚ್ಚಿನ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಅಲ್ಲದೆ ವ್ಯವಸಾಯಕ್ಕೆ ಹೆಚ್ಚು ಸೌಲಭ್ಯ ಒದಗಿಸಿಕೊಟ್ಟರೆ ಮಲೆನಾಡು ಪ್ರದೇಶದಲ್ಲಿ ಜನರಿಗೆ ಹೆಚ್ಚು ಲಾಭವಾಗುತ್ತದೆಂದು ಹೇಳುತ್ತೇನೆ. ನನಗೆ ಮಾತನಾಡಲು ಅವಕಾಶ ಕೊಟ್ಟಂಥ ಅಧ್ಯಕ್ಷರಿಗೆ ವಂದನೆ ಅರ್ಪಿಸಿ ನಾನು ನನ್ನ ಮಾತು ಮುಗಿಸುತ್ತೇನೆ.

ಶ್ರೀ ಎಸ್. ಸುಬ್ಬಯ್ಯ ನಾಯ್ಕ (ಸೂಳ್ಯ).—ಸನ್ಮಾನ್ಯ ಅಧ್ಯಕ್ಷರೇ, ಈಗ ಸಭೆಯ ಮುಂದೆ ಬಂದಿರುವ ಎಲ್ಲ ಬೇಡಿಕೆಗಳನ್ನು ನಾನು ಸಂಪೂರ್ಣವಾಗಿ ಸಮರ್ಥಿಸುತ್ತೇನೆ. ಷೆಡ್ಯೂಲ್ಡ್ ಕಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಬಗ್ಗೆ ಕೆಲವು ಮಾತು ಕೇಳಲು ಬಯಸುತ್ತೇನೆ. ಅನೇಕ ವರ್ಷಗಳಿಂದ ಹರಿಜನರ ಅಭಿವೃದ್ಧಿಗಾಗಿ ಸರಕಾರ ಹಣ ಕೊಡುತ್ತಿದ್ದಾರೆ. ಈ ಕೆಲಸಕ್ಕೆ ಮಹಾತ್ಮಾ ಗಾಂಧೀಜಿಯವರ ಆಶೀರ್ವಾದ ಇದೆ. ಆದರೂ ಕೂಡ ಅವರ ಉದ್ಧಾರದ ಕಾರ್ಯದಲ್ಲಿ ನವ ಚೈತನ್ಯ ಉಂಟಾಗಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ಲಕ್ಷಾಂತರ ರೂಪಾಯಿ ಕೊಟ್ಟರೂ ಕೂಡ ನಿರೀಕ್ಷಿತ ಫಲ ದೊರಕಲಿಲ್ಲ. ಈ ಬಗ್ಗೆ ಯೋಚಿಸಿ ಇದಕ್ಕೆ ಗಮನ ಕೊಡುವುದು ಅಗತ್ಯ. ಹರಿಜನರು ಹಿಂದುಳಿದವರು ಗಿರಿಜನರು ಇನ್ನೂ ಹಿಂದುಳಿದವರೇ ಆಗಿದ್ದಾರೆ. ಅವರು ಮುಂದೆ ಬರುವುದಕ್ಕೆ ಅವಕಾಶ ಇಲ್ಲ. ಮುಖ್ಯವಾಗಿ ಅವರಿಗೆ ವಿದ್ಯಾಭ್ಯಾಸದ ಸೌಕರ್ಯ ಒದಗಿಸಬೇಕಾದುದು ಬಹಳ ಅಗತ್ಯ. ಇದಲ್ಲದೆ ಭೂಮಿ ಒದಗಿಸಿ ವ್ಯವಸಾಯ ಮಾಡಲು ಸಹಾಯ ಮಾಡಿ ಅವರ ಆರ್ಥಿಕ ಸ್ಥಿತಿ ಸುಧಾರಿಸಬೇಕು. ಗಿರಿಜನರಿಗಾಗಿ ರೆಸಿಡೆನ್ಸಿಯಲ್ ಸ್ಕೂಲ್ಸ್ ಹೆಚ್ಚು ಮಾಡಬೇಕು. ಗಿರಿಜನರಲ್ಲಿ ಅನೇಕ ವರ್ಗಗಳಿವೆ. ಆರ್ಥಿಕ ಪರಿಸ್ಥಿತಿ ಹೇಗಿದೆ ಅವರು ಎಷ್ಟು ಮುಂದೆ ಬಂದಿದ್ದಾರೆ ಎಂಬುದನ್ನು ಕಂಡು ಹಿಡಿಯಲು ಯಾವ ಲೆಕ್ಕಾಚಾರವಿಲ್ಲ. ಆದುದರಿಂದ ಸಾರ್ವಜನಿಕರು, ಅಧಿಕಾರಿಗಳು ಹಾಗು ಸರಕಾರ ಇದಕ್ಕೆ ಹೆಚ್ಚು ಗಮನಕೊಡಬೇಕೆಂದು ಹೇಳುತ್ತೇನೆ.

ಗಿರಿಜನರ ಅಭಿವೃದ್ಧಿಗೋಸ್ಕರ ಕೇಂದ್ರ ಸರಕಾರದವರು ಅನೇಕ ಸ್ಕೀಮುಗಳನ್ನು ಮಾಡಿದ್ದಾರೆ ಮತ್ತು ಅವುಗಳನ್ನು ಜಾರಿಗೆ ಕೊಡಬೇಕೆಂದು ಹೇಳಿದ್ದಾರೆ. ಎಷ್ಟೋ ಸ್ಕೀಮುಗಳನ್ನು ನಮ್ಮ ರಾಜ್ಯದಲ್ಲಿ ಜಾರಿಗೆ ಕೊಟ್ಟಿಲ್ಲ. ನಮ್ಮ ರಾಜ್ಯಕ್ಕೆ ಗಿರಿಜನರಿಗಾಗಿ ಎರಡು ಆಡ್‌ಹಾಕ್ ಬ್ಲಾಕ್ಸ್ ಮಾತ್ರ ಕೊಟ್ಟಿದ್ದಾರೆ. ಒಂದು ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆಯಲ್ಲದೆ, ಇನ್ನೊಂದು ಕೊಡಗಿನಲ್ಲಿ ನಾಗರಹೊಳೆಯಲ್ಲಿ ಇದೆ. ಹೆಚ್ಚು ಗಿರಿಜನರು ಇರುವ ಪ್ರದೇಶಕ್ಕೆ ಇದನ್ನು ಕೊಡಬೇಕೆಂದು ಇದ್ದರೂ ಕೂಡ, ಹಾಗೆ ಕೊಟ್ಟಿಲ್ಲ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅವರ ಜನ ಸಂಖ್ಯೆ ಹೆಚ್ಚಿದೆ.

ದಕ್ಷಿಣ ಕನ್ನಡ ಜಿಲ್ಲೆಗೆ ಒಂದು ಬ್ಲಾಕ್ ಕೊಡಬೇಕಾಗಿತ್ತು. ಮೈಸೂರಿನಲ್ಲಿ 18,000 ಜನ ಸಂಖ್ಯೆ ಇದೆ, ಕೊಡಗಿನಲ್ಲಿ 22,000 ಇದೆ, ಸೌಥ ಕೆನರಾದಲ್ಲಿ 49,000 (ನಲ್ವತ್ತೊಂಭತ್ತು ಸಾವಿರ) ಜನ ಸಂಖ್ಯೆ ಇದೆ. ಆದುದರಿಂದ ನಮ್ಮ ಜಿಲ್ಲೆಗೆ ಒಂದು ಬ್ಲಾಕ್ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಮುಖ್ಯವಾಗಿ ಹಿಂದುಳಿದವರಿಗೆ ಭೂಮಿ ಕೊಟ್ಟು ವ್ಯವಸಾಯಕ್ಕೆ ಹೆಚ್ಚು ಸೌಲಭ್ಯ ಒದಗಿಸಬೇಕು. ಇದರಿಂದ ಅವರ ಆರ್ಥಿಕ ಪರಿಸ್ಥಿತಿ ಸುಧಾರಣೆಯಾಗುವುದಲ್ಲದೆ ಹೆಚ್ಚು ಆಹಾರ ಉತ್ಪತ್ತಿಯಾಗಿ ದೇಶಕ್ಕೂ ಒಳ್ಳೆಯದಾಗುತ್ತದೆ. ಜನತೆಗೂ ಲಾಭ ಉಂಟಾಗಲು ಅನುಕೂಲವಾಗುತ್ತದೆ. ಆದುದರಿಂದ ಇದಕ್ಕೆ ಹೆಚ್ಚು ಗಮನ ಕೊಡಬೇಕಾದುದು ಅಗತ್ಯ. ಜಾಯಿಂಟ್ ಫಾರ್ಮಿಂಗ್ ಸೊಸೈಟೀಜ ಮಾಡಬೇಕೆಂಬುದು ಸರಕಾರದ ಧೋರಣೆಯಾಗಿದೆ. ಜಾಯಿಂಟ್ ಫಾರ್ಮಿಂಗ್ ಕೋ-ಆಪರೇಟಿವ್ ಸೊಸೈಟೀಜ ರಚನೆ ಮಾಡುವುದನ್ನು ಜಾರಿಗೆ ತರುವುದರಿಂದ ಜನರಿಗೆ ಅನುಕೂಲವಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ.

Mr SPEAKER.—The House will now stand adjourned to meet again at Twelve O'Clock tomorrow.

The House adjourned at Six of the Clock to meet again at Twelve of the Clock on Tuesday, the 24th March 1964.

WD 2601—GPB—900—10-6-64